ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕುಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಕಿರುಪ್ರಬಂಧ)



ನೋಂದಣಿ ಸಂಖ್ಯೆ: ೧೬೦೧೧೦೫೦೩೦೦೦೧೬

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೬-೧೭

ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕುಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಕಿರುಪ್ರಬಂಧ)

ನೋಂದಣಿ ಸಂಖ್ಯೆ : ೧೬೦೧೦೫೦೩೦೦೦೧೬

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ



ಗಂಗಧರ ಮಡಿವಾಳೇಶ್ವರ ತುರಮರಿ
(೧೮೨೭-೧೮೭೭)

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ ಮತ್ತು ಸ್ವರೂಪ

ಭಾರತವನ್ನು ಒಂದು ವಸಾಹತು ಪ್ರದೇಶವನ್ನಾಗಿ ಮಾಡಿಕೊಂಡ ಬ್ರಿಟೀಷರು ನಮ್ಮ ದೇಶದ ಆಡಳಿತ ಚುಕ್ಕಾಣಿಯನ್ನು ಹಿಡಿದುಕೊಂಡು ಭಾರತದ ವಿಕೇಂದ್ರಿಕೃತವಾದ ಅಧಿಕಾರ ವ್ಯವಸ್ಥೆಯನ್ನು ಸಮಗ್ರವಾಗಿ ಕೇಂದ್ರೀಕರಣ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ಕಾನೂನು ಕಟ್ಟಳೆಗಳನ್ನು ಜಾರಿಗೆ ತರುವ ಮೂಲಕ ಭಾರತೀಯರನ್ನು ಸರ್ವವಿಧದಿಂದಲೂ ಶೋಷಣೆಗೈಯುತ್ತಿದ್ದರು. ಇದರಿಂದ ಬೇಸತ್ತ ಭಾರತೀಯರು ತಮ್ಮ ಅಸ್ತಿತ್ವವನ್ನು ಪುನರ್ ಸ್ಥಾಪಿಸಲು ಬ್ರಿಟೀಷರ ಕಬಂಧ ಬಾಹುಗಳಿಂದ ಹೊರಬರಲು ಹವಣಿಸುತ್ತಿದ್ದರು.

ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ದೇಶದ ಜನತೆಯಲ್ಲಿ ರಾಷ್ಟ್ರೀಯತೆ ರಾಷ್ಟ್ರೀಯ ಪ್ರೇಮ ಮತ್ತು ನಮ್ಮ ದೇಶದ ಪ್ರಾಚೀನತೆ–ಸಂಸ್ಕೃತಿ–ಸಂಪನ್ನತೆ, ಭವ್ಯತೆಯ ಬಗ್ಗೆ ತಿಳುವಳಿಕೆ ನೀಡಿ ಜನರಲ್ಲಿ ಜಾಗೃತಿಯನ್ನು ಮೂಡಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕುವಂತೆ ಮಾಡಿದರು. ಈ ಸ್ವಾತಂತ್ರ್ಯ ಹೋರಾಟದ ಗಾಳಿ ಕನ್ನಡ ನಾಡಿಯಲ್ಲಿಯೂ ಬೀಸಿತು. ಭಾರತ ಸ್ವತಂತ್ರ ಭಾರತವಾಯಿತು. ಆದರೆ ಪ್ರಾದೇಶಿಕ ಭಾಷಾ ಪ್ರಾಂತ್ಯಗಳು ಹರಿದು ಹಂಚಿ ಹೋಗಿದ್ದವು. ಹೀಗೆ ಹಂಚಿಹೋದ ನಾಡನ್ನು ಒಂದುಗೂಡಿಸಲು ಕರ್ನಾಟಕದಲ್ಲಿ ಇತಿಹಾಸಕಾರರು, ಸಾಹಿತಿಗಳು, ಸಮಾಜ ಸುಧಾರಕರು, ರಾಜಕೀಯ ಧುರೀಣರು ಕನ್ನಡ ನಾಡು–ನುಡಿಗೆ ಸಂಬಂಧಿಸಿದ ಚಿಂತನೆಗಳನ್ನು ಜನರಲ್ಲಿ ಬಿತ್ತಿದರು. ಹಾಗೂ "ಬ್ರಿಟೀಷರ ಅಧಿಕಾರಕ್ಕೆ ಒಳಗಾದ ಎಲ್ಲ ಕನ್ನಡ ಊರು, ತಾಲ್ಲೂಕು, ಜಿಲ್ಲೆಗಳನ್ನು ಒಟ್ಟುಗೂಡಿಸಿ ಒಂದು ರಾಜಕೀಯ ವಿಭಾಗವನ್ನು ಮಾಡಿ ಅದಕ್ಕೆ ಕರ್ನಾಟಕ ಪ್ರಾಂತ್ಯವೆಂದು ಕರೆಯುವ ಬಗ್ಗೆ ಸರ್ಕಾರಕ್ಕೆ ಬಿನ್ನಹ ಮಾಡಬೇಕು.

ಉದಾಹರಣಾರ್ಥ ಸೊಲ್ಲಾಪುರ ಜಿಲ್ಲೆಯ ಕೆಲವು ಭಾಗ ಕನ್ನಡ ಭಾಗವಿರುತ್ತದೆ. ಮದ್ರಾಸ್ ಇಲಾಖೆಯಲ್ಲಿ ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳು ಪೂರ್ಣ ಕನ್ನಡವಿದ್ದು ಕಡಪಾ, ಕರ್ನೂಲ, ಅನಂತಪುರ ಮುಂತಾದ ಜಿಲ್ಲೆಗಳಲ್ಲಿ ಎಷ್ಟೋ ಹಳ್ಳಿಗಳೂ, ತಾಲ್ಲೂಕುಗಳೂ ಕನ್ನಡ ಇರುತ್ತದೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಕರ್ನಾಟಕ ಇಲಾಖೆ ಅಥವಾ ಪ್ರಾಂತವೆಂಬ ರಾಜಕೀಯ ವಿಭಾಗವನ್ನು ಮಾಡಿದರೆ ಕನ್ನಡಿಗರ ಐಕ್ಯಕ್ಕೂ ಹಿತಕ್ಕೂ ಬೆಳವಣಿಗೆಗೂ ಅನುಕೂಲವಾಗುವುದೆಂಬ ದಿಸೆಯಲ್ಲಿ ಅನೇಕ ಸಂಘ ಸಂಸ್ಥೆಗಳು ಅಹರ್ನಿಶವಾಗಿ ಹೋರಾಟ ನಡೆಸಿದವು.[೧]

ಕನ್ನಡಿಗರಲ್ಲಿ ಕರ್ನಾಟಕ ಏಕೀಕರಣದ ಪರಿಕಲ್ಪನೆ ಮೂಡಿದುದು ಬ್ರಿಟೀಷರ ಆಗಮನದ ನಂತರವೇ ಅದಕ್ಕೂ ಪೂರ್ವದಲ್ಲಿ ಭಾರತದಲ್ಲಿ ಅಖಂಡ ಕರ್ನಾಟಕ ಇರಲಿಲ್ಲವಾದರೂ ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಗಳು ಶ್ರೀಮಂತವಾಗಿದ್ದು, ನಂತರದ ದಿನಗಳಲ್ಲಿ ಅಂದರೆ "ಕ್ರಿ.ಶ. ೧೫೬೫ರಲ್ಲಿ ಆಗ ತಾಳಿಕೋಟೆ ಯುದ್ಧವು ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಷಯಗಳಲ್ಲಿ ಒಂದು ನಿರ್ಣಾಯಕ ಸೋಲು ಮತ್ತು ಆದಿಲ್‌ಶಾಹಿ ಬಹಮನಿ ಸುಲ್ತಾನರ ಗೆಲುವುಗಳು ಕನ್ನಡಿಗರ ಹಲವು ಭಾಷಿಕ ಸಮಸ್ಯೆಗಳಿಗೆ ನಾಂದಿ ಹಾಡಿದವು.

ವಿಜಯನಗರದ ಅವನತಿಯ ಅನಂತರ ಕನ್ನಡ ಭೂಪ್ರದೇಶಗಳು ಹಲವು ಆಡಳಿತ ಘಟಕಗಳಲ್ಲಿ ಹಂಚಿ ಹೋದವು ಈ ಘಟಕಗಳಲ್ಲಿ ಪ್ರಭುಗಳಾಗಿದ್ದವರು ತಮ್ಮ ಸೀಮಿತ ನೆಲೆಯಲ್ಲಿ ಕನ್ನಡಕ್ಕೆ ಪೋಷಕವಾಗಿಯೇ ನಿಂತರು.

ವಿಜಯನಗರ ಈ ಘಟಕಗಳಲ್ಲಿ ಪ್ರಭುಗಳಾಗಿದ್ದವರು ತಮ್ಮ ಸೀಮಿತ ನೆಲೆಯಲ್ಲಿ ಕನ್ನಡದಲ್ಲಿ ಪೋಷಕವಾಗಿಯೇ ನಿಂತರು. ಆದರೆ ಈ ಸಂದರ್ಭದ ರಾಜಕೀಯ ಸ್ಥಿತ್ಯಂತರಗಳಲ್ಲಿ ಆದಿಲ್‌ಶಾಹಿ ಮತ್ತು ಬಹಮನಿ ಸುಲ್ತಾನರು ತಮ್ಮ ಸೇನೆಗಳಲ್ಲಿ ಮರಾಠ ಸೈನಿಕರನ್ನು ಹೆಚ್ಚು ಹೆಚ್ಚು ಸೇರಿಸಿಕೊಳ್ಳಲಾರಂಭಿಸಿದರು. ಪರಿಣಾಮವಾಗಿ ಇಂದಿನ ಉತ್ತರ ಕರ್ನಾಟಕ ಹಾಗೂ ಸೊಲ್ಲಾಪುರ, ಕೊಲ್ಲಾಪುರ, ಸಾಂಗ್ಲಿ ಭಾಗಗಳಲ್ಲಿ ಮರಾಠಿಯರು ಹೆಚ್ಚು ಪ್ರತಿಷ್ಠಿತರಾಗತೊಡಗಿದರು. ಇಲ್ಲಿ ಉರ್ದು ಮತ್ತು ಮರಾಠಿ ಭಾಷೆಗಳು ಹೆಚ್ಚು ಪ್ರಚಲಿತಗೊಂಡು ಇವುಗಳ ಮಧ್ಯೆ ಉಸಿರಾಡಬೇಕಾದ ಸ್ಥಿತಿ ಕನ್ನಡಕ್ಕೆ ಒದಗಿತು.

ವಿಜಯನಗರದ ಅವನತಿಯ ಅನಂತರ ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳನ್ನು ರಾಜಸತ್ತಾತ್ಮಕ ನೆಲೆಯಲ್ಲಿ ಒಂದು ಗೂಡಿಸಲು ಪ್ರಯತ್ನ ಪಟ್ಟವರಲ್ಲಿ ಹೈದರಾಲಿ ಮತ್ತು ಟಿಪ್ಪು ಸುಲ್ತಾರು ಮುಖ್ಯ. ಆದರೆ ಇವರ ಸಾಮರ್ಥ್ಯದ ಹಿನ್ನೆಲೆಯಲ್ಲಿ ಅದು ಮೈಸೂರು ಏಕೀಕರಣವೇ ಆಗಿತ್ತು. ಈ ಹಿನ್ನೆಲೆಯಲ್ಲಿ ಕೆಳದಿ ಮೊದಲಾದ ಸಂಸ್ಥಾನಗಳನ್ನು ಸೇರಿಸಿಕೊಂಡು ಇಂದಿನ ಮೈಸೂರು ಕರ್ನಾಟಕವನ್ನು ಬಹುಪಾಲು ಅಂದೇ ರೂಪಿಸಿದರು. ಇವರು ಕೂಡ ತಮ್ಮ ಸೈನ್ಯಗಳಲ್ಲಿ ಮರಾಠಿ ಭಾಷಿಕರನ್ನು ಹೆಚ್ಚು ಸಂಖ್ಯೆಯಲ್ಲಿ ಸೇರಿಸಿಕೊಳ್ಳುತ್ತಿದ್ದರು."[೨]

ಅನಂತರದಲ್ಲಿ ಬಂದ ಬ್ರಟೀಷರ ವಿರುದ್ಧದ ಭಾರತೀಯ ದಂಗೆಗಳನ್ನು ಬ್ರಿಟೀಷರು ತಮ್ಮ ಒಳಸಂಚಿನಿಂದ ಹಾಗೂ ತಮ್ಮ ಸುಸಜ್ಜಿತವಾದ, ವ್ಯವಸ್ಥಿತವಾದ ಸೈನ್ಯದಿಂದ ಮಟ್ಟಹಾಕಿ ದಂಗೆಗಳನ್ನು ಅಡಗಿಸಿ ಕರ್ನಾಟಕವನ್ನೊಳಗೊಂಡು ಭಾರತದ ಬಹುಭಾಗಗಳನ್ನು ಆಕ್ರಮಿಸಿಕೊಂಡು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ವಿವಿಧ ಆಡಳಿತ ಘಟಕಗಳಲ್ಲಿ ಅನೇಕ ಸಂಸ್ಥಾನಗಳನ್ನು ಹರಿದು ಹಂಚಿದರು. "ಅವುಗಳೆಂದರೆ

೧. ಮುಂಬೈ ಕರ್ನಾಟಕ

೨. ಮೈಸೂರು ಸಂಸ್ಥಾನ

೩. ಹೈದರಾಬಾದ್ ಕರ್ನಾಟಕ

೪. ಮದರಾಸು ಕರ್ನಾಟಕ

೫. ಕೊಡಗು ಪ್ರಾಂತ"[೩]

"ಹೀಗೆ ಆಡಳಿತ-ಶಿಕ್ಷಣ-ಕನ್ನಡ ಮೊದಲಾದ ಸಂಗತಿಗಳು ಪರಸ್ಪರ ಪೂರಕವಾಗಿ ಸಂಕೀರ್ಣಾವಸ್ಥೆಯನ್ನು ತಲುಪುತ್ತಿದ್ದ ೧೯ನೆಯ ಶತಮಾನದ ದಿನಗಳಲ್ಲಿ ಕನ್ನಡಿಗರು ಇಂತಹ ಹಲವು ಆಡಳಿತ ಘಟಕಗಳಲ್ಲಿ ಹಂಚಿ ಹೋದುದು ಆಡಳಿತಾತ್ಮಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಹಲವು ಮುಖ್ಯ ತೊಂದರೆಗಳನ್ನು ಅನುಭವಿಸುವಂತಾಯಿತು."[೪]

ಅಲ್ಲದೆ ಇವರು ಸಂಸ್ಥಾನಗಳನ್ನು ತಮ್ಮ ಆಡಳಿತ ಘಟಕಗಳಲ್ಲಿ ಹಂಚಿಕೆ ಮಾಡುವಾಗ ಯಾವುದೇ ಭಾಷೆಯ ದೃಷ್ಟಿಯಿಂದಾಗಲಿ, ಭೌಗೋಳಿಕ ದೃಷ್ಟಿಯಿಂದಾಗಲಿ, ಆರ್ಥಿಕ ದೃಷ್ಟಿಯಿಂದಾಗಲಿ ಅಥವಾ ಜನಾಂಗೀಯ ದೃಷ್ಟಿಯಿಂದಾಗಲಿ ಹಂಚಿಕೆ ಮಾಡಿರಲಿಲ್ಲ. ಇದಕ್ಕೆ ಯಾವುದೇ ರೀತಿಯ ವೈಚಾರಿಕ ತಳಹದಿ ಇರಲಿಲ್ಲ. ಇದರಿಂದ ಹಲವೆಡೆ ಹರಿದು ಹಂಚಿಹೋಗಿದ್ದ ಕನ್ನಡಿಗರು ಸಾಂಸ್ಕೃತಿಕವಾಗಿ ಒಂದುಗೂಡುವುದು ಕಷ್ಟಸಾಧ್ಯವಾಗಿತ್ತು.

ಹೀಗೆ ಹಲವು ಆಡಳಿತ ಘಟಕಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಆಯಾ ಪ್ರದೇಶಗಳಲ್ಲಿ ಬಹುಭಾಷಿಕರ ನಡುವೆ ಅಲ್ಪಸಂಖ್ಯಾತರಾಗಿ ಭಾಷಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುವ ದುಸ್ಥಿತಿ ಒಂದು ಕಡೆಯಾದರೆ ಕನ್ನಡ ಪ್ರದೇಶಗಳಲ್ಲಿ ವಾಸಿಸುವ ಜನರು ಕೂಡ ಹಲವು ಅನಿವಾರ್ಯತೆಗಳಿಂದ ಅನ್ಯಭಾಷಾ ಪ್ರಾಬಲ್ಯಕ್ಕೆ ಒಳಗಾಗುವಂತಾಯಿತು.

ಇಂತಹ ಸಂದರ್ಭದಲ್ಲಿ "ಕರ್ನಾಟಕತ್ವದ ಕಲ್ಪನೆಗೆ ಮೂಲ ಪ್ರೇರಕವಾಗಿ ನಿಂತವರು ಮುಂಬಯಿ ಕರ್ನಾಟಕದ ಕನ್ನಡಿಗರು. ಇದು ಅವರ ಸಾಂದರ್ಭಿಕ ಅನಿವಾರ್ಯವೂ ಆಗಿತ್ತು. ಈ ಪ್ರದೇಶದ ವ್ಯಾಪ್ತಿಗೆ ಬೆಳಗಾವಿ, ಬಿಜಾಪುರ, ಧಾರವಾಡ, ಮತ್ತು ಉತ್ತರ ಕನ್ನಡ ಜಿಲ್ಲೆಗಳು

ಸೇರ್ಪಡೆಯಾಗಿದ್ದವು. ಇವುಗಳ ಜೊತೆಗೆ ಜಮಖಂಡಿ, ಮುಧೋಳ, ಸಾಂಗ್ಲಿ, ರಾಯದುರ್ಗ ಮೊದಲಾದ ಸಣ್ಣಪುಟ್ಟ ಸಂಸ್ಥಾನಗಳೂ ಸೇರಿಕೊಂಡವು.

ಕ್ರಿ.ಶ. ೧೮೧೮ರವರೆಗೂ ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶದಲ್ಲಿ ಮರಾಠಿ ಭಾಷೆಯು ಪ್ರಾಬಲ್ಯವನ್ನು ಪಡೆದಿತ್ತು. ಅಲ್ಲದೆ ಬಂಗಾಳಿ, ಗುಜರಾತಿ, ಮೊದಲಾದ ಭಾಷೆಗಳು ಕೂಡ ಕನ್ನಡದ ಅನನ್ಯತೆಗೆ ಧಕ್ಕೆ ತರುತ್ತಿದ್ದವು. ಸಾರ್ವಜನಿಕವಾಗಿ ಮರಾಠಿ ವ್ಯಾವಹಾರಿಕ ಭಾಷೆಯಾಗಿತ್ತು. ಇದರ ದಟ್ಟತೆ ಎಷ್ಟಿತ್ತೆಂಬುದನ್ನು ಭೀ.ಗೂ.ಕುಲಕರ್ಣಿ ಅವರ ಮಾತಿನಲ್ಲೇ ಅರಿಯುವುದು ಸೂಕ್ತ.

"ಬ್ರಿಟೀಷ್ ಆಳರಸರಿಗೆ ಈ ನಾಡಿನ ಭಾಷೆ ಮರಾಠಿಯೇ ಎಂಬ ಭ್ರಮೆ ಹಿಡಿದಿತ್ತು. ಸುಶಿಕ್ಷಿತರಲ್ಲಿ ಮರಾಠಿ ಬರೆಯುವುದು, ಮಾತನಾಡುವುದು ಗೌರವದ ವಿಷಯವೆನಿಸಿತ್ತು. ಕನ್ನಡ ಭಾಷೆ ಅಜ್ಞಾತ ವಾಸಕ್ಕೆ ಸರಿದಂತಾಗಿದ್ದವು."[೫]

ಈ ಪ್ರದೇಶಗಳಲ್ಲಿ ಮರಾಠಿ ಭಾಷೆಯು ತನ್ನ ಅಸ್ತಿತ್ವವನ್ನು ಎಷ್ಟರ ಮಟ್ಟಿಗೆ ಬೇರೂರಿತ್ತೆಂದರೆ ಪ್ರಸ್ತುತ ನಮಗೆ ಆಂಗ್ಲ ಭಾಷೆಯನ್ನು ಕಲಿಯುವುದು ಶಿಷ್ಟಾಚಾರದ ಹಾಗೂ ವಿಶೇಷವಾಗಿ ಗೌರವದ ವಿಷಯವಾಗಿದ್ದಂತೆ ಅಂದು ಕನ್ನಡಿಗರಿಗೆ ಮರಾಠಿ ಭಾಷೆಯನ್ನು ಕಲಿಯುವುದು, ಆ ಭಾಷೆಯಲ್ಲಿಯೇ ವ್ಯವಹರಿಸುವುದು ಒಂದು ಶಿಷ್ಟಾಚಾರದ, ಸಭ್ಯತೆಯ, ಗೌರವದ ವಿಷಯವಾಗಿದ್ದು ಶಾಲೆಗಳಲ್ಲಿ ತಾಯ್ನುಡಿಯಾದ ಕನ್ನಡ ಭಾಷೆಗಿಂತ ಅನ್ಯಭಾಷೆಯಾದ ಮರಾಠಿ ಭಾಷೆಗೆ ಮೊದಲ ಆದ್ಯತೆಯಿತ್ತು. ನಂತರದ ಹೆಚ್ಚಿನ ವ್ಯಾಸಂಗಕ್ಕೆ ಪುಣೆಗೆ ಹೋಗಬೇಕಾದ ಪರಿಸ್ಥಿತಿ ಬಂದೊದಗಿತು.

ಮುಂಬಯಿ ಕರ್ನಾಟಕದ ಪ್ರಾಂತ್ಯದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯ ಹೆಚ್ಚಾಗಿದ್ದು ಇಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಭೆ, ಸಮಾರಂಭಗಳು ಹೀಗೆ ಮುಂತಾದ ಕಾರ್ಯಕ್ರಮಗಳು ಮರಾಠಿ ಭಾಷೆಯಲ್ಲಿಯೇ ನಡೆಯುತ್ತಿದ್ದವು. ಅಲ್ಲದೆ ವ್ಯಾವಹಾರಿಕವಾಗಿಯೂ ಮರಾಠಿ ಭಾಷೆಯನ್ನೇ ಬಳಸುತ್ತಿದ್ದು, ಇದರಿಂದ ಕನ್ನಡದ ಜನರು ಭಾಷಿಕ ಸಮಸ್ಯೆಯಿಂದ ಪೇಚಾಟಕ್ಕೆ ಸಿಲುಕಿದರು.

ಇಂತಹ ಸಂದಿಗ್ಧ ಸನ್ನಿವೇಶವನ್ನು ಕುರಿತು "ಶಾಂತಕವಿಗಳು ತಮ್ಮ ಕವಿತೆಯಲ್ಲಿ ಈ ರೀತಿ ಹೇಳುತ್ತಾರೆ.

ಎಲ್ಲಿ ನೋಡಲು ಮರಾಠಿಯರ ನಾಟಕಕೀರ್ತಿ

ಎಲ್ಲಿ ನೋಡಲು ಮರಾಠಿಯರ ನಾಟಕದರ್ಥಿ

ಎಲ್ಲಿ ನೋಡಲು ಮರಾಠಿಯರ ನಟರ ಮೂರ್ತಿಗಳ ಸಂಚಾರವು

ಎಲ್ಲಿ ನೋಡಲು ಮರಾಠಿಯರ ನಾಟಕದಾಟ

ಎಲ್ಲಿ ನೋಡಲು ಮರಾಠಿಯರ ನಾಟಕದೂಟ

ಎಲ್ಲಿ ನೋಡಲು ನಾಟಕಮಯಂ ತಾನಾಯ್ತು ಕರ್ನಾಟಕಂ"[೬]

ಇಂತಹ ಸಂದರ್ಭದಲ್ಲಿ ಅನೇಕ ಕನ್ನಡಪರ ಚಿಂತಕರು ಕನ್ನಡ ನಾಡು-ನುಡಿಯನ್ನು ಉಳಿಸುವ ಸಲುವಾಗಿ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಕನ್ನಡ ಭಾಷೆಯ ಪ್ರಾಚೀನತೆ ಮತ್ತು ಮಹತ್ವವನ್ನು ಸಾರುವ ಸಲುವಾಗಿ ಕನ್ನಡ ಸಂಬಂಧಿ ಸಂಶೋಧನೆಗಳು ಆಕರ್ಷಕ ಗದ್ಯಲೇಖನಗಳು, ಜಯಕರ್ನಾಟಕ, ಜೀವನ, ಜಯಂತಿ, ವಾಗ್ಭೂಷಣದಂತಹ ಪತ್ರಿಕೆಗಳು ಕಾರ್ಯಪ್ರವೃತ್ತವಾದವು.

ಅದಲ್ಲದೆ ಶೈಕ್ಷಣಿಕವಾಗಿ ಶಾಲಾ-ಕಾಲೇಜುಗಳಲ್ಲಿ ಮಾತೃಭಾಷೆಗೆ ಮೊದಲ ಆದ್ಯತೆಯನ್ನು ನೀಡಲಾಯಿತು. ಆದರೂ ಕ್ರಿ.ಶ.೧೮೫೫-೫೬ರಲ್ಲಿ ಈ ಮುಂಬಯಿ ಪ್ರಾಂತ್ಯಕ್ಕೊಳಪಟ್ಟ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಕಾರವಾರಗಳಲ್ಲಿ ೩೪ ಕನ್ನಡ ಪ್ರಾಥಮಿಕ ಶಾಲೆಗಳನ್ನು ತೆರೆದರೂ ಶಿಕ್ಷಣ ಮಾತ್ರ ಮರಾಠಿಯಲ್ಲಿಯೇ ಸಾಗುತ್ತಿತ್ತು. ಧಾರವಾಡಕ್ಕೆ ಸಹಾಯಕ ಜಿಲ್ಲಾಧಿಕಾರಿಯಾಗಿ ಬಂದ ವಾಲ್ಟರ್ ಎಲಿಯಟ್ ೧೮೨೬ರಲ್ಲಿ ಕನ್ನಡ ಶಾಲೆ ಆರಂಭಿಸಿದಾಗ ಈತನ ಆಶಯವನ್ನು ಗ್ರಹಿಸದ ಸ್ಥಳೀಯ ಜನರು ಪ್ರತಿಭಟಿಸಿದರು. ಆಗ ಆತ ತನ್ನ ಸ್ವಂತ ಖರ್ಚಿನಲ್ಲಿಯೇ ಕನ್ನಡ ನಡೆಸಬೇಕಾಯಿತು. ರಸೆಲ್ ಶಿಕ್ಷಣಾಧಿಕಾರಿಯಾಗಿ ಚೆನ್ನಬಸಪ್ಪ ಡೆಪ್ಯುಟಿ ಇನ್ಸ್‌ಪೆಕ್ಟರ್‌ರಾಗಿ ನೇಮಕಗೊಂಡು ಬೆಳಗಾವಿಗೆ ಬಂದ ಮೇಲೆ ಈ ಭಾಗದಲ್ಲಿ ಸಂಚಲನ ಉಂಟಾಯಿತು. ಇವರಿಗೆ ಹೆಗಲೆಣೆಯಾಗಿ ನಿಂತವರು ಕನ್ನಡಪರ ಕಾಳಜಿ ಹೊಂದಿದ್ದ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಇವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಇವರು ಕನ್ನಡದ ಟೀಕಾಕಾರರಾಗಿ, ವ್ಯಾಖ್ಯಾನಕಾರರಾಗಿ, ಪತ್ರಿಕಾ ಸಂಪಾದಕರಾಗಿ, ಗದ್ಯಾನುವಾದಕರಾಗಿ ಕನ್ನಡ ಸಾಹಿತ್ಯಲೋಕದಲ್ಲಿ ಚಿರಸ್ಮರಣೀಯರಾಗಿದ್ದು, ಇವರ ಟೀಕಾಸಾಹಿತ್ಯ, ಅನುವಾದ ಸಾಹಿತ್ಯ ಮತ್ತು ವ್ಯಾಖ್ಯಾನ ಕೃತಿಗಳನ್ನು ಪ್ರಸ್ತುತ ಅಧ್ಯಯನ ಮಾಡುವ ಅವಶ್ಯಕತೆಯಿದೆ.

ಅಧ್ಯಯನದ ವ್ಯಾಪ್ತಿ

ಹತ್ತೊಂಬತ್ತನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಸ್ಮರಣೀಯರಾದ ಗಂಗಾಧರ ಮಡಿವಾಳೇಶ್ವರರ ಜೀವನ ಅವರ ವೃತ್ತಿ ಮತ್ತು ಹವ್ಯಾಸಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ. ಹಾಗೂ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅಪಾರವಾಗಿದೆ. ತಾವಿದ್ದ ಬೆಳಗಾವಿ

ಸುತ್ತಮುತ್ತಲ ಪ್ರದೇಶದಲ್ಲಿ ಮರಾಠಿ ಭಾಷೆಯ ಪ್ರಾಬಲ್ಯದಿಂದ ಆದ ಕನ್ನಡ ಭಾಷೆಯ ದುಸ್ಥಿತಿಯನ್ನು ಸರಿಪಡಿಸಲು ಕೈಗೊಂಡ ಕ್ರಮಗಳನ್ನು ವಿವರಿಸಲಾಗಿದೆ.

ಗಂಗಾಧರ ಮಡಿವಾಳೇಶ್ವರರು ಲೇಖಕರಾಗಿ, ಶಿಕ್ಷಕರಾಗಿ, ಪತ್ರಿಕಾ ಸಂಪಾದಕರಾಗಿ, ಗದ್ಯಾನುವಾದಕರಾಗಿ, ಟೀಕಾಕಾರರಾಗಿ, ಅವರ ಕಾರ್ಯಕ್ಷೇತ್ರ ಇತ್ಯಾದಿಗಳ ವಿವೇಚನೆಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಜೊತೆಗೆ ಸಂಸ್ಕೃತ ಹಳಗನ್ನಡ, ಮರಾಠಿ ಮತ್ತು ಆಂಗ್ಲ ಭಾಷೆಗಳಲ್ಲಿ ಯಾವ ರೀತಿ ಪ್ರಭುತ್ವವನ್ನು ಸಾಧಿಸಿದರು. ಇವರ ವಿವರಣಾ ಕೌಶಲ, ಬೋಧನಾ ಮಾದರಿ ಎಂತಹದ್ದು ? ಇವರ ಪುರಾಣ ಪ್ರವಚನಗಳಲ್ಲಿನ ವಾಚಿಸುವ ಶೈಲಿ ಮತ್ತು ಇವರು ಸಂಸ್ಕೃತದ ಬಾಣ ಕಾದಂಬರಿಯನ್ನು ಕನ್ನಡ ಭಾಷೆಗೆ ಅನುವಾದಿಸಿದ್ದು, ಈ ಅನುವಾದದ ಶೈಲಿ, ಭಾಷೆಯನ್ನು ಕುರಿತು ವಿವೇಚಿಸಲಾಗಿದೆ. ಇದಲ್ಲದೆ ಪಠ್ಯಪುಸ್ತಕ ರಚನಾಕಾರರಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮತ್ತು ಆಧ್ಯಾತ್ಮಿಕ ಜೀವಿಗಳಾಗಿ ಧಾರ್ಮಿಕ ಕೃತಿಗಳನ್ನು ನೋಡುವ ದೃಷ್ಟಿಕೋನ, ನಿಘಂಟು ರಚನಾಕಾರರಾಗಿ, ಹಳಗನ್ನಡ ಕಾವ್ಯಗಳ ಓದಿನ ಕುರಿತು ಕನ್ನಡಿಗರಲ್ಲಿ ಹೇಗೆ ಜಾಗೃತಿ ಮೂಡಿಸಿದರು ? ಹಾಗೂ ಪತ್ರಿಕಾ ಸಂಪಾದಕರಾಗಿ ಹಲವಾರು ಉತ್ಕೃಷ್ಟ ಲೇಖನಗಳನ್ನು ಬರೆದು ಕನ್ನಡ ಭಾಷಾ ಪ್ರಸಾರಕರಾಗಿ ಹೇಗೆ ಕಾರ್ಯ ನಿರ್ವಹಿಸಿದ್ದಾರೆ ಎಂಬುದನ್ನು ಪ್ರಸ್ತಾಪಿಸಲಾಗಿದೆ. ಕನ್ನಡ ಸಾಹಿತ್ಯಲೋಕದಲ್ಲಿ ಗಂಗಾಧರರ ಸ್ಥಾನಮಾನ ಇತ್ಯಾದಿಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಯನದ ಮಹತ್ವ

ಈ ಮೊದಲು ಕನ್ನಡ ಸಾಹಿತ್ಯ ರಚನೆಯಲ್ಲಿ ಬಳಕೆಯಾಗುತ್ತಿದ್ದ ಭಾಷೆ ಪಂಡಿತ ಭಾಷೆ. ಕನ್ನಡ-ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯ ಗಳಿಸಿದ ಆಸ್ಥಾನ ವಿದ್ವಾಂಸರು ಸಂಸ್ಕೃತ ಭೂಯಿಷ್ಠವಾದ ಕನ್ನಡದಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದರು. ಈ ಸಾಹಿತ್ಯವು ಪ್ರೌಢಸಾಹಿತ್ಯ ಇಲ್ಲವೆ ಮಾರ್ಗ ಸಾಹಿತ್ಯ ಎಂದು ಕರೆಯಲ್ಪಟ್ಟು ಆಸ್ಥಾನದ ವಿದ್ವಾಂಸರುಗಳಿಗೆ ರುಚಿಸುತ್ತಿತ್ತೇ ವಿನಃ ಜನಸಾಮಾನ್ಯರಿಗಲ್ಲ. ಹಾಗೂ ಇದು ಕೇವಲ ಅರಮನೆ ಮತ್ತು ಗುರುಮನೆಗಳಿಗೆ ಮಾತ್ರ ಸೀಮಿತವಾಗಿದ್ದು, ಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ.

ಇಂತಹ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದ ವೀರಶೈವ ಕ್ರಾಂತಿ ಸಾಮಾಜಿಕ ಸುಧಾರಣೆಯ ಜೊತೆ ಜೊತೆಗೆ ಸಾಹಿತ್ಯದಲ್ಲಿಯು ಸುಧಾರಣೆಯನ್ನು ತಂದಿತು. ಜನಸಾಮಾನ್ಯರ ಆಡುನುಡಿಯಲ್ಲಿಯೇ ಸಮೃದ್ಧವಾದ ಸಾಹಿತ್ಯ ಒಡಮೂಡಿತು. ಈ ಕ್ರಾಂತಿಯ ಉದ್ದೇಶ ಪಂಡಿತರನ್ನು ರಂಜಿಸುವುದಾಗಲಿ, ರಾಜಮನ್ನಣೆ ಗಳಿಸುವುದಾಗಲಿ ಆಗಿರದೆ ಜನಸಾಮಾನ್ಯರನ್ನು ವಿಚಾರವಂತರನ್ನಾಗಿಸುವುದಾಗಿತ್ತು. ಅವರಲ್ಲಿ ಆಧ್ಯಾತ್ಮಿಕ ಶ್ರದ್ಧೆ

ಮೂಡಿಸುವುದಾಗಿತ್ತು. ಅದಕ್ಕಾಗಿ ಅವರಿಗೆ ತಿಳಿಯಾದ, ಸರಳವಾದ, ಅವರದೇ ಆದ ಭಾಷೆಯಲ್ಲಿ ಧರ್ಮದ ವಿಚಾರವನ್ನು, ಆಧ್ಯಾತ್ಮದ ಸ್ವರೂಪವನ್ನು ವಚನಗಳ ಮೂಲಕ ನಿರೂಪಿಸಿದರು. ಹಾಗಾಗಿ ವಚನ ಸಾಹಿತ್ಯ ಜನಸಾಮಾನ್ಯರ ಅಚ್ಚಗನ್ನಡ ಸಾಹಿತ್ಯ ಎನಿಸಿತು. ದೇಶೀ ಸಾಹಿತ್ಯ ಎನಿಸಿತು. ಹಾಗೂ ವಚನ ಸಾಹಿತ್ಯವು ಪದ್ಯಕ್ಕಿಂತ ಹೆಚ್ಚಾಗಿ ಗದ್ಯರೂಪ ಪ್ರಾಧಾನ್ಯವನ್ನು ಪಡೆಯಿತು. ನಂತರದಲ್ಲಿ ಬಂದ ಮುದ್ದಣ "ಪದ್ಯಂ ವದ್ಯಂ, ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳ್ ಪೇಳ್ವುದು" ಎಂದು ಹೇಳಿ ಗದ್ಯ ಸಾಹಿತ್ಯವನ್ನು ಎತ್ತಿಹಿಡಿದನು.

ಹತ್ತೊಂಬತ್ತನೆಯ ಶತಮಾನದಲ್ಲಿ ಬರುವ ಗಂಗಾಧರ ಮಡಿವಾಳೇಶ್ವರರು ಸಹ ಗದ್ಯ ಸಾಹಿತ್ಯಕ್ಕೆ ಮಹತ್ವವನ್ನು ನೀಡಿ ಬಾಣನ ಗದ್ಯ ಸಾಹಿತ್ಯವಾದ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದುದು ಮಹತ್ವದ ವಿಷಯವಾಗಿದೆ.

ಕನ್ನಡಪರ ಚಿಂತನ ಸ್ವರೂಪವನ್ನು ನಿರ್ವಚಿಸಿಕೊಳ್ಳುವುದು ಸಮಕಾಲೀನ ಸಂದರ್ಭದ ಮುಖ್ಯ ಅಗತ್ಯಗಳಲ್ಲೊಂದಾಗಿದೆ. ಕನ್ನಡ ನಾಡು–ನುಡಿ ಹಲವು ಸಂಕಷ್ಟಗಳಿಗೆ ಒಳಗಾಗಿರುವ ಈ ಸಂದರ್ಭದಲ್ಲಿ ಇದು ಅನಿವಾರ್ಯವೂ ಹೌದು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಸಾಗಿದೆ.

ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಅನುವಾದವನ್ನೇ ಮಾಡಲಿ, ಸಾಹಿತ್ಯ ಕೃತಿಗಳಿಗೆ ಟೀಕುಗಳನ್ನೇ ಬರೆಯಲಿ ಅದರ ಹಿಂದೆ ಬಹು ಮಹತ್ವದ ಉದ್ದೇಶವನ್ನು ಇರಿಸಿಕೊಂಡಿದ್ದರು. ಕನ್ನಡ ಭಾಷೆಯನ್ನು ಸಪ್ರಮಾಣ ಭಾಷೆಯನ್ನಾಗಿ ಮಾಡುವ ಉದ್ದೇಶ ಅವರದಾಗಿತ್ತು. ಹೀಗಾಗಿ ಉತ್ತರ ಕರ್ನಾಟಕದ ಮರಾಠಿ ಪ್ರಭಾವ ವಲಯದಲ್ಲಿ ಕನ್ನಡ ಅಸ್ತಿತ್ವವನ್ನು ಟೀಕುಗಳ ಮೂಲಕ, ಅನುವಾದಗಳ ಮೂಲಕ ಉಳಿಸುವ ಮಹತ್ವದ ಮಹನೀಯರಲ್ಲಿ ಇವರು ಪ್ರಮುಖರಾಗಿದ್ದಾರೆ. ಇಂಥ ಪುಣ್ಯ ಪುರುಷರ ಕನ್ನಡ ಕೃಷಿಯನ್ನು ನಿರೂಪಿಸುವುದು ಈ ಕಿರುಪ್ರಬಂಧದ ಮಹತ್ವವವೆನಿಸಿದೆ.

ಅಧ್ಯಯನದ ಸ್ವರೂಪ :

'ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕುಗಳು' ಎಂಬ ಸಂಶೋಧನಾ ಕಿರುಪ್ರಬಂಧವು ಆರು ಅಧ್ಯಾಯಗಳಲ್ಲಿ ವಿನ್ಯಾಸ ಪಡೆದಿದೆ. ೧೯ನೇ ಶತಮಾನದ ಪೂರ್ವದಲ್ಲಿ ಅಖಂಡ ಕರ್ನಾಟಕ ಭೂಪಟ ರಚನೆ ಇಲ್ಲದಾಗ ಕನ್ನಡದ ಅಸ್ಮಿತೆಯನ್ನು ಉಳಿಸಲು ಹೋರಾಡಿದ ಮಹಾನುಭಾವರಲ್ಲಿ ತುರಮರಿಯವರು ಒಬ್ಬರು. ಪ್ರಸಿದ್ಧವಾದ ಸಂಸ್ಕೃತ ಕಾವ್ಯಗಳನ್ನು ಅನುವಾದಿಸುವುದು ಮತ್ತು ಕನ್ನಡ ಉತ್ಕೃಷ್ಟ ಕಾವ್ಯಗಳಿಗೆ ಟೀಕು, ವ್ಯಾಖ್ಯಾನ ಬರೆಯುವುದು ಆ ಮೂಲಕ ಕನ್ನಡಿಗರಿಗೆ ಓದುವ ಗೀಳನ್ನು ಹಚ್ಚುವುದು ಇವರ ನಾಡು–

ನುಡಿಯ ಪ್ರಯತ್ನವಾಗಿತ್ತು. ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಅನ್ಯ ಭಾಷಿಗರ ದಬ್ಬಾಳಿಕೆ ಇದ್ದಂಥ ಸಂದರ್ಭದಲ್ಲಿ ಮಡಿವಾಳೇಶ್ವರರ ಅನುವಾದಗಳು ಮತ್ತು ಟೀಕುಗಳು ಓದುಗರ ಮೇಲೆ ಮತ್ತು ಶಿಕ್ಷಣ ಕ್ಷೇತ್ರದ ಮೇಲೆ ಉಂಟು ಮಾಡಿದ ಪರಿಣಾಮ ಹಾಗೂ ಫಲಶೃತಿಗಳ ಉದ್ದೇಶವನ್ನು ಅಧ್ಯಾಯ ೧ ರಲ್ಲಿ ನಿರೂಪಿಸಲಾಗಿದೆ.

ಅಧ್ಯಾಯ ಎರಡು ಗಂಗಾಧರ ಮಡಿವಾಳೇಶ್ವರರ ಬದುಕು ಗಂಗಾಧರ ಮಡಿವಾಳೇಶ್ವರರು ಲಿಂಗಾಯತ ಪಂಚಮಸಾಲಿ ಕೃಷಿ ಕುಟುಂಬದಲ್ಲಿ ಜನಿಸಿ ಅಥಣಿಮಠದ ಮಡಿವಾಳೇಶ್ವರ ಗುರುಗಳಲ್ಲಿ ಶಿಕ್ಷಣ ಪಡೆದು ಆರಂಭದಲ್ಲಿ ಬಂಕಾಪುರ, ಹುನಗುಂದ, ಧಾರವಾಡ, ಬೆಳಗಾವಿಗಳಲ್ಲಿ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ, ಕನ್ನಡ ಟ್ರಾನ್ಸ್‌ಲೇಶನ್ ಎಗ್ಜಿಬಿಶನ್ ಅಂದರೆ ಕನ್ನಡ ಪಠ್ಯಪುಸ್ತಕಗಳ ಭಾಷಾಂತರ ಪ್ರದರ್ಶನ–ಪ್ರಸರಣ ಹುದ್ದೆಗಳಲ್ಲಿ ಕೆಲಸ ಮಾಡಿದ ಶ್ರೀಯುತರು "ಮಠ ಪತ್ರಿಕೆ", "ಶಾಲಾ ಪತ್ರಿಕೆ"ಗಳ ಲೇಖಕರಾಗಿ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಹೀಗೆ ಪ್ರಸ್ತುತ ಅಧ್ಯಯನದಲ್ಲಿ ಗಂಗಾಧರರ ಬಾಲ್ಯ, ಕುಟುಂಬ, ವೃತ್ತಿ ಜೀವನವನ್ನು ಸಾಧ್ಯಾಂತಿಕವಾಗಿ ಪರಿಚಯಿಸಿದ್ದಾರೆ.

ಗಂಗಾಧರ ಮಡಿವಾಳೇಶ್ವರರ ಸಾಹಿತ್ಯ ಎಂಬ ಮೂರನೆಯ ಅಧ್ಯಾಯದಲ್ಲಿ ಮಡಿವಾಳೇಶ್ವರರು ರಚನೆ ಮಾಡಿದ ಕವಿತಾ ಪದ್ಧತಿ, ಭಾಷಾದರ್ಪಣ, ಶಬ್ದಮಣಿ ದರ್ಪಣದ ವ್ಯಾಖ್ಯಾನ, ರಾಜಶೇಖರ ವಿಳಾಸದ ಟೀಕು, ಹಾಗೂ ಪತ್ರಿಕಾ ಲೇಖನಗಳನ್ನು ವಿಶ್ಲೇಷಿಸಲಾಗಿದೆ. ಪ್ರಾಚೀನ ಕನ್ನಡ ಕಾವ್ಯಗಳ ಮಹತ್ವದ ಪದ್ಯಗಳನ್ನು ಒಂದು ಕಡೆ ಸಂಗ್ರಹಿಸಿ ವಿದ್ಯಾರ್ಥಿಗಳಿಗೆ ಸಾಹಿತ್ಯಾಸಕ್ತಿಯನ್ನು ಉಂಟು ಮಾಡುವ ಸಲುವಾಗಿ 'ಕವಿತಾ ಪದ್ಧತಿ' ಕೃತಿಯನ್ನು ರಚಿಸಿದ್ದಾರೆ. ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಸರ್ಪಭೂಷಣ ಶಿವಯೋಗಿಗಳ 'ಕೈವಲ್ಯ ಕಲ್ಪವಲ್ಲರಿ', ಬಾಲಲೀಲ ಮಹಾಂತ ಶಿವಯೋಗಿಗಳ 'ಕೈವಲ್ಯ ದರ್ಪಣ' ಇವು ಕೈವಲ್ಯ ಸಾಹಿತ್ಯದ ಶಿಖರ ತ್ರಯಗಳು. ಇಲ್ಲಿ ವೇದ, ಆಗಮಗಳ ತತ್ವಗಳನ್ನು ಸರಳಗನ್ನಡದಲ್ಲಿ ನಿರೂಪಿಸುವುದರ ಮೂಲಕ ಸಾಮಾನ್ಯನಿಗೂ ಕೈವಲ್ಯ ಸಾಧನೆಗೆ ಸಾಧ್ಯವೆಂಬುದನ್ನು ನಿರೂಪಿಸಿದ ಕೃತಿಗಳು. ಹೀಗಾಗಿ ನಿಜಗುಣರ 'ಕೈವಲ್ಯ ಪದ್ಧತಿ'ಗೆ ಟೀಕು ಬರೆಯುವುದರ ಮೂಲಕ ಇನ್ನೂ ಸರಳೀಕರಣಗೊಳಿಸುವ ಕೆಲಸವನ್ನು ತುರಮರಿಯವರು ಮಾಡಿದ್ದಾರೆ.

'ಭಾಷಾ ದರ್ಪಣ'ದಲ್ಲಿ ಛಂದಸ್ಸು, ವ್ಯಾಕರಣಗಳಿಗೆ ಸಂಬಂಧಿಸಿದಂತೆ ನಿರೂಪಿಸಿದ್ದಾರೆ. ಕೇಶಿರಾಜನ ಶಬ್ದಮಣಿದರ್ಪಣ, ರಾಜಶೇಖರ ವಿಳಾಸ ಕೃತಿಗಳಿಗೆ ಟೀಕು ಬರೆದಿದ್ದಾರೆ. ಅದೇ ರೀತಿ ಸಂಸ್ಕೃತದ 'ಬಾಣ ಕಾದಂಬರಿ'ಗೆ ಕನ್ನಡ ಅನುವಾದ ಮಾಡಿದ್ದಾರೆ. ಇವುಗಳನ್ನು ಹೊರತುಪಡಿಸಿದರೆ ತುರಮರಿಯವರ ಪತ್ರಿಕಾ ಲೇಖನಗಳು 'ಶಬ್ದಮಂಜರಿ'ಯಂಥ ನಿಘಂಟು

ಇವರ ಸಾಹಿತ್ಯ ವೈವಿಧ್ಯತೆಗೆ ನಿದರ್ಶನಗಳಾಗಿವೆ. ಸಂಕ್ಷಿಪ್ತವಾಗಿ ಇವರ ಸಾಹಿತ್ಯ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಗಂಗಾಧರ ಮಡಿವಾಳೇಶ್ವರರ ಅನುವಾದಗಳು ಪ್ರಸ್ತುತ ಅಧ್ಯಾಯದಲ್ಲಿ ಅನುವಾದದ ಅರ್ಥ, ಸ್ವರೂಪ ಕುರಿತು ನಿಬಂಧಕ್ಕೆ ಪೂರಕವಾಗಿ ಚರ್ಚಿಸಲಾಗಿದೆ. ವಿಶೇಷವಾಗಿ ಗಂಗಾಧರ ಮಡಿವಾಳೇಶ್ವರರಿಗೆ ಹೆಸರು ತಂದುಕೊಟ್ಟ ಕೃತಿ ಬಾಣ ಕಾದಂಬರಿ. ಇದು ಅನುವಾದವೆನಿಸಿದರೂ ಸ್ವತಂತ್ರ ಕೃತಿಯಂತೆ ಕನ್ನಡದ ಕಸುವನ್ನು ಪ್ರತಿನಿಧಿಸಿದ ಗದ್ಯ ಸಾಹಿತ್ಯ ಪ್ರಕಾರ. ಈ ಕಾದಂಬರಿಯ ಭಾಷಿಕ, ದೇಶೀಯ ಮತ್ತು ಆಶಯದ ಅನನ್ಯತೆಯನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಐದು ಗಂಗಾಧರ ಮಡಿವಾಳೇಶ್ವರರ ಟೀಕುಗಳು 'ರಾಜಶೇಖರ ವಿಳಾಸ', 'ಶಬ್ದಮಣಿದರ್ಪಣ', 'ಕೈವಲ್ಯ ಪದ್ಧತಿ' ಇವುಗಳಿಗೆ ಮಡಿವಾಳೇಶ್ವರರು ಟೀಕು ರಚಿಸಿದ್ದಾರೆ. ಟೀಕು ಸಾಹಿತ್ಯ ಒಂದು ಕಾಲಕ್ಕೆ ಪ್ರಾಚೀನ ಅಧ್ಯಯನದ ಪಠ್ಯಕ್ರಮವಾಗಿತ್ತು. ಹೀಗಾಗಿ ಈ ಅಧ್ಯಾಯಕ್ಕೆ ಪೂರಕವಾಗಿ ಟೀಕುಗಳ ಅರ್ಥ, ಸ್ವರೂಪ, ಕುರಿತು ವಿವರಿಸಲಾಗಿದೆ. ವಿಶೇಷವೆಂದರೆ ತುರಮರಿಯವರು ತಾವು ರಚಿಸಿದ ಶಬ್ದಮಂಜರಿಗೆ 'ಸಟೀಕು ಶಬ್ದ ಮಂಜರಿ' ಎಂದು ಕರೆದಿದ್ದಾರೆ. ಬಹುಶಃ ಪದಾರ್ಥ ಸ್ವರೂಪದ ಶಬ್ದ ಮಂಜರಿಯನ್ನು 'ಸಟೀಕು' ಎಂದು ಕರೆದಿರುವ ಸಾಧ್ಯತೆ ಇದೆ.

ಕೊನೆಯಲ್ಲಿ ಸಮಾರೋಪ ತುರಮರಿಯವರ ಅನುವಾದ ಮತ್ತು ಟೀಕುಗಳ ಹಿಂದಿರುವ ಆಶಯವೇನು? ಇದರಿಂದ ಕನ್ನಡ ಸಪ್ರಮಾಣ ಭಾಷೆಯನ್ನಾಗಿ ಬಳಸುವುದಕ್ಕೆ ಅವರ ಅನುವಾದ ಮತ್ತು ಟೀಕುಗಳು ಹೇಗೆ ಪ್ರಯೋಜನವಾದವೆಂಬ ಫಲಶೃತಿಯನ್ನು ನೀಡಲಾಗಿದೆ.

ಅನುಬಂಧಗಳಲ್ಲಿ ಗಂಗಾಧರ ಮಡಿವಾಳೇಶ್ವರರ ಕೃತಿಗಳು ಟೀಕುಗಳು ಇತ್ಯಾದಿ ಛಾಯಾಚಿತ್ರಗಳನ್ನು ನೀಡಲಾಗಿದೆ. ಇದು ಈ ಕಿರು ಪ್ರಬಂಧದ ಸ್ವರೂಪ ಅಥವಾ ಶಿಲ್ಪವಾಗಿದೆ.

ಕೊನೆಟಿಪ್ಪಣಿಗಳು

೧. ರಾ.ಯ. ಧಾರವಾಡಕರ(ಸಂ), ಹೊಸಗನ್ನಡ ಸಾಹಿತ್ಯದ ಉದಯಕಾಲ, ಪು.ಸಂ. ೨೫.

೨. ಕಾ.ವೆಂ.ಶ್ರೀನಿವಾಸಮೂರ್ತಿ(ಸಂ.), ಕನ್ನಡಪರ ಚಿಂತನೆ ಮತ್ತು ಪರಂಪರೆ, ಪು.ಸಂ.೧೯೪.

೩. ಅದೇ–ಪು.ಸಂ. ೧೯೬.

೪. ಅದೇ–ಪು.ಸಂ.೧೯೬.

೫. ಅದೇ–ಪು.ಸಂ.೧೯೭.

೬. ಅದೇ–ಪು.ಸಂ.೧೯೮.

ಅಧ್ಯಾಯ ಎರಡು

ಗಂಗಾಧರ ಮಡಿವಾಳೇಶ್ವರರ ಬದುಕು

೧. ಜನ್ಮಸ್ಥಳ

೨. ಬಾಲ್ಯ

೩. ಕುಟುಂಬ

೪. ವೃತ್ತಿ

ಅಧ್ಯಾಯ ಎರಡು

ಗಂಗಾಧರ ಮಡಿವಾಳೇಶ್ವರರ ಬದುಕು

೧೯ನೆಯ ಶತಮಾನದ ಕನ್ನಡಪರ ಕಾಳಜಿಯನ್ನು ಹೊಂದಿದ, ಕನ್ನಡ ನಾಡು ನುಡಿಗಾಗಿ ಹೋರಾಡಿದ ಮಹನೀಯರಲ್ಲಿ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಒಬ್ಬರು. ಸರಳ ವ್ಯಕ್ತಿತ್ವ, ಉದಾತ್ತ ಚಿಂತನೆಗಳನ್ನು ಹೊಂದಿದ ಮಹಾಪುರುಷರು, ಆಧ್ಯಾತ್ಮಿಕ ಚಿಂತಕರು, ಸೌಮ್ಯಸ್ವಭಾವದವರು, ಆದರ್ಶ ಶಿಕ್ಷಕರು, ಕಾರ್ಯದಕ್ಷತೆಯನ್ನು ಹೊಂದಿದವರು, ಅತ್ಯಂತ ಜನಪ್ರಿಯ ವ್ಯಕ್ತಿಗಳಾದ ಗಂಗಾಧರರು ಕನ್ನಡ ಭಾಷೆಯನ್ನಲ್ಲದೆ, ಮರಾಠಿ, ಸಂಸ್ಕೃತ ಮತ್ತು ಆಂಗ್ಲ ಭಾಷೆಗಳಲ್ಲಿ ಹಿಡಿತವನ್ನು ಸಾಧಿಸಿದ್ದರು. ಹಳಗನ್ನಡ ಕಾವ್ಯಗಳನ್ನು, ಪುರಾಣಗಳನ್ನು ಓದಿ ಅರ್ಥೈಸಿಕೊಂಡು ಜನರಿಗೆ ಪ್ರವಚನಗಳ ಮೂಲಕ ಸರಳವಾಗಿ ಸುಲಭವಾಗಿ ಮನಮುಟ್ಟುವಂತೆ ಹೇಳುತ್ತಿದ್ದರು. ಅಂತಹ ಚಿತ್ರಕಶಕ್ತಿ ಅವರಲ್ಲಿತ್ತು.

ಗಂಗಾಧರರು ತಮ್ಮ ಜೀವನದಾದ್ಯಂತ ಅವಿರತವಾಗಿ ದುಡಿದವರು. ಅಧ್ಯಾಪಕರಾಗಿ, ಪ್ರವಚನಕಾರರಾಗಿ, ಅನುವಾದಕರಾಗಿ, ವಿದ್ಯಾರ್ಥಿನಿಲಯದ ಸಂಸ್ಥಾಪಕರಾಗಿ, ಹೀಗೆ ನಿರಂತರ ಒಂದಲ್ಲ ಒಂದು ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಟೀಕಾಕಾರರಾಗಿ ಕೈವಲ್ಯ ಪದ್ಧತಿ ಮತ್ತು ರಾಜಶೇಖರ ವಿಳಾಸ ಕೃತಿಗಳಿಗೆ ಟೀಕುಗಳನ್ನು ಬರೆದರು. ಕವಿತಾಪದ್ಧತಿ ಮತ್ತು ಭಾಷಾದರ್ಪಣ ಕೃತಿಗಳನ್ನು ಬರೆದು ಕನ್ನಡಿಗರಲ್ಲಿ ಹಳಗನ್ನಡ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸಲು ಪ್ರಯತ್ನಿಸಿದರು. 'ಶಬ್ದಮಣಿ ದರ್ಪಣ'ಕ್ಕೆ ವ್ಯಾಖ್ಯಾನವನ್ನು ಬರೆದರು. ಹಾಗೆಯೇ 'ಮಠಪತ್ರಿಕೆ'ಯನ್ನು ಹೊರಡಿಸುವುದರ ಮೂಲಕ ಕನ್ನಡದ ಬಗ್ಗೆ ಜನಜಾಗೃತಿಯನ್ನು ಮೂಡಿಸಿದ ಮಹನೀಯರಿವರು.

೧. ಜನ್ಮಸ್ಥಳ :

ಗಂಗಾಧರ ಮಡಿವಾಳೇಶ್ವರ ತುರಮರಿಯವರು ಚೆನ್ನಬಸಪ್ಪ ಮತ್ತು ಪಾರ್ವತಿ ಎಂಬ ದಂಪತಿಗಳ ಪುಣ್ಯಗರ್ಭದಲ್ಲಿ ೧೮೨೭ರಲ್ಲಿ ಜನಿಸಿದರು. ಇವರ ಜನ್ಮಸ್ಥಳ ಸಂಪಗಾಂವ ತಾಲ್ಲೂಕಿನ ತುರಮರಿ. "ಈ ಊರು ಬೈಲಹೊಂಗಲದಿಂದ ದಕ್ಷಿಣಕ್ಕೆ ಮಲಪ್ರಭಾ ನದಿಯ ದಂಡೆಯ ಮೇಲೆ ಸುಮಾರು ೩೨ ಕಿ.ಮೀ. ಅಂತರದಲ್ಲಿದೆ. ಇವರ ಪೂರ್ವಜರು ಉಪಜೀವನಕ್ಕಾಗಿ ಸ್ವಗ್ರಾಮವಾದ ತುರಮರಿಯನ್ನು ತೊರೆದು, ಬೈಲಹೊಂಗಲಕ್ಕೆ ಬಂದರು. ಅಲ್ಲಿಯ ಜನರು ಇವರ ಊರಿನ ಹೆಸರನ್ನೇ ಇವರ ಮನೆತನದ ಹೆಸರನ್ನಾಗಿ ಗುರ್ತಿಸಿದರು[೧].

"ಉತ್ತರ ಕರ್ನಾಟಕದ ಭಾಗದಲ್ಲೆಲ್ಲ ಒಂದು ಊರಿನಿಂದ ಇನ್ನೊಂದು ಊರಿಗೆ ಬಂದು ನೆಲೆ ನಿಂತರೆ ಅಂಥವರನ್ನು ಅವರ ಮೂಲ ಊರಿನ ಹೆಸರಿನಿಂದ ಗುರ್ತಿಸುವುದು ಈಗಲೂ ವಾಡಿಕೆಯಲ್ಲಿದೆ.[೨] ಹಾಗಾಗಿ ಗಂಗಾಧರ ಮಡಿವಾಳೇಶ್ವರರ ಮನೆತನದ ಹೆಸರು 'ತುರಮರಿ' ಎಂದೇ ಪ್ರಸಿದ್ಧವಾಯಿತು. ಈ ಮನೆತನದವರು ತುರಮರಿಯಲ್ಲಿರುವ 'ಬಸವೇಶ್ವರ' ಮತ್ತು 'ರಾಮಲಿಂಗೇಶ್ವರ' ದೇವರನ್ನು ತಮ್ಮ 'ಮನೆತನದ ದೈವ'ವೆಂದು ಆ ದೇವರಿಗೆ ನಡೆದುಕೊಳ್ಳುತ್ತಿದ್ದರು. ಪ್ರತಿವರ್ಷ ಶ್ರಾವಣಮಾಸ ಮತ್ತು ಶಿವರಾತ್ರಿಗೊಮ್ಮೆ ಅಲ್ಲಿಗೆ ಹೋಗಿ ದೇವರ ದರ್ಶನ ಪಡೆಯುತ್ತಿದ್ದರು.

೨. ಬಾಲ್ಯ

ಚುರುಕುಮತಿಯಾದ ಗಂಗಾಧರನು ಮಠದ ಶಾಲೆಯಲ್ಲಿ ಅಯ್ಯನವರ ಸಹಾಯದಿಂದ ಮರಾಠಿ ಭಾಷೆ, ಮೋಡಿಲಿಪಿಯನ್ನು ಕಲಿಯುತ್ತ ತಮ್ಮ ಮನೆಯಲ್ಲಿಯೇ ನೆಲೆನಿಂತ ತಮ್ಮ ಮನೆತನದ ಗುರುಗಳಾದ ಅಥಣಿಯ ಪೂಜ್ಯ ಮಡಿವಾಳೇಶ್ವರರಿಂದ ಕನ್ನಡ, ಹಳಗನ್ನಡ ಕಾವ್ಯಗಳು, ಸಂಸ್ಕೃತ, ಗಣಿತ, ಮುಂತಾದ ವಿಷಯಗಳನ್ನು ಕಲಿಯತೊಡಗಿದನು. ಗುರುಗಳಿಗೆ ಗಂಗಾಧರನೆಂದರೆ ಅಪಾರ ಪ್ರೀತಿ. ಅವನ ಗುರುಹಿರಿಯರ ಮೇಲಿನ ಭಕ್ತಿ, ಗೌರವ, ಸೇವಾಮನೋಭಾವ, ನಯ ವಿನಯ, ಪ್ರಾಮಾಣಿಕತೆ, ಸರಳವಾದ ನಡೆ-ನುಡಿ, ಕಲಿಕೆಯಲ್ಲಿನ ಶ್ರದ್ಧೆ ಮತ್ತು ಆಸಕ್ತಿ ಮುಂತಾದ ಈ ಸದ್ಗುಣಗಳೇ ಗುರುಗಳನ್ನು ಆಕರ್ಷಿಸಿದ್ದು.

ಗಂಗಾಧರನ ಕಲಿಕೆಯಲ್ಲಿನ ಆಸಕ್ತಿ, ಬತ್ತದ ಉತ್ಸಾಹವನ್ನು ಕಂಡ ಗುರುಗಳು ವೀರಶೈವ ಧರ್ಮದ ತತ್ವಗಳನ್ನು ಶಿಷ್ಯನಿಗೆ ಧಾರೆಯೆರೆದರು. ಗಂಗಾಧರನು ಸಹ ಗುರುಗಳು ಹೇಳಿದ ಪಾಠಗಳನ್ನು ಆಸಕ್ತಿಯಿಂದ ಕಲಿಯುತ್ತ ಗುರುಸೇವೆಯೇ ಹರ ಸೇವೆಯೆಂದು ಬಗೆದು ಅವರ ಸೇವೆಗೈಯುತ್ತಿದ್ದನು. ಗುರುಗಳ ಆಜ್ಞೆಯನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದನು. ಅಂತೆಯೇ ಗುರುಗಳು ಗಂಗಾಧರನಿಗೆ ಒಳ್ಳೆಯ ಸಂಸ್ಕಾರವನ್ನು ನೀಡಿದರು.

"ಒಮ್ಮೆ ಗುರುಗಳು ತಮ್ಮ ಅಥಣಿ ಮಠಕ್ಕೆ ಸರಿಯಾದ ಉತ್ತರಾಧಿಕಾರಿ ಗಂಗಾಧರನೇ ಎಂದು ನಿರ್ಧರಿಸಿ ಒಂದು ಶುಭಗಳಿಗೆಯಲ್ಲಿ ಭಕ್ತಮಾಹೇಶ್ವರರ ಸಮ್ಮುಖದಲ್ಲಿ ಜಂಗಮದೀಕ್ಷೆಯನ್ನಿತ್ತು ತಮ್ಮ ವರಪುತ್ರರನ್ನಾಗಿ ಮಾಡಿಕೊಂಡರು." ಮಡಿವಾಳೇಶ್ವರರ ಕರಸಂಜಾತರಾದ ಗಂಗಪ್ಪ ಗಂಗಾಧರ ಮಡಿವಾಳೇಶ್ವರರಾದರು. ದಿನಂಪ್ರತಿ ಬೆಳಗಿನ ಜಾವದಲ್ಲಿ ಎದ್ದು ಇಷ್ಟಲಿಂಗ ಪೂಜೆಯನ್ನು ಮುಗಿಸಿ ಅಕ್ಷರಾಭ್ಯಾಸದಲ್ಲಿ ತೊಡಗುತ್ತಿದ್ದರು. ಕೆಲವು ದಿನಗಳ ನಂತರ ಗುರುಗಳು ಲಿಂಗೈಕ್ಯರಾದರು. ಈ ಅನಿರೀಕ್ಷಿತ ಘಟನೆಯೊಂದು ಗಂಗಾಧರರ ಬದುಕಿನ ದಿಕ್ಕನ್ನೇ ಬದಲಿಸಿತು. ತಮ್ಮ ಪಾಲಿನ ತಾಯಿ, ತಂದೆ, ದೈವ, ಸರ್ವಸ್ವವಾದ ಗುರುಗಳನ್ನು ಕಳೆದುಕೊಂಡು ಏನೂ ತೋಚದೆ ಮಂಕಾಗಿ ಕುಳಿತುಬಿಟ್ಟರು. ಗಂಗಾಧರನ ಈ ಸ್ಥಿತಿಯನ್ನು ಕಂಡ ತಾಯಿ ತಂದೆಗಳು ಆತನನ್ನು ಸಂತೈಸಿ ಪುನಃ ಅಕ್ಷರಾಭ್ಯಾಸ ಮಾಡಲು ವ್ಯವಸ್ಥೆ ಮಾಡಿಕೊಟ್ಟರು. ಗಂಗಾಧರನು ಚೇತರಿಸಿಕೊಂಡು ಮತ್ತೆ ತನ್ನ ಅಭ್ಯಾಸವನ್ನು ಮುಂದುವರೆಸಿದನು ಜನರು ಗಂಗಾಧರನ ಕಾವ್ಯ ಪುರಾಣಗಳ ವಾಚನವನ್ನು ಆಲಿಸಿ ಪ್ರವಚನಗಳನ್ನೇರ್ಪಡಿಸಿದರು. ಗಂಗಾಧರನು ಕನ್ನಡ, ಹಳಗನ್ನಡ ಕಾವ್ಯಗಳನ್ನು, ಸಂಸ್ಕೃತ ಕಾವ್ಯಗಳನ್ನು, ಪುರಾಣಗಳನ್ನು ಸರಳವಾಗಿ, ಸುಂದರವಾಗಿ, ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದನು. ಗಂಗಾಧರನ ಪ್ರವಚನಗಳನ್ನು ಜನರು ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಅಂತಹ ಚಿತ್ರಕಶಕ್ತಿ ಗಂಗಾಧರನಲ್ಲಿತ್ತು. ಇದರಿಂದ ಗಂಗಾಧರನ ಕೀರ್ತಿ ಪ್ರತಿಷ್ಠೆಗಳು ಎಲ್ಲೆಡೆ ಹಬ್ಬಿ ಹೆಚ್ಚು ಹೆಚ್ಚು ಜನರು ಬರತೊಡಗಿದರು. ಗಂಗಾಧರನು ತಂದೆ-ತಾಯಿಗಳ ಪ್ರೀತಿ ವಾತ್ಸಲ್ಯಕ್ಕೆ ಮಣಿದು ಅಥಣಿಗೆ ಹೋಗದೆ ಬೈಲಹೊಂಗಲದಲ್ಲಿಯೇ ಉಳಿದುಬಿಟ್ಟನು. ಆದ್ದರಿಂದ ಗಂಗಾಧರನ ತಂದೆಯವರೇ ಮುಂದೆ ಅಥಣಿಗೆ ಹೋಗಬೇಕಾಯಿತು.


೩. ಕುಟುಂಬ

ಗಂಗಾಧರ ಮಡಿವಾಳೇಶ್ವರ ತುರಮರಿಯವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲದವರು. ಬೈಲಹೊಂಗಲ ಮೊದಲು ಸಂಪಗಾವಿ ತಾಲ್ಲೂಕಿನಲ್ಲಿದ್ದು ಈಗ ಇದೇ ತಾಲ್ಲೂಕಿನ ಕೇಂದ್ರವಾಗಿದೆ. ತುರಮರಿಯವರ ತಂದೆ ಚೆನ್ನಬಸಪ್ಪ ತಾಯಿ ಪಾರ್ವತಿಯವರ ಮಗನಾಗಿ ೧೮೨೭ರಲ್ಲಿ ಜನಿಸಿದರು. ಇವರು ವೀರಶೈವ ಪಂಚಮಸಾಲಿ ಮನೆತನದವರಾಗಿದ್ದು ಪ್ರಮುಖವಾಗಿ ಬೇಸಾಯವನ್ನು ಮಾಡುತ್ತಿದ್ದರು. ಇವರನ್ನು ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಒಕ್ಕಲಿಗರು ಎನ್ನುತ್ತಿದ್ದರು.

ಗಂಗಾಧರರ ತಂದೆಯುವರಾದ ಚೆನ್ನಬಸಪ್ಪನವರು ಎರಡು ವಿವಾಹಗಳನ್ನು ಮಾಡಿಕೊಂಡಿದ್ದರು. ಮೊದಲ ಪತ್ನಿಯ ಹೆಸರು ಮುರಿಗೆಮ್ಮ ಇವರಿಗೆ ಸೋಮಪ್ಪ, ಸಿದ್ಧಲಿಂಗಪ್ಪ ಮತ್ತು ಚೆನ್ನಮ್ಮ ಎಂಬ ಮೂವರು ಮಕ್ಕಳಿದ್ದಾರೆ. ಎರಡನೆಯ ಪತ್ನಿಯಾದ ಪಾರ್ವತಿಯವರಿಗೆ ಗಂಗಪ್ಪ, ವೀರಪ್ಪ ಮತ್ತು ಶಿವಮ್ಮ ಎಂಬ ಮೂವರು ಮಕ್ಕಳಿದ್ದರು. ಗಂಗಾಧರ ಮಡಿವಾಳೇಶ್ವರರು

ಕೂಡ ಇಬ್ಬರನ್ನು ವಿವಾಹವಾಗಿದ್ದರು. ಮೊದಲ ಪತ್ನಿ ನಾಗವ್ವ ಬೈಲಹೊಂಗಲದ ಮುನವಳ್ಳಿ ಮಠದವರು. ಎರಡನೆಯವರು ಮುರಗೋಡದ ಹಿರೇಮಠದವರಾಗಿದ್ದರು. ಇವರಿಗಿದ್ದ ಒಂದೇ ಒಂದು ಸಂತಾನವು ಮೈಲಿಬೇನೆಗೆ ತುತ್ತಾಗಿ ಮರಣ ಹೊಂದಿತ್ತು. ನಂತರ ಗಂಗಾಧರರು ತಮ್ಮ ಕಿರಿಯ ತಮ್ಮನಾದ ಸಿದ್ದಲಿಂಗಪ್ಪನನ್ನು ದತ್ತು ತೆಗೆದುಕೊಂಡರು. ಆದರೆ ಈತನ ಮಕ್ಕಳು ಯಾರು ಉಳಿಯದೆ ಅದರ ಶಾಖೆ ನಿಂತು ಹೋಯಿತು

"ಗಂಗಾಧರ ತುರಮರಿಯವರ ವಂಶಾವಳಿ ಈ ಕೆಳಗಿನಂತಿದೆ.



೪. ವೃತ್ತಿ

ಅಥಣಿ ಮಠಕ್ಕೆ ಉತ್ತರಾಧಿಕಾರಿಯಾಗಿ ಹೋಗಬೇಕಾದ ಗಂಗಾಧರರು ವಿಧಿಯ ಲಿಖಿತದಂತೆ ಬೈಲುಹೊಂಗಲದಲ್ಲಿಯೇ ಉಳಿದರು. ಅಲ್ಲಿಯೇ ತಮ್ಮ ಗೆಳೆಯರ ಸಹಾಯದಿಂದ ಕನ್ನಡ ಶಾಲೆಯನ್ನು ತೆರೆದರು. ಈ ಹಿಂದೆ ಶಾಲೆಗಳನ್ನು 'ಗಾಂವಠೀ'ಶಾಲೆಗಳೆಂದು ಕರೆಯುತ್ತಿದ್ದರು. ಪ್ರಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸೇರಲಾರಂಭಿಸಿದರು. ಗಂಗಾಧರರ ಬೋಧನಾ ವಿಧಾನ ಅವರ ಪಾಂಡಿತ್ಯ ವಯಸ್ಕರನ್ನು ಸಹ ಶಾಲೆಗೆ ಬರಮಾಡಿಕೊಂಡಿತು. ಇದರಿಂದ ಸಂತುಷ್ಟರಾದ ಗಂಗಾಧರರು ಮಕ್ಕಳಿಗೆ ಮೊದಲು ಕನ್ನಡ ಗದ್ಯ ಮತ್ತು ಪದ್ಯಗಳನ್ನು ಹೇಳಿಕೊಡುತ್ತಿದ್ದರು. ಹಾಗೆಯೇ ವಯಸ್ಕರಿಗೆ ಅಕ್ಷರಾಭ್ಯಾಸವನ್ನು ಮಾಡಿಸುತ್ತಿದ್ದರು. ಪುರಾಣ, ಕಾವ್ಯಗಳನ್ನು ಹೇಳಿಕೊಡುತ್ತಿದ್ದರು.

ಗಂಗಾಧರರಿಗೆ ಮಾತೃಭಾಷೆ ಕನ್ನಡವೆಂದರೆ ಅಪಾರ ಪ್ರೀತಿ ಹಾಗಾಗಿ ತಮ್ಮ ಶಾಲೆಯ

ಮಕ್ಕಳಿಗೂ ಸಹ ಮಾತೃಭಾಷೆ ಕನ್ನಡದ ಮೂಲಕವೇ ಶಿಕ್ಷಣವನ್ನು ನೀಡಬೇಕೆಂದು ನಿರ್ಧರಿಸಿದರು. ಅದರಂತೆ ಮಕ್ಕಳಿಗೆ ಕನ್ನಡ ಭಾಷೆಯ ಬಗ್ಗೆ ಅವರಲ್ಲಿ ಅರಿವು ಮೂಡಿಸುವ ಪ್ರಯತ್ನದಲ್ಲಿ ತೊಡಗಿದರು. ಆದರೆ ಮರಾಠಿ ಭಾಷೆಯ ಹಾವಳಿಯೇ ಹೆಚ್ಚಾಗಿರುವ ಈ ಪ್ರದೇಶದ ಜನರು ವ್ಯಾವಹಾರಿಕ ಭಾಷೆಯಾದ ಮರಾಠಿ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕು. ಇದರಿಂದ ಸರಕಾರಿ ನೌಕರಿ ಗಿಟ್ಟಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಕನ್ನಡದ ಶಿಕ್ಷಣವನ್ನು ಅಲ್ಲಗಳೆದರು. ಗಂಗಾಧರರು ಸಹ ಮರಾಠಿ ಭಾಷೆಯಲ್ಲಿ ಶಿಕ್ಷಣ ನೀಡಲು ನಿರಾಕರಿಸಿದರು. ಪರಿಣಾಮವಾಗಿ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು. ಇದರಿಂದ ಶಾಲೆ ಮುಚ್ಚುವ ಪರಿಸ್ಥಿತಿ ಬಂದೊದಗಿತು.

ಗಂಗಾಧರರು ಕನ್ನಡ, ಹಳಗನ್ನಡ, ಮರಾಠಿ, ಸಂಸ್ಕೃತ ಮತ್ತು ಆಂಗ್ಲಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದರೂ ಕೂಡ ಮರಾಠಿ ಭಾಷೆಯ ಶಿಕ್ಷಣವನ್ನು ನಿರಾಕರಿಸಿದರು. ಏಕೆಂದರೆ ಕನ್ನಡ ನಾಡಿನಲ್ಲಿ ಮೊದಲು ಮಾತೃಭಾಷೆಯ ಮೂಲಕವೇ ಶಿಕ್ಷಣ ನೀಡಬೇಕು. ಹಾಗೂ ಕನ್ನಡಭಾಷೆ, ಸಾಹಿತ್ಯ ಸಂಸ್ಕೃತಿಗಳು ಮೂಲೆಗುಂಪಾಗಿ ಅಳಿವಿನ ಅಂಚಿನಲ್ಲಿದ್ದ ಕನ್ನಡ ಭಾಷೆಯನ್ನು ಉಳಿಸಿಬೆಳೆಸುವ ಇಚ್ಛೆಯನ್ನು ಹೊಂದಿದ್ದರು. ಗಂಗಾಧರರ ಈ ಕಾರ್ಯ ಫಲಕಾರಿಯಾಗದೆ ಬೈಲಹೊಂಗಲವನ್ನು ಬಿಟ್ಟು ಧಾರವಾಡದ ಬಂಕಾಪುರಕ್ಕೆ ಬಂದರು. "ಕ್ರಿ.ಶ.೧೮೪೮ರ ಜೂನ್ ೯ ರಂದು ತಮ್ಮ ಸ್ನೇಹಿತರ ಸಹಾಯದಿಂದ ಕನ್ನಡ ಶಾಲೆಯನ್ನು ಪುನಃಸ್ಥಾಪಿಸಿ ಏಳೆಂಟು ವರುಷಗಳಲ್ಲಿ ಸತತವಾಗಿ ಹಗಲಿರುಳು ದುಡಿದು ಆ ಶಾಲೆಯನ್ನು ಮೇಲ್ಮಟ್ಟಕ್ಕೆ ಕೊಂಡೊಯ್ದರು. ಈ ಒಂದು ಕಾರ್ಯ ಗಂಗಾಧರರ ಕನ್ನಡ ಭಾಷೆಯ ಮೇಲಿನ ಅಭಿಮಾನ. ಅವರ ಪಾಂಡಿತ್ಯಪೂರ್ಣ ವ್ಯಕ್ತಿತ್ವ, ಕಾರ್ಯತತ್ಪರತೆ ಕಾರ್ಯದಕ್ಷತೆಯನ್ನು ಬಂಕಾಪುರದ ಜನತೆಗೆ ಪರಿಚಯ ಮಾಡಿಕೊಟ್ಟಿತು. ಇದರಿಂದ ಬಂಕಾಪುರದ ಜನತೆ ಗಂಗಾಧರರನ್ನು ಮನಸಾರೆ ಹೊಗಳಿ ಆದರ್ಶ ಶಿಕ್ಷಕರೆಂದು ಸನ್ಮಾನಿಸಿದರು.

ಕಾಲಾನಂತರದಲ್ಲಿ ಬಂಕಾಪುರದಿಂದ ಹುನಗುಂದ ಶಾಲೆಗೆ ಗಂಗಾಧರರು ವರ್ಗಾವಣೆ ಹೊಂದಿದಾಗ ಅನಂತರದಲ್ಲಿ ಬಂದ ಶಿಕ್ಷಕರು ಶಾಲೆಯನ್ನು ಸರಿಯಾಗಿ ನಡೆಸದೆ ಇದ್ದಾಗ ಬಂಕಾಪುರದ ವ್ಯಕ್ತಿಯೊಬ್ಬರು ಶಾಲೆಯ ಸ್ಥಿತಿಗತಿ ಮತ್ತು ಅಲ್ಲಿನ ಶಿಕ್ಷಕರನ್ನು ಕುರಿತು ೧೯೭೫ರ 'ಶಾಲಾ ಪತ್ರಿಕೆ'ಯಲ್ಲಿ ಈ ರೀತಿ ಪ್ರಕಟಿಸಿದರು. "ಈ ಬಂಕಾಪುರ ಶಾಲೆಯ ಸ್ಥಾಪನವು ತಾರೀಖು ೯ನೆಯ ಜೂನ್ ೧೯೪೮ನೆಯ ಇಸ್ವಿಯ ದಿವಸ, ಗಂಗಾಧರ ಮಡಿವಾಳೇಶ್ವರ ಎಂಬುವವರಿಂದ ಸ್ಥಾಪಿಸಲ್ಪಟ್ಟಿತು. ಅವರು ಅಜಮಾಸು ೨ ರಿಂದ ೮ ವರ್ಷದ ತನಕ ಈ ಗ್ರಾಮದಲ್ಲಿ ಮಾಸ್ತರ ಕೆಲಸವನ್ನು ಮಾಡಿ ಈ ಶಾಲೆಯನ್ನು ಉತ್ತಮ ಸ್ಥಿತಿಗೆ ತಂದು ಬಹುಜನರನ್ನು ಯೋಗ್ಯಮಾರ್ಗಕ್ಕೆ ಹಚ್ಚಿದರು. ಅನಂತರ ಬಂದಂಥಾ ಮಾಸ್ತರರು ಕೆಲ

ಕೆಲವು ದಿವಸ ಈ ಗ್ರಾಮದಲ್ಲಿ ವಾಸಮಾಡಿ ತಮ್ಮ ಕೈಲಾದ ಮಟ್ಟಿಗೂ ಶ್ರಮಪಟ್ಟು ಮೊದಲಿನ ಸ್ಥಿತಿಯನ್ನು ಕೆಡಿಸಿ ಸಾಲಿಯನ್ನು ಬಂದು ಸುದ್ದಾ ಮಾಡಿಸಿಬಿಟ್ಟರು."[೪] ಎಂದು ತಮ್ಮ ಅಳಲನ್ನು ತೋಡಿಕೊಂಡರು.

ಗಂಗಾಧರರ ಕನ್ನಡ ಭಾಷಾಭಿಮಾನ, ಬೋಧನಾ ವೈಖರಿ, ಕಾರ್ಯದಕ್ಷತೆ ಹುನಗುಂದದಲ್ಲಿ 'ಅಖವಾನಜಿ' ಹುದ್ದೆಯನ್ನು ಅಲಂಕರಿಸುವಂತೆ ಮಾಡಿತು. ಅಲ್ಲದೆ ಆಂಗ್ಲ ಶಿಕ್ಷಣಾಧಿಕಾರಿಗಳು ಇವರ ವಿದ್ವತ್ತನ್ನು ಗುರ್ತಿಸಿದುದು ಕೂಡ ಮುಖ್ಯ ಕಾರಣವಾಗಿದೆ. ಧಾರವಾಡ ಜಿಲ್ಲೆಯ ದಕ್ಷಿಣ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆಂಗ್ಲ ಅಧಿಕಾರಿಗಳಾದ ವಿಲಿಯಂ ಅಲೆನ್ ರಸೆಲ್ ಮತ್ತು ಎಲಿಯಟ್‌ರವರು ಉತ್ತರ ಕನ್ನಡದ ನಾಲ್ಕು ಜಿಲ್ಲೆಗಳಲ್ಲಿನ ಜನರ ಮಾತೃಭಾಷೆ ಕನ್ನಡವಾಗಿದ್ದರಿಂದ ಇವರಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣವನ್ನು ನೀಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದರು. ಅದರಂತೆ ಮುಂಬಯಿ ಶಿಕ್ಷಣ ಇಲಾಖೆಯು ೧೮೫೯ರಲ್ಲಿ ಕನ್ನಡ ಶಾಲೆಗಳನ್ನು ತೆರೆಯಿತು. ಹಾಗೂ ಕನ್ನಡ ಭಾಷೆಯನ್ನು ಉತ್ತಮವಾಗಿ ಕಲಿಸುವ, ಕನ್ನಡ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದ ಪಾಂಡಿತ್ಯ ಪೂರ್ಣ ಶಿಕ್ಷಕರನ್ನು ವಿದ್ವಾಂಸರನ್ನು ಶೋಧಿಸತೊಡಗಿದರು.

ಈ ಮೊದಲೇ ಜನರಿಂದ ಗಂಗಾಧರ ಮಡಿವಾಳೇಶ್ವರರ ಬಗ್ಗೆ ಕೇಳಿ ತಿಳಿದಿದ್ದ ಶಿಕ್ಷಣಾಧಿಕಾರಿಗಳು ಗಂಗಾಧರರ ಪ್ರತಿಭೆ, ಅವರ ಪಾಂಡಿತ್ಯ, ಕನ್ನಡದ ಬಗ್ಗೆ ಅವರಿಗಿದ್ದ ಒಲವು, ಭಾಷಾಭಿಮಾನ, ಕನ್ನಡ ಭಾಷೆಯ ಮೇಲಿನ ಪ್ರಭುತ್ವ ಹಾಗೂ ಕಾರ್ಯತತ್ಪರತೆಯನ್ನು ಮೆಚ್ಚಿ ಗಂಗಾಧರರನ್ನು ಆಯ್ಕೆ ಮಾಡಿದರು. ಈ ಇಲಾಖೆಯು 'ಅಖವಾನಜಿ' ಮತ್ತು 'ಪಂತೋಜಿ' ಎಂಬ ಎರಡು ಹುದ್ದೆಗಳನ್ನು ರೂಪಿಸಿತು. ಅಖವಾನಜಿ ಎಂದರೆ ಮುಖ್ಯೋಪಾಧ್ಯಾಯ ಹುದ್ದೆ 'ಪಂತೋಜಿ ಎಂದರೆ ಸಹಾಯಕ ಶಿಕ್ಷಕ ಹುದ್ದೆಯಾಗಿದೆ. ಈ 'ಅಖವಾನಜಿ' ಹುದ್ದೆಗೆ ೨೫ ರೂಪಾಯಿ ಸಂಬಳವಾದರೆ 'ಪಂತೋಜಿ' ಹುದ್ದೆಗೆ ೧೦ ರೂಪಾಯಿ ಸಂಬಳವನ್ನು ನಿಗದಿಪಡಿಸಲಾಗಿತ್ತು. ಅದರಂತೆ ಗಂಗಾಧರ ಮಡಿವಾಳೇಶ್ವರರು ಹುನಗುಂದದ ಶಾಲೆಗೆ 'ಅಖವಾನಜಿ' ಅಂದರೆ ಮುಖ್ಯೋಪಾಧ್ಯಾಯರಾಗಿ ೨೫ ರೂಪಾಯಿ ಸಂಬಳವನ್ನು ತೆಗೆದುಕೊಂಡ ಮೊದಲಿಗರಾಗಿದ್ದಾರೆ. ಹುನಗುಂದ ಈ ಹಿಂದೆ ಬೆಳಗಾವಿ ಜಿಲ್ಲೆಗೆ ಸೇರಿದ ಒಂದು ಭಾಗವಾಗಿದ್ದು ಈಗ ಬಿಜಾಪುರ ಜಿಲ್ಲೆ ಸೇರಿದೆ. ಗಂಗಾಧರರು ಪ್ರತಿಭಾವಂತ ಶಿಕ್ಷಕರಾಗಿದ್ದು ವಿದ್ಯಾರ್ಥಿಗಳಿಗೆ ಸಂಸ್ಕೃತ, ಹಳಗನ್ನಡ ಕಾವ್ಯಗಳನ್ನು ಸರಳವಾಗಿ, ಸುಲಭವಾಗಿ ಹೇಳಿಕೊಡುತ್ತಿದ್ದರು. ಗಂಗಾಧರರ ಬೋಧನಾ ಕೌಶಲ್ಯ, ಪಾಂಡಿತ್ಯಪೂರ್ಣ ಪ್ರತಿಭೆ, ಶಿಸ್ತು, ಕಾರ್ಯದಕ್ಷತೆ ಮೊದಲಾದ ಗುಣಗಳು ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿ ಅವರ ಅಚ್ಚುಮೆಚ್ಚಿನ ಶಿಕ್ಷಕರಾದರು.

ಗಂಗಾಧರರು ತಮ್ಮ ೨೯ನೆಯ ವಯಸ್ಸಿನಲ್ಲಿಯೇ ಶ್ರೇಷ್ಠ ದರ್ಜೆಯ, ಆದರ್ಶ ಶಿಕ್ಷಕರಾಗಿ

ಮಕ್ಕಳ ಅಚ್ಚುಮೆಚ್ಚಿನ ಗುರುಗಳಾಗಿದ್ದಲ್ಲದೆ, ಸಮಾಜದಲ್ಲಿ ಗಂಗಾಧರರ ಕೀರ್ತಿ ಪ್ರತಿಷ್ಠೆಗಳು ಹೆಚ್ಚಾದವು. ಹಾಗೂ ಅಂದಿನ ಕಾಲಕ್ಕೆ ೨೫ ರೂಪಾಯಿ ಸಂಬಳ ಹೆಚ್ಚಿನದಾಗಿದ್ದು, ಗಂಗಾಧರರ ಜೀವನ ಸುಗಮವಾಗಿ ಸಾಗಿತ್ತು. ಪ್ರೊ.ಭೂಸನೂರರು ಗಂಗಾಧರರನ್ನು ಕುರಿತು ಹೀಗೆ ಹೇಳುತ್ತಾರೆ.

"ಶಿಕ್ಷಣದಲ್ಲಿ ಒಳ್ಳೆ ಪಳಗಿದವರು ಗಂಗಾಧರಯ್ಯನವರು ಹಳಗನ್ನಡ ಕಾವ್ಯ, ಸಂಸ್ಕೃತದಲ್ಲಿ ಮತ್ತೆ ಗಣಿತ ಭಾಷಾ ವಿಷಯ, ವ್ಯಾಕರಣ, ಛಂದಶ್ಶಾಸ್ತ್ರದಲ್ಲಿ ಇವರಿಗೆ ಸರಿಸಮಾನರಾದ ಶಿಕ್ಷಕರು ಅಂದು ಯಾರೂ ಇದ್ದಿರಲಿಲ್ಲವೆಂದೇ ಹೇಳಬೇಕು. ಇವರ ಪಾಂಡಿತ್ಯ, ಪ್ರತಿಭೆ, ಇವರ ಶಿಕ್ಷಣ, ಭಕ್ತಿ, ವಿಷಯ ವಿವರಣೆ ಕೌಶಲ್ಯ, ಇವರ ವಿದ್ಯಾಸಕ್ತಿ, ಕಾರ್ಯಕ್ಷಮತೆ, ಇವರ ಕನ್ನಡ ಉಜ್ವಲಾಭಿಮಾನ, ಇವರ ಮೃದುಗಂಭೀರ ಸ್ವಭಾವ. ಇವರವೇ ೫೫ ವಿದ್ಯಾರ್ಥಿಗಳಿದ್ದ ಹುನಗುಂದದ ಶಾಲೆ ಸಾರಸ್ವತ ಸದನವಾಯ್ತು. ತಮ್ಮ ಮಹಾಪುಣ್ಯ, ಮಹಾಭಾಗ್ಯವೆಂದು ವಿದ್ಯಾರ್ಥಿಗಳೆಂದುಕೊಂಡರೆ, ಶಿಕ್ಷಕರು, ಅಧಿಕಾರಿಗಳು ಸಹಿತ ಬೆರಳು ಕಚ್ಚಿದರು.[೫]

ಹೀಗೆ ಗಂಗಾಧರರು ಯಾವ ಹೊಗಳಿಕೆ ತೆಗಳಿಕೆಗಳಿಗೆ ಮನವೀಯದೆ ತಮ್ಮ ಕೆಲಸ ಕಾರ್ಯಗಳನ್ನು ಅರ್ಪಣ ಭಾವದಿಂದ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಸರ್ಕಾರವು ತನ್ನ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಿಕೊಳ್ಳಲು ನಿರ್ಧರಿಸಿತು. ಅದರಂತೆ ಸರ್ಕಾರಿ ಸೇವೆಯಲ್ಲಿರುವವರ ಸಂಬಳವನ್ನು ಕಡಿತಗೊಳಿಸಿತು. ಇದಕ್ಕೆ ಅಖವಾನಜಿ ಮತ್ತು ಪಂತೋಜಿ ಹುದ್ದೆಗಳು ಕೂಡ ಒಳಗಾಗಿದ್ದು ಅಖವಾನಜಿ ಮತ್ತು ಪಂತೋಜಿ ಹುದ್ದೆಗಳಿದ್ದ ೨೫ ರೂಪಾಯಿ ಮತ್ತು ೧೦ ರೂಪಾಯಿಗಳ ಸಂಬಳವು ಕ್ರಮವಾಗಿ ೧೦ ಮತ್ತು ೫ ರೂಪಾಯಿಗಳಿಗೆ ಇಳಿಮುಖವಾಯಿತು.

ಸರ್ಕಾರದ ಈ ದಿಢೀರ್ ನಿರ್ಧಾರದಿಂದ ಗಂಗಾಧರರ ಕುಟುಂಬದ ಪೋಷಣೆ ಮತ್ತು ಜೀವನ ನಿರ್ವಹಣೆ ಕಷ್ಟಸಾಧ್ಯವಾಯಿತು. ಬೇರೆ ಯಾವ ಮೂಲದಿಂದಲೂ ಆರ್ಥಿಕ ಸಹಾಯ ಸಹಕಾರಗಳು ಸಿಗದೆ ತತ್ತರಿಸಿದರು. ಅಲ್ಲದೆ ಕುಟುಂಬದ ಜವಾಬ್ದಾರಿ ಹೆಚ್ಚಿದ್ದರಿಂದ ಮುಖ್ಯೋಪಾಧ್ಯಾಯ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಕೈಗೊಳ್ಳಲು ನಿರ್ಧರಿಸಿ ಹೈದರಾಬಾದ್ ಕರ್ನಾಟಕದಲ್ಲಿ ಮೋಜಣಿದಾರ ಕೆಲಸಕ್ಕೆ ಪ್ರಯತ್ನಿಸಿ ವಿಫಲರಾದರು. ಒಂದು ವೇಳೆ "ಗಂಗಾಧರಯ್ಯನವರು ವಿದ್ಯಾಖಾತೆಯನ್ನು ಬಿಟ್ಟು ಸರ್ವೇಖಾತೆಯಲ್ಲಿ ಸೇರಿದ್ದರೆ, ಕನ್ನಡಕ್ಕೆ ಆಗಬಹುದಾದ ನಷ್ಟವನ್ನು ಊಹಿಸಬಹುದು.[೬]

ಕೊನೆಗೆ ಗಂಗಾಧರರು ಇದ್ದ ನೌಕರಿಯಲ್ಲಿ ಮುಂದುವರಿಯಬೇಕಾಗಿ ಬಂತು. ಈ ಬಗ್ಗೆ ಗಂಗಾಧರರು ರಾ.ರಾ.ಫಕೀರಪ್ಪಾ ಶಿವಪ್ಪಾ ಕಿತ್ತೂರ ಮುಕ್ಕಾಂ ಭಾವಣಿ, ಇವರಿಗೆ ಪತ್ರದ ಮುಖೇನ ತಮ್ಮ ಪರಿಸ್ಥಿತಿಯನ್ನು ತಿಳಿಸಿದರು. ಆ ಪತ್ರ ಇಂತಿದೆ.

"ಶ್ರೀ ಗುರು ಪ್ರಸನ್ನ

ರಾ.ರಾಜಶ್ರೀ ಫಕೀರಪ್ಪಾ ಶಿವಪ್ಪಾ ಕಿತ್ತೂರ ಮುಕ್ಕಾಂ ಛಾವಣಿ ಲಿಂಗಸುಗೂರು ಇವರಿಗೆ ನಿಮ್ಮ ಹುನಗುಂದ ಅಖವಾನಜಿ ಗಂಗಾಧರ ಮಡಿವಾಳೇಶ್ವರ ಮಾಡುವ ಅನೇಕಾಶೀರ್ವಾದಗಳು. ತಾ. ೧೨ ನವೆಂಬರ್‌ವರೆಗೆ ಶ್ರೀ ಗುರುವಿನ ದಯೆಯಿಂದ ಕ್ಷೇಮದಲ್ಲಿದ್ದೇವೆ. ತಮ್ಮ ಕಡೆಯ ವರ್ತಮಾನ ತಿಳಿಯದೆ ೪-೫ ತಿಂಗಳಾಯಿತು. ಈ ಪ್ರಕಾರ ಮರೆತು ಬಿಡಬಾರದೆಂದು ನನ್ನ ಹೇಳಿಕೆಯಿದೆ. ತಾವು ಬಲ್ಲವರೇ ಇದ್ದೀರಿ. ಇನ್ನು ಮೇಲೆ ಪತ್ರಗಳ ಮುಖದಿಂದ ವರ್ತಮಾನ ತಿಳಿಸಿ, ಇತ್ತ ಕಡೆಯ ಸಮಾಚಾರವನ್ನು ತೆಗೆದುಕೊಳ್ಳುತ್ತ ಹೋಗಬೇಕು. ಇನ್ನು ಇತ್ತ ಕಡೆಯ ಪೂರ್ವೋತ್ತರವನ್ನು ಕಲಮವಾರ ಬರೆದಿದ್ದೇನೆ.

೧. ನಮ್ಮ ಕುಟುಂಬ ಹಡೆಯಲಿಕ್ಕೆ ಹೋಗಿ ಎರಡೂವರೆ ತಿಂಗಳಾಯಿತು. ಇನ್ನೂ ಹಡೆದ ವರ್ತಮಾನ ಬಂದಿಲ್ಲ. ಈಗ ದಿವಸದಲ್ಲಿ ಅದೆ. ಚಿ.ಚೆನ್ನಬಸವ್ವನು ಸಹ ಸುಖರೂಪದಲ್ಲಿ ಮುರಗೋಡದೊಳಗೆ ಇದ್ದಾರೆ. ಹೊಂಗಲ ಮನೆಯ ಕಡೆಯ ವರ್ತಮಾನ ಉತ್ತಮ.

೨. ನಮ್ಮ ಸಂಬಳವು ದರ ತಿಂಗಳಿಗೆ ೨೫ರೂ. ಯಂತೆ ೧೪ ತಿಂಗಳದ್ದು ಮುಟ್ಟಿತು. ಇನ್ನು ಮೇಲೆ ದರ ತಿಂಗಳಿಗೆ ೧೨ರೂ. ಯಂತೆ ಕೊಡಬೇಕೆಂದು ಹುಕುಮು ಬಂದಿದೆ. ಇದರಂತೆ ಸರ್ವ ಪಂತೋಜಿಗಳಿಗೂ ಕಡಿಮೆ ಆಯಿತು. ಶಾಲಾ ಖಾತೆಕ್ಕೆ ಸಂಬಳ ಕಡಿಮೆ ಮಾಡಬೇಕೆಂದು ಬೊಂಬಾಯಿಯಿಂದ ಹುಕುಮು ಬಂದ ಪ್ರಯುಕ್ತ ಸಮಸ್ತರಿಗೂ ಅರ್ಧ ಸಂಬಳ ಕಡಿಮೆ ಆಯಿತು. ರಾ.ರಾ.ಧಾರವಾಡ ಅಖವಾನಜಿ ರಾಚೋಟಪ್ಪನವರಿಗೆ ಸಹ ೧೨ ರೂ.ಯಂತೆ ಆಯಿತು. ಇನ್ನು ಮೇಲೆ ಮುಂದೆ ಹ್ಯಾಗಾಗುತ್ತದೋ ತಿಳಿಯದು. ಇಲ್ಲಿ ಸಾಲೆಯಲ್ಲಿ ೫೫ ಇದ್ದಾರೆ. ಅಪೂರ್ಣಾಂಕ ಕಲಿಯುತ್ತಾರೆ. ಮೆ.ಬೇಕರ ಸಾಹೇಬರು ೧೫-೨೦ ದಿವಸದಲ್ಲಿ ಪರೀಕ್ಷೆಗೋಸ್ಕರ ಬರತಕ್ಕವರಿದ್ದಾರೆ. ಸಾಹೇಬರು ಬಂದ ವೇಳೆಯಲ್ಲಿ ನಾನು ರಾಜಿನಾಮೆ ಕೊಡಬೇಕೆಂದು ಯೋಚನೆ ಮಾಡಿದ್ದೇನೆ. ಕಾರಣವೇನೆಂದರೆ ೧೨ರೂ. ಸಂಬಳವಿದೆ ಆದೀತೇನು ಹೋದೀತೇನು? ಇಷ್ಟರ ದಿಸೆಯಿಂದ ನೌಕರಿ ಮಾಡುವುದಕ್ಕಿಂತಲೂ ಪಲ್ಲೆ ಬಕ್ಕರಿ ಸಿಕ್ಕರೆ ಸಾಕು. ಸ್ವದೇಶದಲ್ಲಿರುವುದು ವಾಸಿಯಾಗಿ ತೋರುತ್ತದೆ. ಇದರ ಮೇಲೆ ಈಶ ಸಂಕಲ್ಪ ಹ್ಯಾಗದೆಯೋ ತಿಳಿಯದು. ಮುಖ್ಯ ಮಾತು ಶಾಲಾ ಖಾತೇದಲ್ಲಿ ಸ್ವಾರಸ್ಯವಿಲ್ಲ. ನನ್ನ ಮನಸ್ಸಿನೊಳಗೆ ಲಿಂಗಸೂರ ಪ್ರಾಂತಕ್ಕೆ ಬರಬೇಕೆಂಬ ಆಸ್ಥಾ ಇದೆ. ಅಲ್ಲಿ ಏನಾದರೂ ನನ್ನ ಯೋಗ್ಯತೆಯ ಪ್ರಕಾರ ನೌಕರಿ ಹತ್ತುವ ಡೌಲು ಕಂಡರೆ ಬರೆದು ತಿಳಿಸಬೇಕು. ಅಂದರೆ ಟಾಕೋಟಾಕ ಬರುತ್ತೇನೆ. ನಿಮಗೆ ಸಂಬಳವೇನಿದೆ ? ದಾವ ಕೆಲಸದ ಮೇಲೆ ಇದ್ದೀರಿ ? ಈ ಯಾವತ್ತು ವಿಸ್ತಾರಪೂರ್ವಕ ಬರೆದು ತಿಳಿಸಬೇಕು. ನಿಮ್ಮ ಭೆಟ್ಟಿಯ ಅಪೇಕ್ಷೆ ಬಹಳವಾಗಿದೆ. ಕೂಡಿದರೆ ಒಂದು ವೇಳೆ ಭೆಟ್ಟಿಕೊಟ್ಟು ಹೋಗಬೇಕು. ಅಂದರೆ ಬಹಳ ಒಳ್ಳೇದಾಗುತ್ತದೆ ಮರೆಯಬೇಡಿರಿ.

ಮಮತಾಪೂರ್ಣ ಇರಬೇಕು. ಇತಿ ಆಶೀರ್ವಾದಗಳು.[೬]

ಮೊದಲೇ ಆರ್ಥಿಕ ಸಂಕಷ್ಟದಲ್ಲಿದ್ದ ಗಂಗಾಧರಯ್ಯನವರಿಗೆ ಮತ್ತೊಂದು ನೋವಿನ ಘಟನೆ ಎದುರಾಗಿತ್ತು. ತಮ್ಮ ಚೊಚ್ಚಲ ಮಗು ಮೈಲಿ ಬೇನೆಯಿಂದ ಸತ್ತಿದ್ದು, ಇದರಿಂದ ಮತ್ತಷ್ಟು ನೊಂದ ಗಂಗಾಧರರು ದಿಕ್ಕು ತೋಚದಾದರು. ತಮ್ಮ ಕುಟುಂಬದವರು ಇರುವ ಕೆಲಸಕ್ಕೆ ರಾಜಿನಾಮೆ ಕೊಟ್ಟು ಬೇರೆ ಕೆಲಸಕ್ಕೆ ಸೇರಿಕೊಳ್ಳಲು ಒತ್ತಾಯ ಮಾಡಿದ್ದರಿಂದ ಹಾಗೂ ರಾಜಿನಾಮೆಗೆ ಸರಕಾರದವರಿಂದ ಯಾವುದೇ ಪ್ರತಿಕ್ರಿಯೆ ಸಿಗದಿದ್ದರಿಂದ ಬೇಸರಗೊಂಡು ಮತ್ತೆ ಫಕೀರಪ್ಪನವರಿಗೆ ಮತ್ತೊಂದು ಪತ್ರ ಬರೆದರು.

"ರಾ.ರಾ.ಶ್ರೀ ಫಕ್ಕೀರಪ್ಪಾ ಕಿತ್ತೂರ ಮುಕ್ಕಾಂ ಛಾವಣಿ ಲಿಂಗಸುಗೂರ ಇವರಿಗೆ ನಿಮ್ಮ ಹುನಗುಂದ ಅಖವಾನಜಿ ಗಂಗಾಧರಪ್ಪನವರು ಮಾಡುವ ಅನೇಕಾಶೀರ್ವಾದಗಳು. ಅದಾಗಿ ಈಗ ತಾ. ೧೮ನೆ ಮಾಹೆ ಆಗಸ್ತ ಸನ್ ೧೮೫೮ ಇಸವಿವರೆಗೆ ಶ್ರೀ ಗುರುವಿನ ದಯೆದಿಂದ ಕ್ಷೇಮದೊಡನೆ ಇದ್ದೇನೆ. ನಿಮ್ಮ ಕಡೆಯಿಂದ ಕಾಗದ ಪತ್ರಗಳು ಬಾರದೆ ಬಹಳ ದಿವಸವಾಯಿತು. ಈ ರೀತಿ ಉದಾಸೀನ ಮಾಡಲಿಕ್ಕೆ ಅಂಥಾದ್ದು ನಾನೇನು ಮಾಡಿದ್ದೇನಾಯಿತು. ಅದು ನನ್ನ ನೆನಪಿಗೆ ಬರಲೊಲ್ಲದು. ಇನ್ನು ಮೇಲೆ ಈ ರೀತಿಯಿಡದೆ ಪದೇ ಪದೇ ಪತ್ರ ದ್ವಾರದಿಂದೆ ಸಮಾಚಾರ ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇನೆ. ನಾನು ರಜಾ ತೆಗೆದುಕೊಂಡು ೨ ತಿಂಗಳು ಹೊಂಗಲದಲ್ಲಿದ್ದು ತಿರುಗಿ ಹುನಗುಂದಕ್ಕೆ ಬಂದು ೨ ತಿಂಗಳಾಯಿತು. ಹುಟ್ಟಿದ ಹುಡುಗನು ಮೈಲಿಯೆದ್ದು ಶಿವನ ಪಾದಕ್ಕೆ ಸಲ್ಲಿದನು. ಕುಟುಂಬಕ್ಕೆ ಬಹು ದುಃಖವಾದ ಮೂಲಕ ನಾನು ಹುನಗುಂದಕ್ಕೆ ಬರುವಾಗ್ಗೆ ಕರಕೊಂಡು ಬರಲಿಲ್ಲ. ನಾನೊಬ್ಬನೇ ಬಂದಿದ್ದೇನೆ. ಮನೆಯವರು ರಾಜಿನಾಮೆ ಕೊಡಿರೆಂದು ಬಹಳ ಹೇಳಿದರು. ನನಗಾದರೂ ಇದರಂತೆ ತಿಳಿದು ಎರಡು ರಾಜಿನಾಮೆ ಬರೆದು ಕಳಿಸಿದ್ದೇನೆ. ಮಂಜೂರ ಆದದ್ದಕ್ಕೂ, ಇಲ್ಲದ್ದಕ್ಕೂ ಇನ್ನೂವರೆಗೂ ಹುಕುಮು ಬರಲಿಲ್ಲ. ಮಂಜೂರಾಯಿತೆಂದರೆ ನಿಮ್ಮ ಕಡೆಗೆ ಬಂದೇನು ಇಲ್ಲವೇ ಇದೇ ಸಾಲೆಯ ಕೆಲಸಕ್ಕೆ ಕಾಯಮವಾಯಿತೆಂದರೆ ಹೊಂಗಲಕ್ಕೆ ಹೋಗಿ ಕುಟುಂಬ ಕರಕೊಂಡು ಬರುತ್ತೇನೆ. ಇನ್ನೂ ಅನಕಾ ಎರಡೂ ದಡದ ಮೇಲೆ ಕೈ ಇದೆ. ಇಲ್ಲಿ ದರಗಾದ ಮಠದಲ್ಲಿ ಪುರಾಣ ಪ್ರಾರಂಭ ಮಾಡಿಸಿದ್ದಾರೆ. ನಾನೇ ಹೇಳುತ್ತೇನೆ. ನಿಮ್ಮ ಭೆಟ್ಟಿ ಆಗದೆ ಸುಮಾರು ಒಂದೂವರೆ ವರ್ಷ ಆಯಿತು. ಮನಸು ಬಹು ತವಕಿಸುತ್ತದೆ. ಉಪಾಯವಿಲ್ಲ. ನೀವು ಪರತಂತ್ರ, ನಾನು ಪರತಂತ್ರ ಇದ್ದ ಮೂಲಕ ಭೆಟ್ಟಿ ಆಗವೊಲ್ಲದು. ಎಂದಿಗೆ ನಮ್ಮಾ ನಿಮ್ಮಾ ಭೆಟ್ಟಿ ಆಗುತ್ತದೋ ಅದೇ ಸುದಿವಸ. ಒಳ್ಳೇದು ಈಶ್ವರೇಚ್ಛಾ. ನೀವು ಸುಖಸ್ವರೂಪದಲ್ಲಿದ್ದುದ್ದು ರಾ.ಕೃಷ್ಣಪ್ಪನವರು ಹೇಳಿದರೇ ಹೊರ್ತು ನಿಮ್ಮ ಹಸ್ತಾಕ್ಷರ ಬರಲಿಲ್ಲ. ಆದರೂ ಕ್ಷೇಮವಾಗಿ ಇದ್ದದ್ದು ಕೇಳಿ ಸಂತೋಷ ಪಟ್ಟೆ. ನೀವು ಒಬ್ಬರೇ ಇದ್ದೀರೋ ಕುಟುಂಬ ಸಹಿತ ಇದ್ದೀರೋ

ತಿಳಿಸಬೇಕು. ಮಮತಾಪೂರ್ಣವಿರಬೇಕು.

ಇತಿ ಆಶೀರ್ವಾದಗಳು

ತಾ.ಸುರಪುರಕ್ಕೆ ಚಾಕರೀ ದೆಸೆಯಿಂದ ಬಂದರೆ ಹ್ಯಾಗಾದೀತು ಬರೆದು ತಿಳಿಸಿರಿ. ರಾ.ರಾಚೋಟಪ್ಪಾ ಅಣ್ಣಾ ಅಖವಾನಜಿ ಧಾರವಾಡ ಇವರು ರಾಜೀನಾಮೆ ಕೊಟ್ಟರು. ಕೃಷ್ಣಪ್ಪ ಬೀಡಿಕರ ಇವರಿಗೆ ಶಿಕ್ಷಕ ಕೆಲಸ ೫ ರೂ.ಯದು ದೊರಕಿತು. ನಿಮಗೆ ಶರಣಾರ್ಥಿ ಬರೆಯ ಹೇಳಿದ್ದಾರೆ.[೮]

ಗಂಗಾಧರಯ್ಯನವರು ಎರಡು ಸರಿ ರಾಜಿನಾಮೆಯನ್ನು ಬರೆದು ಕೊಟ್ಟರೂ ಸಹ ಸರ್ಕಾರ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಲಿಲ್ಲ. ಕಾರಣ ಸರ್ಕಾರವು ಇಂತಹ ಶ್ರೇಷ್ಠ ದರ್ಜೆಯ ಶಿಕ್ಷಕರನ್ನು ಕಳೆದುಕೊಳ್ಳಲು ಇಚ್ಛಿಸದೆ ರಾಜಿನಾಮೆಯನ್ನು ನಿರಾಕರಿಸಿತು. ಇತ್ತ ಫಕೀರಪ್ಪನವರಿಂದ ಯಾವುದೇ ಪತ್ರ ಬರದಿದ್ದರಿಂದ ಗಂಗಾಧರರು 'ಪಾಲಿಗೆ ಬಂದದ್ದು ಪಂಚಾಮೃತ' ಎಂಬಂತೆ ಹುನಗುಂದ ಶಾಲೆಯಲ್ಲಿಯೇ ೧೨ ರೂಪಾಯಿ ಸಂಬಳಕ್ಕೆ ದುಡಿಯಬೇಕಾಗಿ ಬಂತು.

ಗಂಗಾಧರಯ್ಯನವರಿಗೆ ಅನೇಕ ರೀತಿಯ ಕೌಟುಂಬಿಕ ಸಮಸ್ಯೆಗಳಿದ್ದರೂ ಕೂಡ ಆ ನೋವನ್ನೆಲ್ಲ ಸಹಿಸಿಕೊಂಡು ಎದೆಗುಂದದೆ ಧೈರ್ಯದಿಂದ ಬಂದ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಹಾಗೂ ಹುನಗುಂದ ಶಾಲೆಯಲ್ಲಿ ೫ ವರ್ಷಗಳ ಕಾಲ ಸೇವೆ ಸಲ್ಲಿಸುತ್ತ ಅಧ್ಯಾಪನ ವೃತ್ತಿಯ ಜೊತೆಗೆ ಜನಜಾಗೃತಿ. ಸಮಾಜ ಸುಧಾರಣೆಯಂಥ ಕಾರ್ಯಗಳನ್ನು ಕೈಗೊಂಡಿರುವುದನ್ನು ನೋಡಬಹುದು.

ಗಂಗಾಧರರು ಪುರಾಣ, ಪ್ರವಚನ ಹಾಗೂ ಕಾವ್ಯವಾಚನ ಮಾಡುವುದನ್ನು ಮತ್ತು ಗಂಗಾಧರರ ಪಾಂಡಿತ್ಯ, ಪ್ರತಿಭೆಗಳನ್ನು ಕೇಳಿ ತಿಳಿದಿದ್ದ ಹುನಗುಂದ ಜನತೆ 'ಬಸವ ಪುರಾಣ', 'ಪ್ರಭುಲಿಂಗಲೀಲೆ', 'ರಾಜಶೇಖರ ವಿಳಾಸ' ಮುಂತಾದ ಹಳಗನ್ನಡ ಕಾವ್ಯಗಳ ಪ್ರವಚನ ಮಾಡಬೇಕೆಂದು ಗಂಗಾಧರರಲ್ಲಿ ವಿನಂತಿಸಿಕೊಂಡರು. ಗಂಗಾಧರರು ಒಪ್ಪಿ ಅದರಂತೆ ಶಾಲಾ ಅವಧಿಯ ನಂತರ ಹುನಗುಂದದ ದರಗಾಮಠದಲ್ಲಿ ಸಾಯಂಕಾಲದ ಸಮಯದಲ್ಲಿ ಪ್ರವಚನ ನೀಡಲಾರಂಭಿಸಿದರು. ಇವರ ಮೃದು ಮಧುರವಾದ ಹಿತಮಿತವಾದ ಪ್ರವಚನದ ಶೈಲಿ ಅಬಾಲವೃದ್ಧರಿಗೂ ಹಿಡಿಸಿತು. ಗಂಗಾಧರರ ಪ್ರವಚನವನ್ನು ಕೇಳಲು ಸುತ್ತಮುತ್ತಲಿನ ಹಳ್ಳಿಯ ಜನರು ಸಹ ಬರತೊಡಗಿದರು.

ಹೀಗೆ ತಮ್ಮ ಪುರಾಣ ಪ್ರವಚನಗಳ ಮೂಲಕ ಗಂಗಾಧರರು ಅಂದಿನ ಸಮಾಜದಲ್ಲಿ

ಭಕ್ತಿ ಭಾವ, ಧಾರ್ಮಿಕ ಶ್ರದ್ಧೆಯನ್ನು ಮೂಡಿಸಿದ್ದಲ್ಲದೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಜನರಿಗೆ ಒಲವನ್ನು ಮೂಡಿಸುವ ಸಲುವಾಗಿ ಸಾಮಾಜಿಕ, ಸಾಹಿತ್ಯಿಕ ಮತ್ತು ಧಾರ್ಮಿಕ ರೀತ್ಯಾ ಜನತಾ ಸೇವೆಯನ್ನು ಮಾಡುವ ಮೂಲಕ ಜನಜಾಗೃತಿ ಮತ್ತು ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ತೊಡಗಿದರು. ಇವರು ೧೮೬೮ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ವೀರಶೈವ ಬಡ ವಿದ್ಯಾರ್ಥಿಗಳಿಗಾಗಿ ಉಚಿತ ವಸತಿನಿಲಯದ ಸ್ಥಾಪನೆ ಮಾಡಿ ಅದರ ನಿರ್ವಹಣೆಯ ಕಾರ್ಯವನ್ನು ಸಹ ತಾವೇ ವಹಿಸಿಕೊಂಡಿರುವುದು ಶ್ಲಾಘನೀಯ ಸಂಗತಿಯಾಗಿದೆ.

ಗಂಗಾಧರರು ಹುನಗುಂದ ಶಾಲೆಯಲ್ಲಿ ಅಖವಾನಜಿ ಕೆಲಸದಲ್ಲಿರುವಾಗ ಒಮ್ಮೆ ಡೆಪ್ಯುಟಿ ಚೆನ್ನಬಸಪ್ಪನವರು ಹುನಗುಂದ ಶಾಲೆಗೆ ಪರೀಕ್ಷೆ ತೆಗೆದುಕೊಳ್ಳಲು ಬಂದರು. ಇವರು ಬೆಳಗಾವಿ ಜಿಲ್ಲೆಯ ಟ್ರೇನಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಸಹ ಕನ್ನಡ ಪರ ಕಾಳಜಿಯನ್ನು ಹೊಂದಿದವರಾಗಿದ್ದ ಗಂಗಾಧರರ ಬೋಧನಾ ಪದ್ಧತಿ, ಭಾಷೆಯ ಮೇಲಿನ ಹಿಡಿತ, ಭಾಷಾಭಿಮಾನ, ಹಳಗನ್ನಡ, ಸಂಸ್ಕೃತದ ಬಗ್ಗೆ ಇವರಿಗಿರುವ ಆಳವಾದ ಜ್ಞಾನ ಹಾಗೂ ಕೆಲಸ ಕಾರ್ಯಗಳಲ್ಲಿನ ಶಿಸ್ತು, ಸಂಯಮ, ಕಾರ್ಯದಕ್ಷತೆ ಮತ್ತು ಇವರ ಒಳ್ಳೆಯ ನಡೆ–ನುಡಿಗಳನ್ನು ಕಂಡು ಬೆರಗಾದರು. ಹಾಗೂ ಈ ಹಿಂದೆ ಗಂಗಾಧರರ ವ್ಯಕ್ತಿತ್ವದ ಬಗ್ಗೆ ಕೇಳಿತಿಳಿದದ್ದು ದಿಟವೆಂದು ತಿಳಿದು ಸಂತಸಗೊಂಡು, ಇಂಥ ಶಿಕ್ಷಕರು ಉನ್ನತ ಸ್ಥಾನದಲ್ಲಿದ್ದರೆ ಕನ್ನಡ ಭಾಷೆ ಬೆಳೆಯಲು ಅನುಕೂಲವಾಗುವುದೆಂದು ಬಗೆದರು. ಹಾಗೂ ಮೇಲ್ದರ್ಜೆಗೇರಿಸಲು ಸರಕಾರಕ್ಕೆ ಶಿಫಾರಸ್ಸು ಮಾಡಿದರು.

೧೮೬೧ರಲ್ಲಿ ಗಂಗಾಧರರನ್ನು ಬೆಳಗಾವಿಯ ನಾರ್ಮಲ ಸ್ಕೂಲ್ ಅಂದರೆ ಟ್ರೇನಿಂಗ್ ಕಾಲೇಜಿಗೆ ಅಧ್ಯಾಪಕರಾಗಿ ಕೆಲಸ ಮಾಡಲು ಸಮರ್ಥರೆಂದು ನಿಶ್ಚಯಿಸಿ ಬಡ್ತಿ ನೀಡಿದರು. ಇದರಿಂದ ಸಂತುಷ್ಟರಾದ ಗಂಗಾಧರರು ಕನ್ನಡ ಭಾಷಾಭಿವೃದ್ಧಿಗಾಗಿ ಮತ್ತಷ್ಟು ಪ್ರಾಮಾಣಿಕತೆಯಿಂದ ದುಡಿದರು. ಈ "ಬೆಳಗಾವಿಯ ಟ್ರೇನಿಂಗ್ ಶಾಲೆಯಲ್ಲಿಯಂತೂ ಇವರ ಪಾಂಡಿತ್ಯ ಮತ್ತು ಅಧ್ಯಾಪಕರ ಜಾಣ್ಮೆಗಳು ಮತ್ತಷ್ಟು ಪ್ರಖರಗೊಂಡವು. ಅಲ್ಲಿ ಅವರು ಕನ್ನಡ ಅಧ್ಯಾಪನದ ಶ್ರೀಕಾರ ಹಾಕಿದರೆಂದು ಹೇಳಲಿಕ್ಕೂ ಅಡ್ಡಿಯಿಲ್ಲ." ಇಲ್ಲಿ ತರಬೇತಿಗಾಗಿ ಬಂದ ಶಿಕ್ಷಕರು ಕನ್ನಡ ಭಾಷೆಯ ಬಗ್ಗೆ ಆಳವಾದ ಜ್ಞಾನವಿಲ್ಲದವರಾಗಿದ್ದರು. ಅಲ್ಲದೆ ಹಳಗನ್ನಡ ಪದ್ಯಗಳನ್ನು ಗಿಳಿಪಾಠದಂತೆ ಹೇಳುವರೇ ಹೊರತು ಪದ್ಯದಲ್ಲಿರುವ ಕಠಿಣ ಪದಗಳ ಅರ್ಥವನ್ನು ತಿಳಿಸುವ ಪ್ರಯತ್ನ ಯಾರೂ ಮಾಡುತ್ತಿರಲಿಲ್ಲ. ಹಾಗೂ ಇಲ್ಲಿನ ಶಿಕ್ಷಕರು ಮರಾಠಿ ಭಾಷೆಯ ಪ್ರಭಾವದಲ್ಲಿದ್ದು ಕನ್ನಡ ಭಾಷೆಯನ್ನು ತಪ್ಪು ತಪ್ಪಾಗಿ ಬಳಸುತ್ತಿದ್ದು, ಬರವಣಿಗೆ ಕೂಡ ಸರಿಯಾಗಿರಲಿಲ್ಲ. ಹಾಗೂ ಕನ್ನಡ ಭಾಷಾ ಬೋಧನೆಯಲ್ಲಿ ಮರಾಠಿ ಭಾಷೆಯ ಪದಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ಈ ದೋಷಪೂರಿತ ಶಿಕ್ಷಣವನ್ನು ಸರಿದಿದ್ದಲು ಶಿಕ್ಷಕರಿಗೆ ಪರಿಶುದ್ಧವಾದ ಕನ್ನಡ ಭಾಷಾ ಬಳಕೆ

ಮಾಡುವುದನ್ನು ಕಲಿಸಿಕೊಟ್ಟರು. ಹಾಗೂ ಕನ್ನಡ ಭಾಷಾ ಬೋಧಕರಿಗೆ ಕನ್ನಡ ಬೋಧನಾ ವಿಧಾನಗಳನ್ನು ತಿಳಿಸಿಕೊಟ್ಟರು.

ಗಂಗಾಧರಯ್ಯನವರು ಹಳಗನ್ನಡ ಕಾವ್ಯಗಳನ್ನು ಸರಳಗೊಳಿಸಿ ಹೇಳುವ ರೀತಿ. ಎಂಥ ಕಠಿಣ ಪದ್ಯಗಳಿಗೂ ಅರ್ಥವನ್ನು ತಿಳಿಸುವ ಸಾಮರ್ಥ್ಯವುಳ್ಳವರಾಗಿದ್ದು ಉಳಿದೆಲ್ಲ ವಿಷಯಗಳಿಗಿಂತ ಕನ್ನಡ ಭಾಷಾ ಬೋಧನೆ ಹೆಚ್ಚು ಆಕರ್ಷಕ ಎಂಬುದನ್ನು ತೋರಿಸಿಕೊಟ್ಟರು. "ವಿದ್ವತ್‌ಖನಿ', 'ಕಾವ್ಯಕೋಶ' ಎಂದು ಕರೆಯಲ್ಪಟ್ಟ ಗಂಗಾಧರಯ್ಯನವರು ಮಾಡಿದ ಗ್ರಂಥರಚನೆ ಗಾತ್ರದಲ್ಲಿ ಅಷ್ಟೇನು ದೊಡ್ಡದಲ್ಲ; ಆದರೆ ಗುಣದಲ್ಲಿ ಅಪ್ಪಟ ಚಿನ್ನ. ಮುಖ್ಯವಾಗಿ ಕನ್ನಡ ಕಾವ್ಯ ಸಿರಿಯನ್ನು ಜೀವಂತವಾಗಿ ಉಳಿಸಿದ ಪುಣ್ಯ ಅವರ ಪಾಲಿಗೆ ಸಲ್ಲುತ್ತದೆ. ಪಾಂಡಿತ್ಯವೆಂದರೆ ವೇದವಿದ್ಯೆ; ಪಂಡಿತರೆಂದರೆ ಸಂಸ್ಕೃತ ವಿಶಾರದರು ಮಾತ್ರ–ಎಂಬ ನಂಬಿಗೆಯು ಬೇರೂರಿದ್ದ ಕಾಲದಲ್ಲಿ ಅವರು ಕಷ್ಟ ನಿಷ್ಠುರಗಳನ್ನುಂಡು ಕನ್ನಡ ಭಾಷೆಯ ಸತ್ವ ಸೌಂದರ್ಯದ ಕಡೆಗೆ ಸಮಾಜದ ಗಮನವನ್ನು ಸೆಳೆದರು ನಾರ್ಮಲ್ ಸ್ಕೂಲಿನಲ್ಲಿ ಗಂಗಾಧರಯ್ಯನವರು ಹೊತ್ತಿಸಿದ ಕನ್ನಡದ ಕಿಡಿಯನ್ನು ಅಲ್ಲಿಯ ವಿದ್ಯಾರ್ಥಿಗಳು ಹೋದಲ್ಲೆಲ್ಲ ಕೊಂಡೊಯ್ದರು. ಕನ್ನಡ ಕಾವ್ಯ ಸಂಪತ್ತನ್ನು ಜನತೆಗೆ ಪರಿಚಯ ಮಾಡಿಕೊಡುವುದು, ಭಾಷಾಶುದ್ಧಿಯನ್ನು ಬೆಳೆಸಿ, ಮರಾಠಿ ಪ್ರಭಾವದಿಂದ ಕನ್ನಡವನ್ನು ಮುಕ್ತ ಮಾಡುವುದು. ಗಂಗಾಧರಯ್ಯನವರ ಶಿಷ್ಯವೃಂದವು ಮಾಡಿದ ಮಹತ್ವದ ಕೆಲಸವಾಗಿದೆ. ಗಂಗಾಧರಯ್ಯನವರ ಈ ಗರಡಿಯಲ್ಲಿ ಬೆಳೆದು ಕನ್ನಡಕ್ಕಾಗಿ ಪಣತೊಟ್ಟು ನಿಂತ ಪಾರ್ಥರೆಂದರೆ ಅವರ ವಿದ್ಯಾರ್ಥಿಗಳಾಗಿದ್ದ ಶಾಂತವೀರ ರಾಚಿದೇವ ಕಿತ್ತೂರ ಮತ್ತು ಧೋಂಡೋ ನರಸಿಂಹ ಮುಳಬಾಗಿಲ ಅವರು.[೧೦]

ಗಂಗಾಧರರು ನಾರ್ಮಲ್ ಸ್ಕೂಲಿನಲ್ಲಿದ್ದ ಸಂದರ್ಭದಲ್ಲಿ ೧೮೬೬ರಲ್ಲಿ ಕನ್ನಡ ಭಾಷಾಂತರ ಕಛೇರಿಯವರು ಇವರನ್ನು ಅದೇ ಸ್ಕೂಲಿನಲ್ಲಿ ಮೂರನೆಯ ಸಹಾಯಕ ಅಧ್ಯಾಪಕರೆಂದು ಬಡ್ತಿಕೊಟ್ಟು ಕನ್ನಡ ಭಾಷಾಂತರಕಾರರಾಗಿ ನೇಮಿಸಲ್ಪಟ್ಟರು. ಈ ಹುದ್ದೆಯು ಉಪಪ್ರಾಚಾರ್ಯರ ಹುದ್ದೆಗೆ ಸಮಾನವಾಗಿತ್ತು. ಈ ಸ್ಕೂಲಿನಲ್ಲಿ ವೆಂಕಟರಂಗೋ ಕಟ್ಟಿ ಮುಖ್ಯ ಭಾಷಾಂತರಕಾರರಾಗಿ ಕಂಡುಬಂದರೆ ಗಂಗಾಧರರು ಸಹಾಯಕ ಭಾಷಾಂತರಕಾರರಾಗಿ ಕಂಡುಬರುತ್ತಾರೆ.

ಪಠ್ಯಪುಸ್ತಕ ರಚನಾ ಕಾರ್ಯದಲ್ಲಿ ತೊಡಗಿದ ವೆಂಕಟರಂಗೋ ಕಟ್ಟಿ ಮತ್ತು ತುರಮರಿಯವರು ಶಾಲಾ ಪಠ್ಯಪುಸ್ತಕಗಳಲ್ಲಿದ್ದ ಲೋಪದೋಷಗಳನ್ನು ತಿದ್ದಿ ಹೊಸ ಪಠ್ಯಪುಸ್ತಕಗಳನ್ನು ರಚಿಸಿದರು. ಹಾಗೂ ಗಂಗಾಧರರು ಹಳಗನ್ನಡ ಕಾವ್ಯ ಭಾಗಗಳನ್ನು ಪಠ್ಯದಲ್ಲಿ ಅಳವಡಿಸಿದರು ಹಾಗೂ 'ಕವಿತಾ ಸಂಗ್ರಹ' ಮತ್ತು 'ಕವಿತಾ ಪದ್ಧತಿ'ಗಳಂತಹ ಕೃತಿಗಳನ್ನು ರಚಿಸಿದರು. ಹೀಗೆ ಗಂಗಾಧರರು ಅನೇಕ ಶಾಲೋಪಯೋಗಿ ಪುಸ್ತಕಗಳನ್ನು ಬರೆದರು. ಇವುಗಳಲ್ಲಿ ಕನ್ನಡ ಐದನೆಯ ತರಗತಿ

ಪಠ್ಯಪುಸ್ತಕವನ್ನು ಇಲ್ಲಿ ನಮೂದಿಸಲಾಗಿದೆ.

"ಕನ್ನಡ ಐದನೇ ಪುಸ್ತಕ' (೧೮೭೨) ಮುಂಬಯಿ ಸಂಸ್ಥಾನದೊಳಗಣ ದಕ್ಷಿಣ ತುಕಡಿಯಲ್ಲಿರುವ ಸರಕಾರದ ಕನ್ನಡ ಸಾಲೆಗಳಿಗಾಗಿ ಗಂಗಾಧರ ಮಡಿವಾಳೇಶ್ವರ, ಕನ್ನಡ ಟ್ರಾನ್ಸಲೇಷನ್ ಎಗ್ಝಿಬಿಶನರ ಇದರಿಂದ ಕನ್ನಡಿಸಲ್ಪಟ್ಟಿದ್ದು" ಇರುತ್ತದೆ. ಇದು ಮುಂಬಯಿ ಇಲಾಖೆಯ ಕನ್ನಡ ಶಾಲೆಗಳಿಗಾಗಿ ಬೆಂಗಳೂರಿನ ವೆಸ್ಲಿಯನ್ ಮಿಶನ್ ಪ್ರೆಸ್ಸಿನಲ್ಲಿ ಗ್ರಾಂಟ್ ದೊರೆಯಿಂದ ಸನ್ ೧೮೭೨ರಲ್ಲಿ ಛಾಪಿಸಲ್ಪಟ್ಟಿತು. ಈ ಆವೃತ್ತಿ ಎರಡನೇ ಛಾಪೆ.[೧೧]

ಈ ಐದನೆಯ ತರಗತಿಯ ಪಠ್ಯಪುಸ್ತಕದ ಎಂಟನೆಯ ಭಾಗದಲ್ಲಿ ಈ ಹಿಂದೆ ಬಳಸಲಾಗುತ್ತಿದ್ದ ಗಾದೆಮಾತುಗಳನ್ನು ಕೊಡಲಾಗಿದೆ. ಅವು ಇಂತಿವೆ.

"ಕೆರದ ಅಳತಿಗೆ ಕಾಲು ಕೊಯಿಸಿದ ಹಾಗೆ,'

'ಕೊಟ್ಟು ಬರುವ ನಿಷ್ಠುರಕ್ಕಿಂತ ಕೊಡದೆ ಬರುವ ಮುನಿಸು ಲೇಸು'

'ಗುರು ಕೊಟ್ಟ ಜೋಳಿಗೆಯೆಂದು ಗೂಟಕ್ಕೆ ಹಾಕಿದರೆ ಹೊಟ್ಟೆ ತುಂಬೀತೆ'?

'ಗ್ರಾಮ ಶಾಂತಿಗೆ ತಳವಾರ ತಲೇ ಬೋಳಿಸಿಕೊಂಡ'

ತಲೆ ಚೆನ್ನಾಗಿದ್ದರೆ ಮುಂಡಾಸ ಸಹಸ್ರ ಸುತ್ತಬಹುದು.

ಮೂವರ ಕಿವಿ ಮುಟ್ಟಿದ್ದು ಮೂರು ಲೋಕ ಮುಟ್ಟಿದ ಹಾಗೆ.[೧೨]

ಇಂತಹ ಗಾದೆ ಮಾತುಗಳು ನೂರು ವರ್ಷಗಳ ಹಿಂದೆ ಬಳಕೆಯಲ್ಲಿದ್ದುದು ಕಂಡುಬರುತ್ತದೆ. ಪ್ರಸ್ತುತ ಇವುಗಳ ಬಳಕೆ ಇಲ್ಲವಾಗಿದೆ.

ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಬಡ ಕೃಷಿ ಕುಟುಂಬದಲ್ಲಿ ಜನಿಸಿ ಅಥಣಿ ಮಠದ ಮಡಿವಾಳೇಶ್ವರರ ಶಿಷ್ಯರಾಗಿ ಅಕ್ಷರ ಕಲಿತು. ಕನ್ನಡ ಶಾಲಾ ಮಾಸ್ತರರಾಗಿ ಕನ್ನಡ ಭಾಷಾ ಬೆಳವಣಿಗೆಗೆ ತಮ್ಮನ್ನು ಮುಡುಪಾಗಿಸಿಕೊಂಡ ಪ್ರಾತಃ ಸ್ಮರಣೀಯರು ವೃತ್ತಿಯಿಂದ ಉಪಾಧ್ಯಾಯರಾಗಿ, ಮುಖ್ಯೋಪಾಧ್ಯಾಯರಾಗಿ, ಭಾಷಾಂತರಕಾರರಾಗಿ ಇವರು ಕನ್ನಡಕ್ಕೆ ಸಲ್ಲಿಸಿದ ಸೇವೆ ಅನನ್ಯವಾದದ್ದು.

ಕೊನೆಟಿಪ್ಪಣಿಗಳು

೧. ಬಿ.ವ್ಹಿ.ನೇಸರಗಿ(ಲೇ), ಗಂಗಾಧರ ಮಡಿವಾಳೇಶ್ವರ ತುರಮರಿ, ಪು.ಸಂ.೪೦.

೨. ಅದೇ ಪು.ಸಂ.೪೦.

೩. ಅದೇ ಪು.ಸಂ.೪೧.

೪. ರಾ.ಯ.ಧಾರವಾಡಕರ(ಸಂ), ಹೊಸಗನ್ನಡ ಸಾಹಿತ್ಯದ ಉದಯಕಾಲ, ಪು.ಸಂ.೨೦೨.

೫. ಎನ್ಕೆ.ಕುಲಕರ್ಣಿ (ಲೇ), ಗಂಗಾಧರ ಮಡಿವಾಳೇಶ್ವರ ತುರಮರಿ, ಪು.ಸಂ.೩೫.

೬. ರಾ.ಯ.ಧಾರವಾಡಕರ(ಸಂ), ಹೊಸಗನ್ನಡ ಸಾಹಿತ್ಯದ ಉದಯಕಾಲ, ಪು.ಸಂ.೨೦೦.

೭. ಅದೇ, ಪು.ಸಂ.೧೯೮-೧೯೯.

೮. ಅದೇ, ಪು.ಸಂ.೧೯೯-೨೦೦.

೯. ಅದೇ, ಪು.ಸಂ.೨೦೦.

೧೦. ಅದೇ, ಪು.ಸಂ.೨೦೧.

೧೧. ಅದೇ, ಪು.ಸಂ.೨೦೭.

೧೨. ಅದೇ, ಪು.ಸಂ.೨೦೮.

ಅಧ್ಯಾಯ ಮೂರು

ಗಂಗಾಧರ ಮಡಿವಾಳೇಶ್ವರರ ಸಾಹಿತ್ಯ

೧. ಶಬ್ದಮಣಿದರ್ಪಣ ವ್ಯಾಖ್ಯಾನ

೨. ಕವಿತಾ ಸಂಗ್ರಹ

೩. ಸಟೀಕಿನ ಶಬ್ದಮಂಜರಿ ಕೋಶ

೪. ರಾಜಶೇಖರ ವಿಳಾಸ

೫. ಕೈವಲ್ಯ ಪದ್ಧತಿ ಟೀಕು

೬. ಭಾಷಾ ದರ್ಪಣ

೭. ಕವಿತಾ ಪದ್ಧತಿ

೮. ಬಾಣ ಕಾದಂಬರಿ

೯. ಪತ್ರಿಕಾ ಲೇಖನಗಳು

ಅಧ್ಯಾಯ ಮೂರು

ಗಂಗಾಧರ ಮಡಿವಾಳೇಶ್ವರರ ಸಾಹಿತ್ಯ

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅಂದರೆ ಸ್ವತಂತ್ರಪೂರ್ವದಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರಕನ್ನಡ ಜಿಲ್ಲೆಗಳು ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿದ್ದವು. ಹಾಗಾಗಿ ಇಲ್ಲಿ ಮರಾಠಿ ಭಾಷೆಯ ಪ್ರಭಾವವೇ ಹೆಚ್ಚಾಗಿತ್ತು. "ದುರ್ದೈವದ ಸಂಗತಿಯೆಂದರೆ ಪಾಲಕ, ಬೋಧಕ ಹಾಗೂ ವರ್ತಕ ಮೊದಲಾದವರೆಲ್ಲರಿಗೂ ಮರಾಠಿ ಶಿಕ್ಷಣದಲ್ಲಿಯೇ ಆಸಕ್ತಿ ಹೆಚ್ಚಾಗಿತ್ತು.' ಇಲ್ಲಿನ ಕನ್ನಡಿಗರು ಸಹ ಅನಿವಾರ್ಯವಾಗಿ ಮರಾಠಿ ಭಾಷೆಯನ್ನೇ ವ್ಯಾವಹಾರಿಕ ಭಾಷೆಯನ್ನಾಗಿ ಒಪ್ಪಿಕೊಂಡಿದ್ದರು.[೧]

ಈ ಒಂದು ಭಾಗದಲ್ಲಿ ಮರಾಠಿ ಭಾಷೆಯ ಪ್ರಭಾವ ಎಷ್ಟಿತ್ತೆಂದರೆ ಬ್ರಿಟೀಷ್ ಆಳರಸರಿಗೆ ಮರಾಠಿಯೇ ಈ ನೆಲದ ಭಾಷೆ ಇರಬೇಕೆಂಬ ಅನುಮಾನ ಮೂಡಿತು. ಹಾಗೂ ಮರಾಠಿ ಭಾಷೆಯಲ್ಲಿ ಮಾತನಾಡುವುದು, ಮರಾಠಿಯಲ್ಲಿ ಬರೆಯುವುದೆಂದರೆ ಗೌರವ ಪ್ರತಿಷ್ಠೆಗಳ ವಿಷಯವಾಗಿದ್ದು, ಕನ್ನಡ ಭಾಷೆ ಮೂಲೆಗುಂಪಾಗಿಬಿಟ್ಟಿತು.

ಇಂತಹ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಜನ ಜಾಗೃತಿಯನ್ನು ಮೂಡಿಸುವ ಸಲುವಾಗಿ ಈ ಒಂದು ಭಾಗದಲ್ಲಿ ಅನೇಕ ಕನ್ನಡಪರ ಚಿಂತಕರು, ಬರಹಗಾರರು ಹುಟ್ಟಿಕೊಂಡರು. ಇವರಲ್ಲಿ ಗಂಗಾಧರ ಮಡಿವಾಳೇಶ್ವರರು ಪ್ರಮುಖ ಬರಹಗಾರರಾಗಿದ್ದು, ಕನ್ನಡವನ್ನುದ್ಧರಿಸಲು ಕನ್ನಡ ಸಾಹಿತ್ಯದ ಅಧ್ಯಯನ ಮತ್ತು ಅಧ್ಯಾಪನಗಳಿಗೆ ಉಪಯೋಗವಾಗುವಂತಹ ಅನೇಕ ಕೃತಿಗಳನ್ನು ರಚಿಸಿದರು. ಆ ಕೃತಿಗಳು ಇಂತಿವೆ.

೧. ಶಬ್ದಮಣಿದರ್ಪಣ ವ್ಯಾಖ್ಯಾನ–೧೮೬೬.

೨. ಕವಿತಾ ಸಂಗ್ರಹ–೧೮೬೭

೩. ಸಟೀಕಿನ ಶಬ್ದಮಂಜರಿ ಕೋಶ-೧೮೯೯

೪. ರಾಜಶೇಖರ ವಿಳಾಸ ಟೀಕು-೧೮೭೧

೫. ಕೈವಲ್ಯ ಪದ್ಧತಿ ಟೀಕು-೧೮೭೩

೬. ಭಾಷಾ ದರ್ಪಣ-೧೮೭೪

೭. ಕವಿತಾ ಪದ್ಧತಿ

೮. ಬಾಣಕಾದಂಬರಿ-೧೮೭೬

ಹೀಗೆ ಗಂಗಾಧರರು ಈ ಕೃತಿಗಳನ್ನಷ್ಟೇ ಅಲ್ಲದೆ ಶಾಲಾ ಪಠ್ಯಪುಸ್ತಕಗಳು ಹಾಗೂ ಪತ್ರಿಕಾ ಲೇಖನಗಳನ್ನು ಸಹ ಅತ್ಯುತ್ಕೃಷ್ಟವಾಗಿ ರಚಿಸಿದರು. ಇವರ ಈ ಕೃತಿಗಳನ್ನು ಟೀಕೆ, ವ್ಯಾಖ್ಯಾನ, ನಿಘಂಟು, ಸಂಕಲನ, ಅನುವಾದಗಳೆಂದು ವಿಂಗಡಿಸಬಹುದಾಗಿದ್ದು, ಈ ಕೃತಿಗಳ ಸಂಕ್ಷಿಪ್ತ ಪರಿಚಯ ಇಂತಿದೆ.

೧. ಶಬ್ದಮಣಿದರ್ಪಣ ವ್ಯಾಖ್ಯಾನ:

"ಕರ್ನಾಟಕದೊಳ್ ಪರಕಿಸೆ ಶಬ್ದಜ್ಞನಾವನೋ? ಓರ್ವನೇ ಕವಿ ಕುಂಜರ ಭಾಪು ಕೇಶಿರಾಜ![2] ಎಂದು ೧೪ನೆಯ ಶತಮಾನದ ಕವಿ ಮಲ್ಲನಿಂದ ಸ್ತುತಿಸಿಕೊಂಡ ಕೇಶಿರಾಜನ ಕೃತಿ ಶಬ್ದಮಣಿದರ್ಪಣವಾಗಿದ್ದು, ಇದು ಹಳಗನ್ನಡದ ವ್ಯಾಕರಣ ಕೃತಿಗಳಲ್ಲಿ ಮೇರು ಕೃತಿಯೆನಿಸಿದೆ. ಈ ಕೃತಿಯು ಹಳಗನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಲು ಬಹುಉಪಯೋಗಿಯಾದ ಶಾಸ್ತ್ರಬದ್ಧವಾದ, ಪ್ರಮಾಣಬದ್ಧವಾದ ಸುವ್ಯವಸ್ಥಿತವಾದ ಕೃತಿಯಾಗಿದೆ.

ಈ ಗ್ರಂಥದ ಮಹತ್ವವನ್ನರಿತ ತುರಮರಿಯವರು ಈ ಕೃತಿಗೆ ವ್ಯಾಖ್ಯಾನವನ್ನು ಬರೆಯತೊಡಗಿದರು. ಇದರ ಉದ್ದೇಶ ಹಳಗನ್ನಡ ಕಾವ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರಿಗೆ ಮತ್ತು ಕನ್ನಡ ಕಾವ್ಯವನ್ನು ಸಮರ್ಥವಾಗಿ ಕಲಿಸಬೇಕೆಂದಿರುವ ಶಿಕ್ಷಕರಿಗೆ ಉಪಯೋಗವಾಗಲೆಂದು ಕ್ರಿ.ಶ. ೧೮೬೬ ರಿಂದ ೧೮೭೭ರವರೆಗೆ ಮಠಪತ್ರಿಕೆಯಲ್ಲಿ ಕಂತುಗಳ ರೂಪದಲ್ಲಿ ಪ್ರಕಟಿಸಿದ್ದಾರೆ.

ಪ್ರಾರಂಭದ ಜೂನ್ ೧೮೬೬ರ ಮಠಪತ್ರಿಕೆಯಲ್ಲಿ ತುರಮುರಿಯವರು ಪ್ರಸ್ತಾವನೆಯ ರೂಪದಲ್ಲಿ ಈ ರೀತಿ ಬರೆದಿದ್ದಾರೆ.

"ಕನ್ನಡದಲ್ಲಿ ಶಬ್ದಮಣಿದರ್ಪಣವೆಂಬುದೊಂದು ಅತ್ಯಮೂಲ್ಯವಾದ ವ್ಯಾಕರಣವುಂಟು. ಅದು ವಸ್ತುತಃ ಹಳಗನ್ನಡ ಭಾಷೆಯ ವ್ಯಾಕರಣವಾದಾಗ್ಯೂ ಈಗಿನ ಕನ್ನಡ ಭಾಷೆಯ ವ್ಯಾಕರಣಕ್ಕೆ ಮುಖ್ಯವಾದ ಆಶ್ರಯವಾಗಿರುತ್ತದೆ. ಈ ಕಾರಣದಿಂದಲೂ ಅದನ್ನು ಛಾಪಿಸಿದರೆ

ನಮ್ಮ ಮಾಸ್ತರ ಜನರಿಗೆ ಬಹು ಲಾಭ ಉಂಟಾಗುವುದೆಂದು ನೋಡಿ ಈ ಪತ್ರಿಕೆಯ ದ್ವಾರವಾಗಿ ಅದನ್ನು ಪ್ರಸಿದ್ಧಪಡಿಸುವ ಆಲೋಚನೆ ಮಾಡಿರುತ್ತೇನೆ.[೩] ಹಾಗೂ ಸ್ಥಳಾವಾಕಾಶ, ಸಮಯಾವಕಾಶದ ಮಿತಿಗಳಿಂದ ಕೇವಲ ವ್ಯಾಕರಣ ನಿಯಮಗಳುಳ್ಳ ಶ್ಲೋಕಗಳಿಗೆ ಮಾತ್ರ ಅರ್ಥಸಹಿತ ಟೀಕು ಬರೆಯುವುದಾಗಿ ತಿಳಿಸಿರುತ್ತಾರೆ. ಈ ಕಾವ್ಯದ ಟೀಕು ಕುರಿತು ಮುಂದಿನ ಅಧ್ಯಾಯದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ.

೨. ಕವಿತಾ ಸಂಗ್ರಹ:

ಗಂಗಾಧರ ಮಡಿವಾಳೇಶ್ವರರು ತಮ್ಮ ಗುರುಗಳಾದ ಅಥಣಿಯ ಮಡಿವಾಳೇಶ್ವರರ ಸಹಾಯದಿಂದ ಹಳಗನ್ನಡ ಕಾವ್ಯಗಳನ್ನು ಲೀಲಾಜಾಲವಾಗಿ ಓದುವುದನ್ನು ಕಲಿತಿದ್ದರು. ಇವರಿಗೆ ಮೊದಲಿನಿಂದಲೂ ಹಳಗನ್ನಡ ಕಾವ್ಯಗಳಿಂದರೆ ಅಪಾರ ಪ್ರೀತಿ. ಹಾಗಾಗಿ ಇವರು ಹಳಗನ್ನಡ ಕಾವ್ಯಗಳಿಂದ ಉತ್ಕೃಷ್ಟವಾದ ಭಾಗಗಳನ್ನು ಆಯ್ದು 'ಕವಿತಾ ಸಂಗ್ರಹ ಎಂಬ ಹೆಸರಿನಲ್ಲಿ ೧೮೬೭ರಲ್ಲಿ ಪ್ರಕಟಿಸಿದರು.

ಗಂಗಾಧರರು ಯಾವುದೇ ಒಂದು ಭಾಷೆಯಲ್ಲಿ ಪ್ರಭುತ್ವವನ್ನು ಹೊಂದಬೇಕಾದರೆ "ರಸಿಕರು ಬರೆದಂತಹ ಪ್ರಾಚೀನ ರಸವತ್ಕಾವ್ಯಗಳನ್ನೇ ಓದತಕ್ಕದ್ದು. ಶಬ್ದಮಾಧುರ್ಯ, ಅರ್ಥಗಾಂಭೀರ್ಯ, ರಸಪರಿಪಾಕ, ಪ್ರಸಾದ, ಶಬ್ದಾಲಂಕಾರ, ಅರ್ಥಾಲಂಕಾರ ಮುಂತಾದ ಅನೇಕ ಉತ್ತಮ ಗುಣಗಳು ಪ್ರಾಚೀನ ಕಾವ್ಯಗಳಲ್ಲಿಯೇ ಉಂಟೆಂಬುದಕ್ಕೆ ಹಂಪಿಯ ಹರಿಹರಾಚಾರ್ಯ ಎಳಂದೂರು ಷಡಕ್ಷರ ಕವಿ ಮುಂತಾದವರ ಗ್ರಂಥಗಳೇ ಸಾಕ್ಷಿ. ಕಾವ್ಯದಲ್ಲಿ ರಸವೊದಗುವುದು, ಕಾಳಗದಲ್ಲಿ ಜಯ ಹೊಂದುವುದು ಎಲ್ಲರಿಗೂ ಸಾಧಿಸದು. ಕಾವ್ಯಕ್ಕೆ ಕಾಲ, ತಪಸ್ವಿಗೆ ಮುಪ್ಪು, ಶೋಭೆಯೆಂಬ ಗಾದಿಮಾತುಂಟು. ಅಂದರೆ ಪ್ರಾಚೀನ ಕಾವ್ಯಗಳೇ ಮಾನ್ಯವೆಂಬರ್ಥವು."[೪]

ಹಾಗಾಗಿ ಪ್ರಾಚೀನ ಕಾಲದ ಕವಿಗಳ, ಪಂಡಿತರ ಕೃತಿಗಳು ಅವರ ಪ್ರತಿಭೆ, ಸಾಮರ್ಥ್ಯಗಳಿಗೆ ಹಿಡಿದ ಕನ್ನಡಿಯಂತಿದ್ದು, ಇವುಗಳನ್ನು ಓದುವುದರಿಂದ ನಮಗೆ ಸಾಹಿತ್ಯ ಜ್ಞಾನವೊದಗುವುದಲ್ಲದೆ ಅವರ ವ್ಯಕ್ತಿತ್ವವನ್ನು ಸಹ ತಿಳಿದುಕೊಳ್ಳಬಹುದು.

ಈ ಕಾವ್ಯಸಂಗ್ರಹದಲ್ಲಿ ೨೦ ಕವಿಗಳು ರಚಿಸಿದ ಸುಮಾರು ೨೯ ಗ್ರಂಥಗಳಲ್ಲಿನ ಅತ್ಯಂತ ಸುಂದರವಾದ ೬೪ ಆಯ್ದ ಭಾಗಗಳನ್ನು ಕೊಡಲಾಗಿದೆ. ಹಾಗೂ ಇದರಲ್ಲಿ ಕವಿ ಪರಿಚಯವನ್ನು ಮಾಡಿಕೊಡಲಾಗಿದೆ. ಈ ಕೃತಿಯಲ್ಲಿ ಕುಮಾರವ್ಯಾಸರ 'ಮಹಾಭಾರತ', ರಂಗನಾಥ ಕವಿಯ 'ಅನುಭವಾಮೃತ' ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ', ಸುರಂಗ ಕವಿಯ 'ಸುರಂಗ ಕಾವ್ಯ' ರಾಮಬ್ರಹ್ಮಾನಂದ ಕವಿಯ 'ಸಂಸಾರ ಸ್ವಪ್ನ', ನನ್ನಯ್ಯನ ಕಾವ್ಯ, ಹಾನಗಲ್ಲ ಕುಮಾರಕವಿಯ

'ಕುಮಾರೇಶ್ವರ ಪುರಾಣ', ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ', ಪರಮಾನುಭವಬೋಧೆ, ಅನುಭವಸಾರ', ಸರ್ಪಭೂಷಣ ಕವಿಯ 'ಕೈವಲ್ಯಕಲ್ಪವಲ್ಲರಿ', ಷಡಕ್ಷರಿ ಕವಿಯ 'ವೃಷಭೇಂದ್ರ ವಿಜಯ', ಹರಿಹರನ 'ಗಿರಿಜಾಕಲ್ಯಾಣ', ಕನಕದಾಸರ 'ಭಕ್ತಿಸಾರ', ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಶತಕ', ಷಟ್ಸ್ಥಾವ್ಯದ ಗುರುಬಸವಕವಿಯ 'ಮನೋವಿಜಯ' ಮುಂತಾದ ಕವಿಗಳ, ಕೃತಿಗಳ ಕಾವ್ಯ ಭಾಗಗಳಲ್ಲದೆ, ಜೋಗುಳ ಪದಗಳು, ದಾಸರ ಪದಗಳು ಕೂಡ ಇವೆ.

ಕನ್ನಡದ ಆದ್ಯ ಕಾವ್ಯಸಂಗ್ರಹಕಾರರೆಂಬ ಹೆಸರಿಗೆ ಭಾಜನರಾದ ಗಂಗಾಧರ ಮಡಿವಾಳೇಶ್ವರರು ಹಳಗನ್ನಡದ ಹಸ್ತಪ್ರತಿಗಳನ್ನು ಹುಡುಕಿ ತಂದು ಅವುಗಳನ್ನು ಪರಿಷ್ಕರಿಸಿ ಆಯಾ ಕವಿಗಳ ಚರಿತ್ರೆಯನ್ನು ಸೇರಿಸಿ ಪದ್ಯ ಭಾಗಗಳ ಕಠಿಣ ಪದಗಳ ಅರ್ಥ ವ್ಯಾಖ್ಯಾನಗಳನ್ನು ಬರೆಯಲು ಸುಮಾರು ಆರೇಳು ವರ್ಷಗಳು ಹಿಡಿದವು. ಈ ಒಂದು ಕೃತಿಯಲ್ಲಿ ಹಳೆಯ ಹಾಗೂ ಸಮಕಾಲೀನ ಕವಿಗಳ ಕಾವ್ಯಭಾಷೆಗಳನ್ನು ಒಂದೆಡೆ ಸೇರಿಸಿರುವುದು ಕಂಡುಬರುತ್ತದೆ. ಹಾಗೂ ಷಡಕ್ಷರ ಕವಿಯು ಗಂಗಾಧರರ ನೆಚ್ಚಿನ ಕವಿಯಾಗಿದ್ದರಿಂದ ಈ ಕವಿತಾ ಸಂಗ್ರಹದ ಅರ್ಧಭಾಗವನ್ನು ಇವರಿಗೆ ಮೀಸಲಿಟ್ಟಿದ್ದಾರೆ.

ಶ್ರೀ ತುರಮರಿ ಅವರ ಕವಿತಾ ಸಂಗ್ರಹ ಒಂದು ಅಪರೂಪದ ಕೃತಿ. ಹಲವು ಪ್ರಖ್ಯಾತವಾದ ಪ್ರಾಚೀನ ಗ್ರಂಥಗಳಿಂದ ಆಯ್ದು ಕವಿಗಳ ಕಾವ್ಯಭಾಗಗಳನ್ನು ಇಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಕನ್ನಡ ಭಾಷಾಜ್ಞಾನ, ಅರ್ಥಗಾಂಭೀರ್ಯ, ಶಬ್ದಮಾಧುರ್ಯ ಇತ್ಯಾದಿ ಗುಣಗಳಿಂದ ಮಾನ್ಯವಾದ ಕನ್ನಡ ಕಾವ್ಯಗಳ ಕಸುವನ್ನು ತಿಳಿದುಕೊಳ್ಳಲು ಸಾಧ್ಯವಾಗುವಂತೆ ರಚನೆಮಾಡಿದ್ದಾರೆ. ಹಾಗೆ ನೋಡಿದರೆ ೧೮೬೭ರಲ್ಲಿ ಮೊದಲ ಮುದ್ರಣಗೊಂಡು ೧೮೭೪ರಲ್ಲಿ ಹೊಸ ಟಿಪ್ಪಣಿಗಳೊಂದಿಗೆ ಪರಿಷ್ಕರಿಸಿ ಮುದ್ರಣಗೊಳಿಸಿದ ಈ ಸಂಕಲನದಲ್ಲಿ 'ಕವಿಗಳ ಚರಿತೆ' ಎಂಬ ಶೀರ್ಷಿಕೆಯಲ್ಲಿ ಕುಮಾರವ್ಯಾಸ, ಕುಮಾರವಾಲ್ಮೀಕಿ, ಕನಕದಾಸ, ಪುರಂದರದಾಸ, ವಿರೂಪಾಕ್ಷ ಪಂಡಿತಾರಾಧ್ಯ, ಸರ್ವಜ್ಞಕವಿ, ಎಳಂದೂರು ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಹಾನಗಲ್ಲ ಕುಮಾರಸ್ವಾಮಿಗಳ ಇತಿವೃತ್ತವನ್ನು ನೀಡಿದ್ದಾರೆ. ಪ್ರಾಯಶಃ ತಾವು ಆಯ್ದುಕೊಂಡ ಕಾವ್ಯಗಳ ಕರ್ತೃಗಳ ಸಂಕ್ಷಿಪ್ತ ಚರಿತ್ರೆಯನ್ನು ನಿರೂಪಿಸುವ ಈ ಮಾದರಿ ಮುಂದೆ ಕವಿ ಚರಿತೆಯ ಮೂರು ಸಂಪುಟಗಳನ್ನು ರಚಿಸಿ ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ ಅವರಿಗೆ ಪ್ರೇರಣೆಯಾಗಿರಬೇಕು. ಹೀಗಾಗಿ ತುರಮರಿ ಅವರು ಕನ್ನಡದ ಆದ್ಯ ಕವಿಚರಿತೆಕಾರರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೩. ಸಟೀಕಿನ ಶಬ್ದಮಂಜರಿಕೋಶ:

ಈ ಕೋಶದ ರಚನೆ ಅಂದಿನ ಕಾಲಕ್ಕೆ ತುಂಬಾ ಅನಿವಾರ್ಯ ಎಂದು ತೋರಿ

ಗಂಗಾಧರರಿಂದ ರಚಿಸಲ್ಪಟ್ಟ ಏಕಭಾಷಾ ಶಬ್ದಕೋಶವಾಗಿದೆ. ಯಾವುದೇ ಒಂದು ಭಾಷೆ ಪ್ರವರ್ಧಮಾನಕ್ಕೆ ಬರಲು ಆ ಭಾಷೆಯಲ್ಲಿ ನಿಘಂಟು ರಚನೆಯ ಅವಶ್ಯಕತೆ ಪ್ರಮುಖವಾಗಿರುತ್ತದೆ. ಕನ್ನಡ ಸಾಹಿತ್ಯ ಲೋಕಕ್ಕೆ ಇಂತಹ ನಿಘಂಟುವಿನ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಮನಗಂಡ ಗಂಗಾಧರರು ಏಕಾಂಗಿಯಾಗಿ ನಿಘಂಟು ರಚನೆಯಲ್ಲಿ ತೊಡಗಿದರು. "ಪ್ರವಚನಗಳನ್ನು ನೀಡುತ್ತಿದ್ದ ಇವರಿಗೆ ಶಬ್ದಾರ್ಥ ನಿರ್ಣಯ ಸಹಜವಾಗಿಯೇ ಸಿದ್ಧಿಸಿತು."[೫] ಇದೇ ಮುಂದೆ ಗಂಗಾಧರರಿಗೆ ಈ ಮಹತ್ ಶಬ್ದಕೋಶ ರಚಿಸಲು ಮೂಲ ಪ್ರೇರಣೆ ಎನ್ನಬಹುದು.

ಹಳಗನ್ನಡ ಕಾವ್ಯಗಳಾದ ರಾಜಶೇಖರ ವಿಳಾಸ, ಶಬರ ಶಂಕರ ವಿಳಾಸ, ಜೈಮಿನಿ ಭಾರತ, ವೃಷಬೇಂದ್ರ ವಿಜಯ ಮುಂತಾದವುಗಳನ್ನು ಅಭ್ಯಾಸ ಮಾಡಲು ಸಂಸ್ಕೃತ, ಹಳಗನ್ನಡ ಕೋಶಗಳ ಅಗತ್ಯವಿರುತ್ತದೆ. ಕೆಲವು ಕಾವ್ಯಗಳಂತು ಗೂಢಾರ್ಥಗಳನ್ನು ಹೊಂದಿದ್ದು ಅವುಗಳನ್ನು ಅರ್ಥೈಸುವುದು ಬಹುಪ್ರಯಾಸದ ಕೆಲಸವಾಗಿರುತ್ತದೆ. ಈ ಒಂದು ಕಷ್ಟ ನಿವಾರಣೆಗೆ ಗಂಗಾಧರ ಮಡಿವಾಳೇಶ್ವರರು ಅಮರಕೋಶ, ಕರ್ನಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ, ಪದ್ಯನಾನಾರ್ಥ ಎಂಬ ಪ್ರಾಚೀನ ಕೋಶಗಳನ್ನು ಆಧಾರವಾಗಿಟ್ಟುಕೊಂಡು ಸಟೀಕು ಶಬ್ದಮಂಜರಿಯನ್ನು ರಚಿಸಿದರು.

ಈ ಕೋಶವು ೧೮೬೯ರಲ್ಲಿ ಆರಂಭಗೊಂಡು ೧೮೭೧ರಲ್ಲಿ ಸಿದ್ಧಗೊಂಡಿತು. ಇದು ೫೮೬ ಪುಟಗಳನ್ನೊಳಗೊಂಡ ಪಾಶ್ಚಾತ್ಯ ಪದ್ಧತಿಯಿಂದ ರಚಿತವಾದ ಮೊದಲ ಕನ್ನಡ ಕೋಶವಾಗಿದೆ. ಈ ಕೃತಿ ರಚನೆಯ ಸಂದರ್ಭದಲ್ಲಿ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಒಳ್ಳೆಯ ಗುಣಮಟ್ಟದ ಮುದ್ರಣಾಲಯಗಳಿರದ ಕಾರಣ ಸ್ವತಃ ಗಂಗಾಧರರೆ ಹಸ್ತಪ್ರತಿಯನ್ನು ತಯಾರಿಸಿ ಬೆಂಗಳೂರಿನ ಹೊಳೆಕಟ್ಟು ನರಸಿಂಹಯ್ಯನವರ ಛಾಪಾಖಾನೆಯಲ್ಲಿ ಮುದ್ರಿಸಿ ಪ್ರಕಟಿಸಿದರು. ಆಗ ಮುಂಬಯಿ ಸರಕಾರ ಈ ಕೋಶದ ಪ್ರಕಟಣೆಗೋಸ್ಕರ ೪೦೦೦ ರೂ.ಗಳನ್ನು ಸಹಾಯಧನವನ್ನಾಗಿ ಕೊಟ್ಟಿತು. ಇದರ ನಿಗಧಿತ ಬೆಲೆ ಕೇವಲ ೪ ರೂ.ಗಳು ಆಗಿರುವುದರಿಂದ ಸಮಸ್ತ ಕನ್ನಡಿಗರು ಖರೀದಿಸಿರುವುದರಿಂದ ಕೆಲವೇ ದಿನಗಳಲ್ಲಿ ಖಾಲಿಯಾದವು.

ಗಂಗಾಧರರು ತಮ್ಮ ಕೋಶವನ್ನು ಜೆ.ಎಫ್. ಫ್ಲೀಟರಿಗೆ ಕೊಟ್ಟಾಗ ಅದಕ್ಕೆ ತಮ್ಮ ಸಹಿಹಾಕಿ ತಮ್ಮಲ್ಲೇ ಇಟ್ಟುಕೊಂಡಿದ್ದು, ಇವರ ಮರಣಾನಂತರ ಈ ಪ್ರತಿಯನ್ನು ಬ್ರಿಟಿಷ್ ಲೈಬ್ರರಿಗೆ ಕೊಡಲಾಯಿತು.

ಈ ಕೋಶದ ಬೇಡಿಕೆ ಹೆಚ್ಚಿದ್ದರಿಂದ ಆಗಿನ ಕಾಲದ ಪುಸ್ತಕ ವ್ಯಾಪಾರಿಗಳಾದ ಧಾರವಾಡದ ಅನಾಡ ಚನ್ನಬಸಪ್ಪನವರು ೧೮೭೭ರಲ್ಲಿ ಮರುಮುದ್ರಣ ಮಾಡಿದರು. ಈ ಎರಡನೆಯ ಆವೃತ್ತಿಯಲ್ಲಿ ಅನಾಡರು ಸಂಸ್ಕೃತ ಶಬ್ದಗಳ ಮೂಲ ರೂಪವನ್ನು ಸಂಸ್ಕೃತ

ಪಂಡಿತರ ಸಹಾಯದಿಂದ ತಿಳಿದುಕೊಂಡು ಅರ್ಥಸಹಿತವಾಗಿ ವಿವರಿಸುವ ಮೂಲಕ ಅಲ್ಪಸ್ವಲ್ಪ ಸುಧಾರಣೆಯನ್ನು ತಂದಿದ್ದಾರೆ. ಹಾಗೂ ಈ ಆವೃತ್ತಿಯ ಪ್ರಸ್ತಾವನೆಯಲ್ಲಿ ಗಂಗಾಧರರು ಈ ಕೃತಿ ರಚನೆಯಲ್ಲಿ ತೋರಿದ ಪಾಂಡಿತ್ಯ, ಪ್ರತಿಭೆ ಹಾಗೂ ಇವರು ಪಟ್ಟ ಪರಿಶ್ರಮ ಮತ್ತು ಇವರ ಸಾಧನೆಯನ್ನು ಕುರಿತು ಅನಾಡರು ಮೆಚ್ಚುಗೆಯ ಮಾತುಗಳನ್ನಾಡಿರುವುದನ್ನು ನೆನೆಯಬಹುದು.

ಗಂಗಾಧರರ ಈ ಸಟೀಕು ಶಬ್ದಮಂಜರಿಕೋಶವು ಕಿಟೆಲ್ಲರ ಕನ್ನಡ–ಇಂಗ್ಲೀಷ್ ನಿಘಂಟು ರಚನೆಯಾಗುವ ಪೂರ್ವದಲ್ಲಿ ಅಂದರೆ ಸುಮಾರು ಕಾಲು ಶತಮಾನದಷ್ಟು ಹಿಂದೆಯೇ ಪ್ರಕಟಗೊಂಡಿದ್ದು, ಇದು ಕಿಟೆಲ್‌ರ ನಿಘಂಟು ರಚನೆಗೆ ಪ್ರೇರಣೆ ಎನ್ನಬಹುದು. ಕಿಟೆಲ್‌ರು ತುರಮರಿಯವರ ಕೋಶದ ಅರ್ಥಕ್ಕೆ 'ಜಿ' ಎಂಬ ಅಕ್ಷರದ ಸಂಕೇತವನ್ನು ಕೊಟ್ಟಿರುತ್ತಾರೆ. ಹಾಗೂ ಗಂಗಾಧರರ ಈ ಶಬ್ದಮಂಜರಿಯು ನಂತರ ಬಂದ ಶಬ್ದಕೋಶ ರಚನಾಕಾರರಿಗೆ ಮಾದರಿಯಾಯಿತು. ೧೮೭೪ರಲ್ಲಿ ಗುರುರಾವ ವಿಠಲ ಮೊಹರೆಯವರು ತಮ್ಮ 'ಶಬ್ದ ಸಂಗ್ರಹ' ಕೃತಿಗೆ ತುರಮುರಿಯವರ ನಿಘಂಟನ್ನು ಆಕರವಾಗಿ ಬಳಸಿಕೊಂಡಿದ್ದಾರೆ.

೪. ರಾಜಶೇಖರ ವಿಳಾಸ ಟೀಕು:

ಕನ್ನಡ ಕಾವ್ಯ ಪ್ರಪಂಚದಲ್ಲಿ ಕರುಣಾರ್ದ್ರವಾದ ಹೃದಯ ಮಿಡಿಯುವ ಕಾವ್ಯವೆಂದರೆ ರಾಘವಾಂಕನ ಸತ್ಯಹರಿಶ್ಚಂದ್ರಕಾವ್ಯ ಎಂಬುದು ಜನಜನಿತ. ಆದರೆ ಇದಕ್ಕೆ ಸರಿಸಮನಾಗಿ ನಿಲ್ಲುವ ಮತ್ತೊಂದು ಕಾವ್ಯವೆಂದರೆ ಷಡಕ್ಷರದೇವ ಕವಿಯ ರಾಜಶೇಖರ ವಿಳಾಸ. ಈ ಕೃತಿಯು ೧೪ ಆಶ್ವಾಸಗಳನ್ನೊಳಗೊಂಡ ಸಂಸ್ಕೃತ ಪದಭೂಯಿಷ್ಠವಾದ ಚಂಪೂಕಾವ್ಯವಾಗಿದೆ.

ರಾಜಶೇಖರ ವಿಳಾಸದ ಕೆಲವು ಪದ್ಯಗಳು ಪ್ರಾಚೀನ ಉದ್ಧಾಮ ಗ್ರಂಥಗಳಲ್ಲಿನ ಪದ್ಯಗಳಿಗೆ ಸಮಶೈಲಿಯುಳ್ಳ ಪದ್ಯಭಾಗಗಳನ್ನೊಳಗೊಂಡ ಕೃತಿಯಾಗಿದ್ದು, ಇಂತಹ ಕೃತಿಯನ್ನೂ ಕವಿಯನ್ನು ಅತ್ಯಂತ ಭಕ್ತಿ ಮತ್ತು ಶ್ರದ್ಧೆಯಿಂದ ಅಧ್ಯಯನ ಮಾಡಿದವರು ನಮ್ಮ ಗಂಗಾಧರ ಮಡಿವಾಳೇಶ್ವರರು. ಷಡಕ್ಷರ ದೇವನೆಂದರೆ ಗಂಗಾಧರರಿಗೆ ಒಂದು ರೀತಿಯ ವಿಶೇಷವಾದ ಭಕ್ತಿ ಮತ್ತು ಪ್ರೀತಿ.

ಹಾಗಾಗಿ ಗಂಗಾಧರ ರಾಜಶೇಖರ ವಿಳಾಸದ ೧ನೆಯ ಆಶ್ವಾಸಕ್ಕೆ ಮತ್ತು ೪ನೆಯ ಆಶ್ವಾಸಕ್ಕೆ ಕ್ರಮವಾಗಿ ೧೮೭೧ ಮತ್ತು ೧೮೭೪ರಲ್ಲಿ ಟೀಕೆಯನ್ನು ಬರೆದು ಪ್ರಕಟಿಸಿದ್ದಾರೆ. ಮೊದಲನೆಯ ಆಶ್ವಾಸವು ೧೩೧ ಪುಟಗಳಿಂದ ಕೂಡಿದ್ದು ಬೆಳಗಾವಿಯ ಸಮಾಚಾರ ಪ್ರೆಸ್ಸಿನಲ್ಲಿ ಮುದ್ರಣಗೊಂಡಿದೆ. ಇದರಲ್ಲಿ ಕವಿಯ ಕೃತಿ, ವಂಶ, ಪಾಂಡಿತ್ಯ ಮತ್ತು ಕಥೆಯ ಸಾರಾಂಶವನ್ನು ಸಂಕ್ಷಿಪ್ತವಾಗಿ ಕೊಟ್ಟಿದ್ದಾರೆ. ಅನ್ವಯ, ಭಾವಾರ್ಥಗಳ ಜೊತೆಗೆ ಛಂದಸ್ಸು, ವ್ಯಾಕರಣ, ಅಲಂಕಾರಗಳಿಂದ ಪ್ರತಿಪದ್ಯವನ್ನು ವಿವರಿಸಿದ್ದಾರೆ.

"ಗಂಗಾಧರರ ಈ ಕೃತಿಯನ್ನು ನೋಡಿದ ಮುಂಬಯಿ ಇಲಾಖೆಯ ವಿದ್ಯಾಖಾತೆಯ ಮುಖ್ಯ ನಿರ್ದೇಶಕರಾಗಿದ್ದ ಮೆ॥ಫೀಲ್ ಸಾಹೇಬರು ಸಂತಸಗೊಂಡು ೨೦೦ ರೂಪಾಯಿಗಳ ಬಹುಮಾನದ ಜೊತೆಗೆ ಮುದ್ರಣ ವೆಚ್ಚಕ್ಕೆ ೪೩೦ ರೂ.ಗಳನ್ನು ಕೊಟ್ಟರಲ್ಲದೆ, ೮೦೦ ಪ್ರತಿಗಳನ್ನು ವಿದ್ಯಾಖಾತೆಯ ವತಿಯಿಂದ ಖರೀದಿಸಿದರು."[೬] ತುರಮರಿ ಅವರ ನಂತರ ಶಬ್ದಮಣಿದರ್ಪಣಕ್ಕೆ ರಾಚಿದೇವ ಕಿತ್ತೂರು ಮತ್ತು ಶ್ರೀ ಅನ್ನದಾನಿ ಬಸವಲಿಂಗಾಚಾರ್ಯ ಅರಳೆಲಮಠ ಕ್ರಮವಾಗಿ ೨ ಮತ್ತು ೩ನೆಯ ಆಶ್ವಾಸಕ್ಕೆ ಗಂಗಾಧರರಂತೆ ಟೀಕೆಯನ್ನು ಬರೆದು ಮೇ॥ ಪೀಲ್ ಸಾಹೇಬರಿಂದ ೩೦೦ ರೂಪಾಯಿಗಳ ಪ್ರೋತ್ಸಾಹ ಧನವನ್ನು ಪಡೆದರು. ಪುನಃ ನಾಲ್ಕನೆಯ ಆಶ್ವಾಸಕ್ಕೆ ಟೀಕೆಯನ್ನು ಬರೆದ ಗಂಗಾಧರರು ೧೮೭೪ರ ಡಿಸೆಂಬರ್‌ನಲ್ಲಿ ಪ್ರಕಟಿಸಿದರು.

ಗಂಗಾಧರರ ಅಗಾಧವಾದ ಪಾಂಡಿತ್ಯ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಮೇಲಿನ ಪ್ರಭುತ್ವ ಮತ್ತು ಆಳವಾದ ಅಧ್ಯಯನ ಪರಂಪರೆಯ ಸಾಹಿತ್ಯದ ಬಗೆಗಿನ ಅರಿವು ಹಾಗೂ ವ್ಯುತ್ಪತ್ತಿ ಇವು ಇವರ ವಿದ್ವತ್ ಸಾಧನೆಗೆ ಕಾರಣವಾದವು.

೫. ಕೈವಲ್ಯ ಪದ್ಧತಿ

ಮೂಲತಃ ಮಠ ಮಾನ್ಯಗಳಂತಹ ಧಾರ್ಮಿಕ ಸಂಸ್ಥೆಗಳ ಪರಿಸರದಲ್ಲಿ ಶಿಕ್ಷಣ ಪಡೆದ ತುರಮರಿಯವರು ಆಧ್ಯಾತ್ಮಿಕ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ೧೮೭೩ರಲ್ಲಿ ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ'ಗೆ ಟೀಕೆಯನ್ನು ಬರೆದರು. ಗ್ರಂಥದ ಮೇಲೆ ನಿಜಗುಣ ಶಿವಯೋಗಿಗಳಿಂದ ರಚಿತವಾದ ಕೈವಲ್ಯ ಪದ್ಧತಿ ಪ್ರಾಚೀನ ಟೀಕಾಸಹಿತವಾಗಿ ಗಂಗಾಧರ ಮಡಿವಾಳೇಶ್ವರ ತುರಮರಿ ಇವರಿಂದ ಬಹುಪರಿಶ್ರಮದಿಂದ ಶೋಧಿಸಲ್ಪಟ್ಟಿದ್ದು ಎಂಬ ಬರಹದಿಂದ ಇದರ ಪರಿಷ್ಕರಣವನ್ನು ಗಂಗಾಧರರೇ ನಿರ್ವಹಿಸಿರುವಂತೆ ತೋರುತ್ತದೆ. ಈ ಗ್ರಂಥದ ಒಂದು ಪ್ರತಿ ಸದ್ಯದಲ್ಲಿ ಧರ್ಮಸ್ಥಳದ ಹಸ್ತಪ್ರತಿ ಭಂಡಾರದಲ್ಲಿದೆ. ಬೆಳಗಾವಿಯ 'ಬೆಳಗಾಂವ ಸಮಾಚಾರ' ಪತ್ರಿಕೆಯ ಒಡೆಯರು ಇದನ್ನು ಪ್ರಕಟಿಸಿದ್ದಾರೆ. ವೇದಾಂತ ಹಾಗೂ ತತ್ವಶಾಸ್ತ್ರಗಳಿಂದ ಸಂಕೀರ್ಣಗೊಂಡಿದ್ದ ಈ ಕೃತಿಯನ್ನು ಶ್ರೀ ಸಾಮಾನ್ಯರೂ ಓದಿ ತಿಳಿದುಕೊಳ್ಳುವಂತೆ ವ್ಯಾಖ್ಯಾನ ಬರೆದಿದ್ದಾರೆ.

೬. ಭಾಷಾ ದರ್ಪಣ:

ಛಂದಸ್ಸು, ವ್ಯಾಕರಣ ಮುಂತಾದ ವಿಷಯಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ತುರಮುರಿಯವರು ಕನ್ನಡ ಶಿಕ್ಷಕರಿಗೆ ಹಾಗೂ ಹಳಗನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಶಾಸ್ತ್ರಗ್ರಂಥಗಳು ಸುಲಭವಾಗಿ ಅರ್ಥವಾಗಬೇಕೆಂದು 'ಭಾಷಾದರ್ಪಣ' ಎಂಬ ಕನ್ನಡ ವ್ಯಾಕರಣವನ್ನು ವಿವರಿಸುವ ಲೇಖನಗಳನ್ನು 'ಮಠಪತ್ರಿಕೆ'ಯಲ್ಲಿ ೧೮೭೪ರಿಂದ ೧೮೭೭ರ ವರೆಗೆ ಪ್ರಕಟಿಸಿದರು. ಇದು ಇವರ ಸ್ವತಂತ್ರ ವ್ಯಾಕರಣ ಕೃತಿ ಎನ್ನಬಹುದು.

೭. ಕವಿತಾ ಪದ್ಧತಿ

ಛಂದಶಾಸ್ತ್ರವನ್ನು ವಿವರಿಸುವ ಈ ಕವಿತಾ ಪದ್ಧತಿ ಕೃತಿ ರಚನೆಯ ಮೂಲ ಉದ್ದೇಶ ಕನ್ನಡಿಗರಲ್ಲಿ ಹಳಗನ್ನಡ ಕಾವ್ಯಗಳ ಬಗ್ಗೆ ಅರಿವು ಮತ್ತು ಆಸಕ್ತಿಯನ್ನು ಮೂಡಿಸುವುದಾಗಿದೆ. ಹಾಗೂ ಹಳಗನ್ನಡ ಕಾವ್ಯಗಳ ಅಧ್ಯಯನ ಮತ್ತು ಕಾವ್ಯರಚನೆ ಮಾಡುವುದಕ್ಕಾಗಿ ಗಂಗಾಧರರು ಈ ಕವಿತಾ ಪದ್ಧತಿ ಎಂಬ ಕೃತಿಯನ್ನು ರಚಿಸಿದರು. ಪ್ರಾಚೀನ ಕಾವ್ಯಾಭ್ಯಾಸಿಗಳಿಗೆ ಛಂದಸ್ಸಿನ ಲಯ ತಿಳಿದಿರಬೇಕೆಂಬ ಆಶಯಕ್ಕೆ ಈ ಕೃತಿ ಒತ್ತುಕೊಟ್ಟಿದೆ.

೮. ಬಾಣ ಕಾದಂಬರಿ

ಸಂಸ್ಕೃತ ಗದ್ಯ ಸಾಹಿತ್ಯಕ್ಕೆ ಹೆಸರಾದ ಬಾಣ ಕವಿಯ ರಸವತ್ತಾದ 'ಕಾದಂಬರಿ' ಕೃತಿಯು ಸಂಸ್ಕೃತ ಪಂಡಿತರಾದ ಗಂಗಾಧರಯ್ಯನವರ ಮನಸ್ಸನ್ನು ಲೋಹ ಚುಂಬಕದಂತೆ ಆಕರ್ಷಿಸಿತು. ಇದರಿಂದ ಗಂಗಾಧರರು 'ಕಾದಂಬರಿ' ಕೃತಿಯನ್ನು ಪದೇ ಪದೇ ಓದಿ ಆಸ್ವಾದಿಸಿ, ಆನಂದಿಸಿದರು. ಅಲ್ಲದೆ ಇದರ ಸವಿಯನ್ನು ತಾವೊಬ್ಬರೇ ಸವಿಯದೆ ಕನ್ನಡದ ಜನತೆಗೂ ಉಣಬಡಿಸುವ ಸಲುವಾಗಿ ಬಾಣಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದರು. ಈ ಅನುವಾದ ಕೃತಿಯು ಬೆಳಗಾವಿ ಮಣ್ಣಿನ ಸೊಗಡಿನಿಂದ ಕೂಡಿ ಅಬಾಲವೃದ್ಧರಿಗೂ ಅರ್ಥವಾಗುವ ಸರಳವಾದ ಶೈಲಿಯನ್ನು ಹೊಂದಿದ್ದು ಅಚ್ಚದೇಶೀಯತೆಯಿಂದ ಒಡಮೂಡಿದೆ.

ಗಂಗಾಧರರು ಬಾಣನ ಮೂಲಕೃತಿಗೆ ಧಕ್ಕೆ ಬರದಂತೆ ಸೊಗಸಾಗಿ ಅನುವಾದಿಸಿದ್ದಾರೆ. ಬಾಣನ ನಾಲ್ಕು ಪುಟದಷ್ಟು ಉದ್ದುದ್ದ ಇರುವ ವಾಕ್ಯಗಳನ್ನು, ಸಂಸ್ಕೃತ ಸಮಾಸಗಳನ್ನು ಕಡಿಮೆಗೊಳಿಸಿ ಕನ್ನಡ ಜಾಯಮಾನಕ್ಕನುಗುಣವಾಗಿ ರಚಿಸಿ, ಕನ್ನಡದಲ್ಲಿ ಗದ್ಯಶೈಲಿಯ ಸಾಹಿತ್ಯ ಪ್ರಕಾರವೊಂದನ್ನು ಹುಟ್ಟುಹಾಕಿದ ಮೊದಲಿಗರೆನ್ನಬೇಕು.

ಈ ಕೃತಿಯಲ್ಲಿ ದೇಶೀ ಪದಗಳು, ಗಾದೆಗಳು, ನುಡಿಗಟ್ಟುಗಳನ್ನು ಗಂಗಾಧರರು ಅತ್ಯಂತ ಕಲಾತ್ಮಕವಾಗಿ ಬೆಳೆಸಿಕೊಂಡಿರುವುದನ್ನು ಕಾಣಬಹುದು. ಉದಾಹರಣೆಗೆ ಹಣಿಗೆ, ತೊತ್ತು, ದಡ್ಡು, ಗಡಿದು, ಶೆಲ್ಲೆ ಇತ್ಯಾದಿ ಪದಗಳನ್ನು ಕಾಣಬಹುದು.

ಈ ಕೃತಿಯು ಅತ್ಯಂತ ಜನಪ್ರಿಯವಾದುದು ಗಂಗಾಧರ ಮಡಿವಾಳೇಶ್ವರ ತುರಮರಿಯವರಿಂದ ಹೊರತು ಸಂಸ್ಕೃತ ಕವಿ ಬಾಣಭಟ್ಟನಿಂದಲ್ಲ, ಎಂಬುದು ಅತಿಶಯೋಕ್ತಿ, ಈ ಕಾದಂಬರಿಯು ಕಥನ ಕಲೆ, ಗದ್ಯಗುಣದ ದೃಷ್ಟಿಯಿಂದ ಅಪೂರ್ವವಾಗಿದ್ದು, ಕ್ರಿ.ಶ. ೧೯೦೫ರ ಪೂರ್ವಕಾಲದಿಂದ ಪ್ರಸ್ತುತ ಇಂದಿನವರೆಗೆ ಅನೇಕ ಬಾರಿ ಮರುಮುದ್ರಣಕ್ಕೊಳಪಟ್ಟ ಮಹತ್ವದ ಕೃತಿಯಾಗಿದೆ. ಈ ಕಾದಂಬರಿಯನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ.

೯. ಪತ್ರಿಕಾ ಲೇಖನಗಳು

ಕನ್ನಡ ಭಾಷೆಯನ್ನು ಪ್ರಮಾಣ ಭಾಷೆಯನ್ನಾಗಿ ರೂಪಿಸುವ ಡೆಪ್ಯೂಟಿ ಚೆನ್ನಬಸಪ್ಪನವರ ಮಹಾತ್ವಾಕಾಂಕ್ಷೆಗೆ ಪೋಷಕವೆಂಬಂತೆ ೧೮೬೫ರಲ್ಲಿ ಆರಂಭಿಸಿದ ಇವರ ಮಠಪತ್ರಿಕೆ ಹಾಗೂ 'ಶಾಲಾಪತ್ರಿಕೆ'ಗಳಲ್ಲಿ ಲೇಖಕರಾಗಿ ಹಾಗೂ ಸಂಪಾದಕರಾಗಿ ದುಡಿದವರು ಗಂಗಾಧರ ಮಡಿವಾಳೇಶ್ವರರು.

"ಈ ಮಠಪತ್ರಿಕೆಯು ಬೆಳಗಾವಿಯ ನಾರ್ಮಲ್ ಸ್ಕೂಲಿನಿಂದ ಪ್ರಕಟವಾಗುತ್ತಿದ್ದ ಕನ್ನಡ ಮಾಸಪತ್ರಿಕೆ 'ಮಠ' ಪದವನ್ನು 'ಶಾಲೆ' ಎಂಬ ಅರ್ಥದಲ್ಲಿ ಬಳಸಲಾಯಿತು. ಅನಂತರ 'ಶಾಲಾಪತ್ರಿಕೆ', 'ಕನ್ನಡ ಶಾಲಾಪತ್ರಿಕೆ' ಎಂದು ೧೯೨೯ರಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣ ಎಂದು ೧೯೫೬ರಲ್ಲಿ ಜೀವನ ಶಿಕ್ಷಣ ಎಂಬ ಹೆಸರನ್ನು ಪಡೆಯಿತು.[೨]

ಗಂಗಾಧರರು ಕ್ರಿ.ಶ. ೧೮೬೫ರಿಂದ ೧೮೭೭ರವರೆಗೆ ಕನ್ನಡವನ್ನು ಕಟ್ಟುವ, ಕನ್ನಡ ಭಾಷೆಯನ್ನು ಪೋಷಿಸುವ ಅನೇಕ ಪ್ರೌಢಲೇಖನಗಳನ್ನು ಪ್ರಕಟಿಸಿದರು. ಈ ಪ್ರಕಟಣಾ ಕಾರ್ಯವು ಈ ಒಂದು ಸಂದರ್ಭದಲ್ಲಿ ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ಆಗಿನ್ನು ಬೆಳಗಾವಿಯಲ್ಲಿ ಮುದ್ರಣದ ಸೌಕರ್ಯವಿರಲಿಲ್ಲ. ಮಠಪತ್ರಿಕೆಯನ್ನು ಕೈಬರಹದ ಕಲ್ಲಚ್ಚಿನ ಪ್ರತಿ ತೆಗೆದು ಮುದ್ರಿಸುತ್ತಿದ್ದರು. ಇದನ್ನು ಶಾಲಾಶಿಕ್ಷಕರಷ್ಟೆ ಓದುತ್ತಿದ್ದು, ಓದುಗರ ಸಂಖ್ಯೆ ಬೆರಳಣಿಕೆಯಷ್ಟಿತ್ತು. ಹಾಗೂ ಒಳ್ಳೆಯ ಪಾಂಡಿತ್ಯವುಳ್ಳ ಲೇಖಕರ ಕೊರತೆಯು ಕಡಿಮೆಯೇನಿರಲಿಲ್ಲ. ಇಂತಹ ಅನೇಕ ಅಡೆತಡೆಗಳನ್ನೆದುರಿಸಿ ಅದಾಗ್ಯೂ ಈ ಪತ್ರಿಕೆ ಶತಮಾನವನ್ನು ಪೂರೈಸಿತು. ಇದರ ಶ್ರೇಯಸ್ಸು ಡೆಪ್ಯೂಟಿ ಚೆನ್ನಬಸಪ್ಪನವರಿಗೆ ಅದರಲ್ಲೂ ಗಂಗಾಧರ ಮಡಿವಾಳೇಶ್ವರರಿಗೆ ಸಲ್ಲಬೇಕು. ಏಕೆಂದರೆ ಮಠಪತ್ರಿಕೆಗೆ ನಿಜವಾಗಿ ಲೇಖನ ಬರೆದು ಪ್ರಾಣ ತುಂಬಿದವರು ಇವರೇ.

ಇದಲ್ಲದೆ ತುರಮುರಿಯವರು 'ಕರ್ನಾಟಕ ಜ್ಞಾನಮಂಜರಿ', 'ರಸಿಕರಂಜನಿ', ಮತ್ತಿತರ ಪತ್ರಿಕೆಗಳ ಲೇಖಕರಾಗಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ.

ಹೀಗೆ ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಸಾಹಿತ್ಯ, ವ್ಯಾಕರಣ, ಛಂದಸ್ಸು, ಭಾಷೆ ಮತ್ತು ಹಳಗನ್ನಡ, ಆಧ್ಯಾತ್ಮಗಳ ಜೊತೆಗೆ ವೈಚಾರಿಕ ಲೇಖನಗಳನ್ನು ಬರೆಯುವುದರ ಮೂಲಕ ಕನ್ನಡ ಭಾಷೆಯ ವಿಷಯ ವೈವಿಧ್ಯತೆಯನ್ನು ಪರಿಚಯಿಸಿದರು. ಆರಂಭದ ಆ ಕಾಲಘಟ್ಟದಲ್ಲಿ ಕನ್ನಡತ್ವದ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಆ ಭಾಷೆಯ ಉತ್ತಮ ಕಾವ್ಯ, ಸನ್ನಿವೇಶಗಳನ್ನು, ವ್ಯಾಕರಣ, ಛಂದಸ್ಸಿನ ವೈವಿಧ್ಯತೆಯನ್ನು ಟೀಕು, ವ್ಯಾಖ್ಯಾನದ ಮೂಲಕ ಪ್ರಸರಿಸುವ ಬಹುದೊಡ್ಡ ಕೆಲಸವನ್ನು ತುರಮುರಿಯವರು ಮಾಡಿದ್ದಾರೆ.

ಕೊನೆ ಟಿಪ್ಪಣಿಗಳು

೧. ಎನ್ಕೆ ಕುಲಕರ್ಣಿ (ಲೆ), ಗಂಗಾಧರ ಮಡಿವಾಳೇಶ್ವರ ತುರಮರಿ ಪು.ಸಂ. ೨೨.

೨. ಡಾ.ಕೆ.ರವೀಂದ್ರನಾಥ (ಲೇಖನ) ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕು ಸಾಹಿತ್ಯ(ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು.)

೩. ಗುರುಪಾದ ಮರಿಗುದ್ದಿ (ಸಂ), ಬೆಳಗಾವಿ ಜಿಲ್ಲೆಯ ವಿದ್ವತ್ ಪರಂಪರೆ, ಪು.ಸಂ.೧೦.

೪. ಗಂಗಾಧರ ಮಡಿವಾಳೇಶ್ವರ ತುರಮರಿ(ಸಂ), ಕವಿತಾ ಸಂಗ್ರಹವು, ಬೆಳಗಾವಿ ಸಮಾಚಾರದ ಅಚ್ಚುಕೂಟ, ಸೂಚನೆ-೩.

೫. ಗುರುಪಾದ ಮರಿಗುದ್ದಿ (ಸಂ), ಬೆಳಗಾವಿ ಜಿಲ್ಲೆಯ ವಿದ್ವತ್ ಪರಂಪರೆ, ಪು.ಸಂ.೬.

೬. ದು.ನಿಂ.ಬೆಳಗಲಿ(ಸಂ.), ಗಂಗಾಧರ ಮಡಿವಾಳೇಶ್ವರ ತುರಮರಿ, ಪು. ೨೫-೨೬.

೭. ಬಿ.ವ್ಹಿ.ನೇಸರಗಿ(ಲೇ), ಗಂಗಾಧರ ಮಡಿವಾಳೇಶ್ವರ ತುರಮರಿ, ಪು.ಸಂ.೩೧.

ಅಧ್ಯಾಯ ನಾಲ್ಕು

ಗಂಗಾಧರ ಮಡಿವಾಳೇಶ್ವರರ ಅನುವಾದಗಳು

ಅಧ್ಯಾಯ ನಾಲ್ಕು

ಗಂಗಾಧರ ಮಡಿವಾಳೇಶ್ವರರ ಅನುವಾದಗಳು

ಅನುವಾದದ ಅರ್ಥ, ವ್ಯಾಖ್ಯೆ ಮತ್ತು ಸ್ವರೂಪ

ಯಾವುದೇ ದೇಶದ ವಿಭಿನ್ನ ಸಂಸ್ಕೃತಿ, ಧರ್ಮದ ಜನಾಂಗ ಇತರೆ ಭೂಭಾಗಗಳ ಸಂಸ್ಕೃತಿಗಳೊಂದಿಗೆ ತನ್ನ ಸಂಬಂಧವನ್ನು ಬೆಸೆದುಕೊಳ್ಳುವಲ್ಲಿ ಭಾಷಾಂತರದ ಪಾತ್ರ ಮಹತ್ವದ್ದಾಗಿದೆ. ಈ "ಭಾಷಾಂತರವು ಭಾಷೆಯ ಜೊತೆ ಜೊತೆಯಲ್ಲಿಯೇ ಬೆಳೆದು ಬಂದಿದ್ದು ಇದಕ್ಕೆ ಭಾಷೆಯಷ್ಟೇ ಸುದೀರ್ಘ ಇತಿಹಾಸವಿದೆ. ಆದರೆ ಭಾಷೆಗಳ ಇತಿಹಾಸವನ್ನು ರಚಿಸಿಕೊಂಡಂತೆ ಭಾಷಾಂತರದ ಇತಿಹಾಸವನ್ನು ರಚಿಸುವ ಪ್ರಯತ್ನಗಳು ಕನ್ನಡದಲ್ಲಿ ನಡದೇ ಇಲ್ಲ. ಯಾವುದೇ ದೇಶದ ಭಾಷೆಯಿರಲಿ ಅದು ಭಾಷಾಂತರದ ಮೂಲಕವೇ ಬೆಳೆದು ಬಂದಿದೆ ಹಾಗೂ ಇತರೆ ಭಾಷಿಕ ವಲಯಗಳಲ್ಲಿ ವಿಸ್ತರಿಸಿಕೊಂಡಿದೆ. ಜಗತ್ತಿನ ಎಲ್ಲಾ ಭಾಷೆ ಸಾಹಿತ್ಯಗಳನ್ನು ಭಾಷಾಂತರ ಪ್ರಕ್ರಿಯೆ ನಿರಂತರ ಪೋಷಿಸುತ್ತಲೇ ಬಂದಿದೆ.[೧]

ಈ ಭಾಷಾಂತರ ಪ್ರಕ್ರಿಯೆಯ ಮೂಲಕ ಜಗತ್ತಿನ ಎಲ್ಲಾ ಸಾಹಿತ್ಯ, ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಹಾರಗಳ ಕುರಿತು ಜ್ಞಾನವನ್ನು ಪಡೆಯಬಹುದು. ಅಲ್ಲದೆ ಒಂದು ಸಮಾಜದ ಜನರ ರೀತಿ–ನೀತಿಗಳು, ವಿಭಿನ್ನ, ಸಂಸ್ಕೃತಿ, ಧರ್ಮ, ಆಚಾರ–ವಿಚಾರ ಹೀಗೆ ಮುಂತಾದ ವಿಚಾರಗಳು ವಿನಿಯಮವಾಗುವುದು ಈ ಭಾಷಾಂತರದ ಮೂಲಕವೇ ಆಗಿದೆ. ಭಾಷಾಂತರ ಪ್ರಕ್ರಿಯೆಯು ನಿಂತ ನೀರಾಗಿರದೆ ಸದಾ ಹರಿಯುವ ಜೀವನದಿಯಾಗಿದ್ದು, ನಿತ್ಯಪರಿವರ್ತನಶೀಲವಾದುದಾಗಿದೆ. ಪತ್ರಿಕೆಯೊಂದರ ಸ್ವಾಗತದಲ್ಲಿ ಭಾಷಾಂತರದ ಕುರಿತು ಹೀಗೆ ಹೇಳಿದೆ.

"ಭವಭವದಿ ಭಾವಾವತಾರದ ಹರಕೆಯಿರಲಿ
ಭಾಷೆ ಭಾಷೆಯಲ್ಲಿ ಭಾಷಾಂತರದ ಕೃಪೆಯಿರಲಿ
ಸಾವಿರದ ನುಡಿಯಲ್ಲಿ ಸಾವಿರದ ಕೊರಳಲ್ಲಿ
ದಿಗಂತವ್ಯಾಪಿ ಕೇಳಿಸಲಿ ನನ್ನಾತ್ಮನಾದ[೨]

ಹೀಗೆ ಯಾವುದೇ ಭಾಷೆಯರಲಿ ಉತ್ಕೃಷ್ಟವಾಗಿ ಬೆಳೆಯಬೇಕಾದರೆ, ಶ್ರೇಷ್ಠ ಭಾಷೆಯಾಗಬೇಕಾದರೆ ಅದು ಇತರೆ ಭಾಷೆಗಳ ಜೊತೆಗೆ ಕೊಡುಕೊಳ್ಳುವ ವ್ಯವಹಾರವನ್ನು ಮಾಡಬೇಕಾಗಿರುತ್ತದೆ. ಇದಕ್ಕೆ ಭಾಷಾಂತರವು ಸಹಾಯಕವಾಗಿ ಪರಿಣಮಿಸಿದೆ. ಭಾಷಾಂತರ ಇಲ್ಲವೇ ಅನುವಾದದ ಅರ್ಥವನ್ನು ಕುರಿತು ಹೀಗೆ ಹೇಳಬಹುದು.

ಅನುವಾದದ ಅರ್ಥ ಮತ್ತು ಸ್ವರೂಪ

ಅನುವಾದವು ತನ್ನದೇ ಆದ ಅರ್ಥ ಮತ್ತು ವ್ಯಾಪ್ತಿಯನ್ನು ಹೊಂದಿದೆ. "Translation ಎಂಬ ಪದಕ್ಕೆ ಸಂವಾದಿಯಾಗಿ ಭಾಷಾಂತರ ಎಂದು ಕನ್ನಡದಲ್ಲಿ ಬಳಕೆಯಾಗುತ್ತಿದೆ. ಅನುಗುಣವಾಗಿ ವಾದಿಸುವುದು ಅಥವಾ ಅನುಸರಿಸಿ ಹೇಳುವುದು ಎಂಬರ್ಥದಲ್ಲಿ 'ಅನುವಾದ' ಎಂಬ ಪದವನ್ನು ಭಾಷಾಂತರಕ್ಕೆ ಸಮಾನವಾಗಿಯೇ ಬಳಸಲಾಗುತ್ತಿದೆ. 'ತರ್ಜುಮಾ' ಎಂಬ ಪಾರಸಿ ಪದವು ತುರ್ಜುಮೆಯಾಗಿ ಕನ್ನಡದಲ್ಲಿ ಭಾಷಾಂತರಕ್ಕೆ ಪರ್ಯಾಯವಾಗಿ ಬಳಸಲಾಗುತ್ತದೆ. ಅಲ್ಲದೆ ಕನ್ನಡಿಸು, ಕನ್ನಡಿಕರಿಸು, ಕನ್ನಡ ಆವೃತ್ತಿ ಇವೆಲ್ಲವು ಕೂಡ ಭಾಷಾಂತರವನ್ನು ಸೂಚಿಸುತ್ತವೆ.[೩]

ಭಾಷಾಂತರಕ್ಕೆ ಹಿಂದಿಯಲ್ಲಿ ಅನುವಾದ್ ಎಂದರೆ ತಮಿಳಿನಲ್ಲಿ ಮೊಟಿಪೆಯರ್‌ಪ್ಪು ಎಂದು ತೆಲುಗಿನಲ್ಲಿ ಅನುವಾದಂ ಮತ್ತು ತರ್ಜುಮಾ ಎಂದು ಮಲಯಾಳಂನಲ್ಲಿ 'ಪರಿಭಾಷ' 'ವಿವರ್ತನಂ' ಎಂದು ತುಳು ಭಾಷೆಯಲ್ಲಿ 'ಅನುವಾದೋ' ಎಂದು ಕರೆಯಲಾಗುತ್ತದೆ. ಈ ಸಮಸ್ತ ಪದಗಳು ಕನ್ನಡದಲ್ಲಿ ಭಾಷಾಂತರಕ್ಕೆ ಸಮಾನ ಪದಗಳಾಗಿ ಕಂಡುಬರುತ್ತವೆ.

ಒಂದು ಭಾಷೆಯಲ್ಲಿ ಇರುವುದನ್ನು ಇನ್ನೊಂದು ಭಾಷೆಯಲ್ಲಿ ಲಿಪಿಯ ಮೂಲಕ ಹೇಳಬಹುದು. ಆದರೆ ಇದು ಬರವಣಿಗೆಯ ಸೀಮಿತ ಕ್ರಮವಾಗಿದ್ದು, ಅರ್ಥರಹಿತವಾಗಿರುತ್ತದೆ. ಹಾಗಾಗಿ ಇದು ಲಿಪಿ ಬದಲಾವಣೆ ಆಗುತ್ತದೆಯೇ ಹೊರತು ಭಾಷಾಂತರವಾಗುವುದಿಲ್ಲ.

ಭಾಷಾಂತರವನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ವ್ಯಾಖ್ಯಾನಗಳನ್ನಿಲ್ಲಿ ಚರ್ಚಿಸಬಹುದಾಗಿದೆ.

"ಭಾಷಾಂತರ ಒಂದು ಅಪರೂಪದ ಕ್ರಿಯೆಯೇನಲ್ಲ. ನಮಗೆ ತಿಳಿದೋ ತಿಳಿಯದೆಯೋ ನಾವು ಸದಾ ಅದರಲ್ಲಿ ತೊಡಗಿದ್ದೇವೆ. ಏಕೆಂದರೆ ಭಾಷೆಯೇ ಒಂದು ಭಾಷಾಂತರ. ಅಭಾಷಿಕವಾದ

ಇಂದ್ರಿಯ ಜನ್ಯ ಸಾರ್ಥಕ ಧ್ವನಿ ವ್ಯವಸ್ಥೆಯ ಮೂಲಕ ಅಭಿವ್ಯಕ್ತಿಗೊಳಿಸುವ ಇತರರಿಗೆ ತಿಳಿಸುವ ಭಾಷಾರೂಪದ ಕ್ರಿಯೆಯೂ ಭಾಷಾಂತರವೇ. ನಾವು ಮಾತನಾಡುವಾಗ ಇನ್ನೊಬ್ಬರು ಹೇಳಿದ್ದು, ನಮಗೆ ಅರ್ಥವಾಗದೆ ಹಾಗಂದರೆ ಏನು ಎಂದು ನಾವು ಕೇಳುವಾಗ ಭಾಷಾಂತರವನ್ನೇ ಬೇರೆ ಶಬ್ದಗಳಲ್ಲಿ ಅವರು ಅದನ್ನು ತಿಳಿಸುವಾಗ ಅವರು ಮಾತನಾಡುತ್ತಿರುವುದೂ ಭಾಷಾಂತರವೇ ಎಂದು ಎನ್. ಬಾಲಸುಬ್ರಹ್ಮಣ್ಯ ಅವರು ತಿಳಿಸುತ್ತಾರೆ.

ಓ.ಎಲ್.ನಾಗಭೂಷಣಸ್ವಾಮಿಯವರು ನಮ್ಮ ಎಲ್ಲಾ ಗ್ರಹಿಕೆಗಳು ಭಾಷಾಂತರಗಳೇ ಆಗುತ್ತವೆ ಎನ್ನುತ್ತಾರೆ. ವಿಮರ್ಶಕರಾದ ದಿವಂಗತ ಕೀರ್ತಿನಾಥ ಕುರ್ತಕೋಟಿ ಅವರು ಭಾಷಾಂತರ ಎಂಬ ಪದವನ್ನು ಕೂಡ ಕೇವಲ ಅದರ ವಾಚ್ಯಾರ್ಥದಲ್ಲಿ ಮಾತ್ರ ಗ್ರಹಿಸದೆ ಅದರ ರೂಪಕಾರ್ಥದಲ್ಲಿ ಕೂಡ ಸ್ವೀಕರಿಸಬೇಕು. ಬ್ರಿಟೀಷರ ಸಂಪರ್ಕ ನಮಗೆ ಬಂದ ಮೇಲೆ ನಮ್ಮ ದೇಶದಲ್ಲಿ ನಡೆದ ಎಲ್ಲಾ ಬದಲಾವಣೆಯ ಪ್ರಕ್ರಿಯೆಗಳು ಒಂದು ದೃಷ್ಟಿಯಿಂದ ಭಾಷಾಂತರಗಳೇ ಆಗಿವೆ. ವಿದ್ಯಾವಂತರು ಇಂಗ್ಲೀಷ್ ಭಾಷೆಯನ್ನು ಕಲಿತದ್ದು, ಮಿಷನರಿಗಳು ಮತಾಂತರ ನಡೆಸಿದ್ದು, ಭೂಮಿಗಳನ್ನು ವಿಂಗಡಿಸಿ ಜಮೀನ್ದಾರಿ ರೈತವಾರಿಯಂಥ ವ್ಯವಸ್ಥೆಯಲ್ಲಿ ಅವುಗಳನ್ನು ಸೇರಿಸಿದ್ದು, ಸಂಚಾರದ ಹೊಸ ಸಾಧನೆಗಳು ರಸ್ತೆ, ಅಂಚೆ ತಂತಿಯಂಥ ಹೊಸ ವ್ಯವಸ್ಥೆಗಳು, ಕೋರ್ಟು, ಕಛೇರಿಗಳು ಇಂಥ ಎಲ್ಲಾ ಕಾರ್ಯ ವ್ಯವಸ್ಥೆಗಳು ಭಾಷಾಂತರದ ರೂಪಗಳೇ ಆಗಿವೆ. ಭಾಷಾಂತರದ ಅರ್ಥ ಯಾವೆಲ್ಲಾ ನೆಲೆಯಲ್ಲಿ ವಿಸ್ತರಿಸಿಕೊಳ್ಳಬಹುದು ಎಂಬುದು ಈ ವ್ಯಾಖ್ಯೆ ತಿಳಿಸುತ್ತದೆ. ಅವರೇ ಹೇಳುವಂತೆ ಭಾಷಾಂತರವೆಂದರೆ ಮುಖ್ಯವಾಗಿ ಒಂದು ಸಂಸ್ಕೃತಿಕ ವಿನಿಮಯ ಮುಂದುವರೆದು ಭಾಷಾಂತರವೆಂದರೆ ಎರಡು ಭಾಷೆಗಳ ನಡುವೆ ನಡೆಯುವ ವ್ಯವಹಾರ. ಭಾಷೆಗೆ ಅನ್ವಯಿಸುವ ನಿಯಮಗಳೆಲ್ಲ ಇಲ್ಲಿಯ ಭಾಷೆಗಳಿಗೂ ಅನ್ವಯಿಸುತ್ತದೆ.

ಭಾಷಾಂತರವೆಂದರೆ ಎರಡು ಭಾಷೆಗಳನ್ನು ಒಂದುಗೂಡಿಸುವ ಮಹತ್ವಪೂರ್ಣ ಸಾಂಸ್ಕೃತಿಕ ಕ್ರಿಯೆ ಎಂದು ಸಿ.ಎನ್. ರಾಮಚಂದ್ರನ್ ಅವರು ಅಭಿಪ್ರಾಯಪಡುತ್ತಾರೆ.

ಭಾಷಾಂತರ ಕುರಿತಂತೆ ಪ್ರಧಾನ ಗುರುದತ್ತ ಅವರ ಅಭಿಪ್ರಾಯ ಹೀಗಿದೆ. ಭಾಷೆ ದೇಹ ಅಥವಾ ಶರೀರವಿದ್ದಂತೆ. ವಸ್ತು ಆತ್ಮವಿದ್ದಂತೆ ಎಂದು ಒಪ್ಪಿಕೊಳ್ಳಬೇಕಾದರೆ, ಆತ್ಮಕ್ಕೆ ಭಂಗ ಬರದಂತೆ ದೇಹಾಂತರ ಕಾರ್ಯ ನಡೆಸುವುದೇ ಭಾಷಾಂತರದ ಉದ್ದೇಶವಾಗುತ್ತದೆ. ಅಂದರೆ 'ಭಾಷಾಂತರ ಭಾವಾಂತರ' ಮಾತ್ರವಾಗುತ್ತದೆ. ಅವರೇ ಮುಂದುವರಿದು ಭಾಷಾಂತರದ ರಚನೆಯನ್ನು ಕುರಿತು ಹೇಳುತ್ತಾರೆ. ಮೂಲ ಸಾಹಿತಿಯಂತೆಯೇ ಭಾಷಾಂತರಕಾರನೂ ಸೃಜನಶೀಲನಾಗಿರಬೇಕು. ಆಗಲೇ ಪುನಸೃಷ್ಟಿ ಎಂಬ ಮಾತಿಗೆ ಸಾರ್ಥಕ್ಯ ಬರುವುದು. ಈ ಮಾತನ್ನು ಇನ್ನೂ ಸ್ವಲ್ಪ ಪರಿಷ್ಕರಿಸಿ ಮೂಲ ಸಾಹಿತಿಯದು ಸೃಷ್ಟಿ ಕಾರ್ಯವಾದರೆ ಭಾಷಾಂತರಕಾರನದು ಅನುಸೃಷ್ಟಿಕಾರ್ಯ ಅನುಸೃಷ್ಟಿ ಎಂಬ ಮಾತು ವಿಶೇಷ ಅರ್ಥವುಳ್ಳದ್ದೆಂಬುದನ್ನು ಗಮನಿಸಬೇಕು.

ಸಿ.ಪಿ.ಕೆ.ಯವರು ಸೃಜನಶೀಲ ಭಾಷಾಂತರಕಾರರನ್ನು ಕುರಿತು ಈ ರೀತಿ ಹೇಳುತ್ತಾರೆ. ಭಾಷಾಂತರವೊಂದು ಯಾಂತ್ರಿಕ ಕರ್ಮವಲ್ಲ, ಮೂಲಲೇಖಕನದು ಸೃಷ್ಟಿಯಾದರೆ ಭಾಷಾಂತರಕಾರನದು ಅನುಸೃಷ್ಟಿ. ಎರಡಕ್ಕೂ ಪ್ರೇರಕವಾದದ್ದು ಪ್ರತಿಭಾ ಸೃಷ್ಟಿ. ಮೂಲ ಲೇಖಕನದು ಕಾರಯಿತ್ರೀ ಪ್ರತಿಭೆಯಾದರೆ ಭಾಷಾಂತರಕಾರನದು ಭಾವಯಿತ್ರೀ ಪ್ರತಿಭೆ. ಎರಡೂ ಒಂದೇ ಶಕ್ತಿಯ ಎರಡು ಪಾರ್ಶ್ವಗಳು. ಮೂಲಕವಿಗೆ ಇರಬೇಕಾದ ಸಹಾನುಭೂತಿ, ಸಹೃದಯತೆ, ಸೂಕ್ಷ್ಮಸಂವೇದನೆ, ಕ್ರಾಂತದರ್ಶನ, ಪರಕಾಯ ಪ್ರವೇಶ ಸಾಮರ್ಥ್ಯ, ಜೀವನಾನುಭವ ಭಾಷಾಂತರಕಾರನಲ್ಲೂ ಇರಬೇಕಾಗುತ್ತದೆ. ಅವನು ಮೂಲದ ಎತ್ತರಕ್ಕೇರಿ ಆಳಕ್ಕಿಳಿದು ಆ ಕಾವ್ಯ ಸಂಸ್ಕಾರವನ್ನು ತನ್ನ ಹೃದಯಾಂಗಣದಲ್ಲಿ ಮನಸ್ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅದನ್ನು ತನ್ನ ಭಾಷೆಯಲ್ಲಿ ಮಾತ್ರ ಕಟ್ಟುತ್ತಾನೆ.[೪]

ಹೀಗೆ ಭಾಷಾಂತರ ಪ್ರಕ್ರಿಯೆಯು ನಮಗೆ ಗೊತ್ತಿಲ್ಲದೆಯೇ ನಿತ್ಯಜೀವನದಲ್ಲಿ ನಡೆಯುತ್ತಿರುತ್ತದೆ. ನಮ್ಮ ಸಂಸ್ಕೃತಿ, ಆಚಾರ ವಿಚಾರ ಮುಂತಾದವುಗಳು ವಿನಿಮಯಗೊಳ್ಳುವುದು ಈ ಭಾಷಾಂತರ ಪ್ರಕ್ರಿಯೆಯ ಮೂಲಕವೇ ಎಂದು ಹೇಳಬಹುದು.

ಭಾಷಾಂತರ ಪ್ರಕ್ರಿಯೆಯು ಮೊದಲಿಗೆ ಧಾರ್ಮಿಕ ವಲಯದಲ್ಲಿ ಹೆಚ್ಚು ನಡೆಯುತ್ತಿದ್ದು, ಧರ್ಮದ ಪ್ರಚಾರದ ಸಂದರ್ಭದಲ್ಲಿ ಅದರಲ್ಲೂ ಬಹುಮುಖ್ಯವಾಗಿ ಕ್ರೈಸ್ತಧರ್ಮದ ಪ್ರಚಾರದ ಸಂದರ್ಭದಲ್ಲಿ ಭಾಷಾಂತರವು ಪ್ರಮುಖ ಪಾತ್ರವಹಿಸಿದೆ. ಮೊದಮೊದಲು ಕ್ರಿಶ್ಚಿಯನ್ನರು ಬೈಬಲ್ಲಿನ ಭಾಷಾಂತರವನ್ನು ವಿರೋಧಿಸಿದರೂ ಕೂಡ ಕಾಲಾನಂತರದಲ್ಲಿ ಕ್ರೈಸ್ತಧರ್ಮವನ್ನು ವಿಶ್ವಧರ್ಮವನ್ನಾಗಿ ಮಾಡುವ ನಿಟ್ಟಿನಲ್ಲಿ ಬೈಬಲ್ಲಿನ ಭಾಷಾಂತರಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಈ ಬೈಬಲ್ ಗ್ರಂಥವು ಜಗತ್ತಿನ ಸುಮಾರು ೪೦೦ ಭಾಷೆಗಳಿಗೆ ಅನುವಾದವಾಗಿದೆ ಎಂದು ವಿದ್ವಾಂಸರು ಅಂದಾಜಿಸಿದ್ದಾರೆ.

ಅದೇ ರೀತಿ ಇನ್ನೊಂದು ಪ್ರಮುಖ ಧರ್ಮವಾದ ಇಸ್ಲಾಂ ಧರ್ಮವು ಕೂಡ ಪವಿತ್ರವಾದ ತನ್ನ ಖುರಾನ್ ಗ್ರಂಥವನ್ನು ಅನೇಕ ಭಾಷೆಗಳಿಗೆ ಭಾಷಾಂತರಿಸಿದ್ದನ್ನು ಕಾಣಬಹುದು. ಆದರೆ ಇದು ಹೆಚ್ಚು ಭಾಷಾಂತರಗೊಂಡಿಲ್ಲ. ಇದಕ್ಕೆ ಕಾರಣ ಖುರಾನ್ ಗ್ರಂಥವು ಅರೇಬಿಕ್ ಭಾಷೆಯಲ್ಲಿದ್ದು "ಇಸ್ಲಾಂ ದೈವಶಾಸ್ತ್ರವು ಕುರಾನನ್ನು ಪವಾಡ ಸದೃಶ್ಯವಾದ ಅನನುಕರಣೀಯವಾದ ದೈವವಾಣಿ ಎಂದು ನಂಬಿರುವುದರಿಂದ ಅದನ್ನು ಇನ್ನೊಂದು ಭಾಷೆಯಲ್ಲಿ ಇಲ್ಲವೇ ಇನ್ನೊಂದು ರೂಪದಲ್ಲಿ ತರುವುದು ಸಾಧ್ಯವೇ ಇಲ್ಲ ಎನ್ನುವುದು ಅದರ ನಂಬಿಕೆಯಾಗಿದೆ ಎಂದು ವಿದ್ವಾಂಸರು ಗುರ್ತಿಸುತ್ತಾರೆ. ನಂತರದ ದಿನಗಳಲ್ಲಿಯಾದರೆ ಈ ನಂಬಿಕೆಯನ್ನು ಮೀರಿ ಖುರಾನ್ ಬಹುತೇಕ ಏಶಿಯನ್, ಆಫ್ರಿಕನ್ ಮತ್ತು ಯುರೋಪಿನ ಭಾಷೆಗಳಿಗೆ ಭಾಷಾಂತರಗೊಂಡಿತು. ಆದರೆ ಈ

ಎಲ್ಲಾ ಭಾಷಾಂತರಗಳು ನಡೆದ ನಂತರವೂ ಇಸ್ಲಾಂ ತನ್ನ ದೈವಶಾಸ್ತ್ರೀಯ ನಂಬಿಕೆಗೆ ಬದ್ಧವಾಗಿ ಪಠನಕ್ಕೆ ಅರಾಬಿಕ್ ಮೂಲವನ್ನೇ ಉಳಿಸಿಕೊಂಡು ಆಗಿರುವ ಎಲ್ಲಾ ಭಾಷಾಂತರಗಳನ್ನು ಅರ್ಥೈಸುವಿಕೆಗಳೆಂದೇ ಗುರ್ತಿಸಿದೆ.[೫] ಹಾಗಾಗಿ ಇಂದಿಗೂ ಕೂಡ ಅರೇಬಿಕ್ ಖುರಾನ್ ಮಾತ್ರ ಅಧಿಕೃತ ಖುರಾನ್ ಆಗಿ ಉಳಿದಿದೆ.

ಕ್ರೈಸ್ತಧರ್ಮ ಮತ್ತು ಇಸ್ಲಾಂಧರ್ಮಗಳಂತೆ ಬೌದ್ಧಧರ್ಮವು ಕೂಡ ಒಂದಾಗಿದ್ದು ಬುದ್ದದೇವನು ತನ್ನ ಜನತೆಗೆ ಪಾಳಿ ಭಾಷೆಯಲ್ಲಿ ಉಪದೇಶವನ್ನು ನೀಡಿದ. ಬುದ್ಧದೇವನ ನಿರ್ವಾಣದ ನಂತರ ಬುದ್ಧನ ಉಪದೇಶಗಳನ್ನು ಆಗ ಅಸ್ತಿತ್ವದಲ್ಲಿದ್ದ ಗೀರ್ವಾಣ ಭಾಷೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಸಂಸ್ಕೃತ ಭಾಷೆಯಲ್ಲಿ ಬೌದ್ಧ ಸಾಹಿತ್ಯವನ್ನು ರಚಿಸಿದ್ದಲ್ಲದೆ ಪಾಳಿಭಾಷೆಯಲ್ಲಿನ ಬುದ್ಧನ ಉಪದೇಶಗಳನ್ನು ಸಂಸ್ಕೃತ ಭಾಷೆಗೆ ಭಾಷಾಂತರಿಸಲಾಯಿತು. ಇದಲ್ಲದೆ ನೇಪಾಳಿ, ಚೀನಾ, ಜಪಾನ್, ಕೊರಿಯಾ ಭಾಷೆಗಳಿಗೂ ಭಾಷಾಂತರಗೊಂಡಿದೆ.

ಭಾಷಾಂತರ ಪ್ರಕ್ರಿಯೆ ಎನ್ನುವಂಥದ್ದು ಕೇವಲ ಧಾರ್ಮಿಕ ವಲಯಕಷ್ಟೇ ಸೀಮಿತವಾಗಿರದೆ ಶೈಕ್ಷಣಿಕ, ಆಡಳಿತ, ವಾಣಿಜ್ಯ, ಸಾಹಿತ್ಯ ಹೀಗೆ ಹಲವು ಕ್ಷೇತ್ರಗಳಲ್ಲಿ ಕೂಡ ಭಾಷಾಂತರದ ಪಾತ್ರ ಮಹತ್ವದ್ದಾಗಿದೆ. ಹಾಗೂ ಜಗತ್ತಿನ ಪ್ರಮುಖ ಸಾಹಿತ್ಯ ಪರಂಪರೆಯ ಹಿಂದೆ ಈ ಭಾಷಾಂತರವು ಕೆಲಸ ಮಾಡಿದೆ. ಹಲವು ನಾಗರಿಕತೆಗಳ ನಡುವಿನ ಸಾಂಸ್ಕೃತಿಕ ವಿನಿಮಯ ಮತ್ತು ಮಾನವನ ಬೌದ್ಧಿಕ ವಿಕಾಸ ಹೀಗೆ ಮುಂತಾದವುಗಳು ಭಾಷಾಂತರದ ಮೂಲಕವೇ ನಮಗೆ ವೇದ್ಯವಾಗುತ್ತದೆ.

ಭಾರತದಲ್ಲಿ ಸಾಹಿತ್ಯ ಭಾಷಾಂತರದ ಸಂದರ್ಭವನ್ನು ಕುರಿತು ಪಣಿಕ್ಕರ್ ಅವರು ಹೀಗೆ ವಿವರಿಸುತ್ತಾರೆ. "ಮಧ್ಯಯುಗದ ಉದ್ದಕ್ಕೂ, ಭಾರತದ ಉದ್ದಗಲಕ್ಕೂ ತದ್ವತ್ ಮತ್ತು ನಿಖರತೆ ಎನ್ನುವ ಔಪಚಾರಿಕ ಸಮಾನತೆಯ ಯಾವುದೇ ಚಿಂತೆ ಇಲ್ಲದೆ ಸಂಸ್ಕೃತದ ಅಭಿಜಾತ ಕೃತಿಗಳಾದ ಮಹಾಕಾವ್ಯ ಮತ್ತು ಪುರಾಣಗಳನ್ನು ಮತ್ತೆ ಹೇಳುವ, ಅಳವಡಿಕೆಗೊಳಿಸುವ, ಬುಡಮೇಲಾಗಿಸುವ ಮತ್ತು ಭಾಷಾಂತರ ಮಾಡುವ ಕೆಲಸವು ನಡೆದಿದೆ. ಮಧ್ಯಕಾಲೀನ ಭಾರತೀಯ ಭಾಷಾಂತರದ ಈ ರಾಜಕಾರಣವನ್ನು ನಾವು ಅದರ ಭಾಷಾಂತರಕಾರರ ನೆಲೆಯಿಂದ ಅಧಿಕೃತತೆ (ಮೂಲನಿಷ್ಠತೆ) ಕುರಿತ ಉದ್ವಿಗ್ನತೆಯ ಗೈರುಹಾಜರಿಯೆಂದು ಅರ್ಥೈಸಿಕೊಳ್ಳಬಹುದು. ಈ ಸ್ಥಳೀಯ/ಪ್ರಾದೇಶಿಕ ಆವೃತ್ತಿಗಳು ಆಯಾ ಪ್ರಾದೇಶಿಕ ಸಾಹಿತ್ಯದ ಅಭಿಜಾತ ಕೃತಿಗಳಾಗಿ ಜನಮನ್ನಣೆ ಪಡೆದಿದೆ ಎನ್ನುವುದು ಆಧುನಿಕ ಸಂದರ್ಭಕ್ಕಿಂತ ಭಿನ್ನವಾದುದನ್ನು ಎತ್ತಿತೋರಿಸುತ್ತದೆ.[೬]

ನಮ್ಮ ನಾಡಿನ ಮಹಾಕಾವ್ಯಗಳೆಂಬ ಖ್ಯಾತಿಗೆ ಪಾತ್ರವಾದ ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಜೈನ ಮತ್ತು ಬೌದ್ಧ ಆವೃತ್ತಿಗಳು ಕ್ರಮವಾಗಿ ಪ್ರಾಕೃತ ಮತ್ತು ಪಾಳಿ ಭಾಷೆಯಲ್ಲಿ

ಬಂದಿದ್ದು ಇವು ಶ್ರೀಲಂಕಾ, ಮಲಯ ದೇಶಗಳಲ್ಲಿ ಕೂಡ ಕಂಡುಬಂದಿದ್ದು ನಂತರ ೫–೬ನೆಯ ಶತಮಾನದಲ್ಲಿ ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಅವು ಅವತರಣಿಕೆಗಳ ರೂಪದಲ್ಲಿ ಅಲ್ಲಲ್ಲಿ ಕಂಡುಬಂದವು. ಕ್ರಿ.ಶ. ೯ನೆಯ ಶತಮಾನದಲ್ಲಿ ಕನ್ನಡದಲ್ಲಿ ಪಂಪನು, ಕ್ರಿ.ಶ. ೧೧ನೆಯ ಶತಮಾನದಲ್ಲಿ ತೆಲುಗಿನಲ್ಲಿ ನನ್ನಯ್ಯನೂ, ಕ್ರಿ.ಶ. ೧೨ನೆಯ ಶತಮಾನದಲ್ಲಿ ತಮಿಳಿನಲ್ಲಿ ಕಂಬನು ಕನ್ನಡದಲ್ಲಿ ನಾಗಚಂದ್ರನು ರಾಮಾಯಣವನ್ನು ಬರೆದರು. ಈ ಮಹಾಕಾವ್ಯಗಳು ಅಸ್ಸಾಮಿ, ಒರಿಯಾ ಮತ್ತು ಬಂಗಾಳಿ ಭಾಷೆಗಳಿಗೂ ನಂತರ ಕ್ರಿ.ಶ.೧೫ ಮತ್ತು ೧೬ನೆಯ ಶತಮಾನದಲ್ಲಿ ಪರ್ಶಿಯನ್ ಭಾಷೆಗೆ ಭಾಷಾಂತರಗೊಂಡಿವೆ.

ಇನ್ನೆರಡು ಪ್ರಮುಖ ಕೃತಿಗಳಾದ ಕಥಾ ಸರಿತ್ಸಾಗರ ಮತ್ತು ಪಂಚತಂತ್ರ ಕೃತಿಗಳು ಕ್ರಿ.ಪೂ. ೨–೩ನೆಯ ಶತಮಾದನಲ್ಲಿ ಕಾಶ್ಮೀರದಲ್ಲಿ ರಚನೆಯಾಗಿದ್ದು ಪರ್ಶಿಯಾ, ಅರೇಬಿಯಾ, ಸಿರಿಯಾ, ಯೂರೋಪ್ ಮತ್ತು ದಕ್ಷಿಣ ಏಷ್ಯಾ ದೇಶಗಳಲ್ಲಿ ಭಾಷಾಂತರಗೊಂಡಿವೆ.

"ಹೀಗೆ ಜಗತ್ತಿನಾದ್ಯಂತ ಭಿನ್ನ ಸಾಹಿತ್ಯ ಪರಂಪರೆಗಳ ಉದಯದ ಅಂತೆಯೇ ಉಚ್ಛ್ರಾಯದ ಹಿಂದೆ ಸಾಹಿತ್ಯ ಭಾಷಾಂತರವು ಅಪಾರವಾದ ಕೆಲಸ ನಿರ್ವಹಿಸಿದ್ದು, ಅದರ ಪ್ರತಿನಿಧಿಕ ಉದಾಹರಣೆಯಾಗಿ ಭಾರತೀಯ ಸಂದರ್ಭದೊಳಗೆ ಕನ್ನಡವು ಹೀಗೆ ಭಾಷಾಂತರದ ಮೂಲಕ ಬೆಳೆದು ಬಂದಿತು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.[೭]

ನಮ್ಮಲ್ಲಿ ಈ ಭಾಷಾಂತರ ಪ್ರಕ್ರಿಯೆಯು ಸಂಸ್ಕೃತ, ಪ್ರಾಕೃತ, ಪಾಳಿ, ಭಾಷೆಗಳ ನಡುವಿನ ಕೊಡುಕೊಳ್ಳುವಿಕೆಯಿಂದ ನಡೆಯುತ್ತಿದ್ದು ಜೈನ, ಬೌದ್ಧ ಮತ್ತು ವೈದಿಕ ಧರ್ಮಗಳು ಕ್ರಮವಾಗಿ ಪ್ರಾಕೃತ, ಪಾಳಿ ಮತ್ತು ಸಂಸ್ಕೃತ ಭಾಷೆಗಳನ್ನು ತಮ್ಮ ಅಭಿವ್ಯಕ್ತಿ ಕ್ರಿಯೆಗಾಗಿ ಬಳಸಿಕೊಳ್ಳುತ್ತಿದ್ದು, ಕ್ರಿ.ಪೂ. ಕೊನೆಯ ಸಂದರ್ಭದಲ್ಲಿ ಪಾಳಿ ಮತ್ತು ಪ್ರಾಕೃತ ಭಾಷೆಗಳಿಗಿಂತ ಸಂಸ್ಕೃತ ಭಾಷೆಯು ಮುಂಚೂಣಿಯಲ್ಲಿತ್ತು. ಅಲ್ಲದೇ ಪಾಳಿ ಮತ್ತು ಪ್ರಾಕೃತ ಭಾಷೆಗಳನ್ನು ಹಿಂದಿಕ್ಕಿದ ಸಂಸ್ಕೃತ ಭಾಷೆಯು ಶೈಕ್ಷಣಿಕ ಭಾಷೆಯಾಗಿ ಬಳಸಲ್ಪಟ್ಟಿತು. ಇದರಿಂದ ಬೌದ್ಧ ಮತ್ತು ಜೈನ ಧರ್ಮದ ಸಾಹಿತ್ಯವು ಸಂಸ್ಕೃತದಲ್ಲಿ ರಚಿಸಲ್ಪಟ್ಟಿತು.

ನಂತರ ಪ್ರಾಕೃತ ಭಾಷೆ, ಪಾಳಿ ಭಾಷೆ ಮತ್ತು ಸಂಸ್ಕೃತ ಭಾಷೆಗಳು ಸ್ಥಳೀಯ ಭಾಷೆಗಳಾದ ತಮಿಳು, ಕನ್ನಡ ಭಾಷೆಗಳ ಸಾಹಿತ್ಯ ಸೃಷ್ಟಿಯಲ್ಲಿ ಇವು ಮಹತ್ತರ ಪಾತ್ರವನ್ನು ವಹಿಸಿದ್ದು ಈ ಭಾಷೆಗಳಿಗೆ ಆಕರಗಳಾಗಿ ಪರಿಣಮಿಸಿದವು. ಹೀಗೆ ನಿರ್ಮಾಣವಾದ ಒಂದು ಭಾಷಾಂತರ ಪರಂಪರೆ ಕನ್ನಡ ಭಾಷೆಯದ್ದು ಎಂದು ಹೇಳಬಹುದು.

"ಕನ್ನಡ ನಾಡಿನ ದ್ವಿ/ಬಹುಭಾಷಿಕ ಪರಿಸರವೇ ಇಲ್ಲಿನ ಭಾಷಾಂತರ ಚರಿತ್ರೆಯ ಜೀವನಾಡಿ ಎಂದರೆ ತಪ್ಪಲ್ಲ. ಕನ್ನಡಿಗರು ಮೂರು ಕಾರಣಗಳಿಗಾಗಿ ದ್ವಿ/ಬಹುಭಾಷಿಕರಾಗಿದ್ದಾರೆ.

೧. ಕನ್ನಡ ನೆಲ ತುಳು, ಕೊಡವ ಇತ್ಯಾದಿ ಭಾಷೆಗಳ ತಾಯಿ ನೆಲ ಕೂಡ ಆಗಿರುವುದರಿಂದ.

೨. ತನ್ನ ಗಡಿಗಳನ್ನು ತಮಿಳು, ತೆಲುಗು, ಮರಾಠಿ, ಮಲಯಾಳಂನಂತಹ ಭಿನ್ನ ಭಾಷೆಗಳೊಂದಿಗೆ ಹಂಚಿಕೊಂಡಿರುವುದರಿಂದ.

೩. ಶೈಕ್ಷಣಿಕ, ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಗಾಗಿ ಭಿನ್ನ ಭಾಷೆಗಳನ್ನು ಸಂಸ್ಕೃತ ಮತ್ತು ಇಂಗ್ಲೀಷನ್ನು ಅವಲಂಬಿಸಿರುವುದರಿಂದ.[೮]

ಕನ್ನಡದಲ್ಲಿ ಭಾಷಾಂತರ ಪ್ರಕ್ರಿಯೆಯು ಎರಡು ನೆಲೆಯಲ್ಲಿ ನಡೆಯುತ್ತದೆ. ಒಂದು ಸಾಹಿತ್ಯದ ನೆಲೆಯಲ್ಲಿ ಮತ್ತೊಂದು ವ್ಯಾವಹಾರಿಕ ನೆಲೆಯಲ್ಲಿ. ಇದು ಕ್ರಿ.ಶ. ೫ ಮತ್ತು ೬ನೆಯ ಶತಮಾನದಿಂದ ನಡೆಯುತ್ತಿದ್ದು ಇದನ್ನು ಕನ್ನಡ ನಾಡಿನಲ್ಲಿ ದೊರೆತ ಶಾಸನಗಳಿಂದ ತಿಳಿಯಬಹುದು. ಈ ಶಾಸನಗಳಲ್ಲಿ ಸಾಹಿತ್ಯ ಮತ್ತು ವ್ಯವಹಾರಕ್ಕೆ ಸಂಬಂಧಿಸಿದ ಭಾಷಾಂತರ ದಾಖಲೆಗಳನ್ನು ಕಾಣಬಹುದು. ಉದಾಹರಣೆಗೆ ಕ್ರಿಸ್ತಪೂರ್ವದ ಎರಡನೆಯ ಶತಮಾನದ ಅಶೋಕನ ಶಾಸನಗಳು, ಕ್ರಿ.ಶ. ೪ನೆಯ ಶತಮಾನದ ಚಂದ್ರವಳ್ಳಿ ಶಾಸನ. ಇದು ಕನ್ನಡೇತರ ಭಾಷೆ ಪಾಲಿ ಮತ್ತು ಬ್ರಾಹ್ಮಿ ಲಿಪಿಯನ್ನು ಹೊಂದಿದೆ. ಕ್ರಿ.ಶ. ೫ನೆಯ ಶತಮಾನದಲ್ಲಿ ದೊರೆತ ಹಲ್ಮಿಡಿ ಶಾಸನವು ಕನ್ನಡದ ಪ್ರಥಮ ಶಾಸನವಾಗಿದ್ದು ಇದು ಕನ್ನಡ ಭಾಷೆ ಮತ್ತು ಕದಂಬರ ಕಾಲದ ಕನ್ನಡ ಲಿಪಿಯನ್ನು ಹೊಂದಿದೆ. ೭ನೆಯ ಶತಮಾನದ ಐಹೊಳೆ ಶಾಸನದ ಲಿಪಿ ಕನ್ನಡವಾದರೆ, ಭಾಷೆ ಸಂಸ್ಕೃತವಾಗಿದೆ. ಕ್ರಿ.ಶ. ೯ನೆಯ ಶತಮಾನದ ಗಂಗಾಧರಂ ಶಾನವು ಕನ್ನಡ ಲಿಪಿಯನ್ನು ಹೊಂದಿರುವ ಕನ್ನಡ, ಸಂಸ್ಕೃತ ಮತ್ತು ತೆಲುಗು ಭಾಷೆಗಳ ತ್ರಿಭಾಷಿಕ ಶಾಸನ ಸಿಕ್ಕಿದೆ.

ಕನ್ನಡದಲ್ಲಿ ಭಾಷಾಂತರವು ಜೈನ ಪ್ರಾಕೃತ ಮತ್ತು ಅಪಭ್ರಂಶ ಕೃತಿಗಳ ಸಂಸ್ಕೃತ ಭಾಷಾಂತರದೊಂದಿಗೆ ಆರಂಭವಾಗಿದ್ದು, ಜೈನ ಧರ್ಮವು ಶ್ರವಣಬೆಳಗೊಳವನ್ನು ಸಾಹಿತ್ಯದ ಪ್ರಮುಖ ಕೇಂದ್ರವನ್ನಾಗಿ ಮಾಡಿಕೊಂಡು ಜೈನ ಸಾಹಿತ್ಯವನ್ನು ಸಂಸ್ಕೃತ ಭಾಷೆಗೆ ಭಾಷಾಂತರಿಸುವ, ವ್ಯಾಖ್ಯಾನಿಸುವ ಕೆಲಸದಲ್ಲಿ ತೊಡಗಿತು. ಕ್ರಿ.ಶ. ೫-೬ನೆಯ ಶತಮಾನದ ಹೊತ್ತಿಗೆ ಕನ್ನಡ ವ್ಯಾಖ್ಯಾನವು ಕೂಡ ಆರಂಭಗೊಂಡಿತು. ಹೀಗೆ ಜೈನರಿಂದ ಆರಂಭಗೊಂಡ ವ್ಯಾಖ್ಯಾನ ಪರಂಪರೆಯಲ್ಲಿ ವೀರಶೈವ ಮತ್ತು ವೈದಿಕ ಕವಿಗಳನ್ನು ಕಾಣಬಹುದು. ಈ ಒಂದು ಸಂದರ್ಭದಲ್ಲಿ ಭಾಷಾಂತರ ಸಾಹಿತ್ಯವೊಂದು ದೊಡ್ಡ ಪ್ರಮಾಣದಲ್ಲಿ ರಚನೆಗೊಂಡಿತು.

ದಂಡಿಯ ಸಂಸ್ಕೃತದ ಲಕ್ಷಣಗ್ರಂಥವನ್ನು ಕನ್ನಡಕ್ಕೆ ತಂದ ಕವಿರಾಜಮಾರ್ಗಕಾರನು ಕಾವ್ಯ ನಿರ್ಮಾಣದ ಬಗ್ಗೆ ಕನ್ನಡಿಗರಿಗೆ ಸವಿವರವಾಗಿ ತಿಳಿಸಿದನು. ಸಂಸ್ಕೃತದ ಕಾವ್ಯಮೀಮಾಂಸೆಯನ್ನು ಭಾಷಾಂತರಿಸದೆ ಅದನ್ನು ಕನ್ನಡದ ಶೈಲಿಗನುಗುಣವಾಗಿ ಕಸಿ ಮಾಡಿದನು. ಇದರ ಜೊತೆಗೆ ಗಣಿತಶಾಸ್ತ್ರ, ವೈದ್ಯಶಾಸ್ತ್ರ, ಕಾಮಶಾಸ್ತ್ರ ಹೀಗೆ ಮುಂತಾದ ಶಾಸ್ತ್ರ ಕಾವ್ಯಗಳು ಭಾಷಾಂತರ

ಪ್ರಕ್ರಿಯೆಗೆ ಒಳಗಾದವು. "ಶಾಸ್ತ್ರ ಸಾಹಿತ್ಯದ ಈ ಆಸಕ್ತಿಯ ಜೊತೆ ಜೊತೆಗೆ ಸಂಸ್ಕೃತ ಮತ್ತು ಪ್ರಾಕೃತಗಳ ಕಾವ್ಯ ಮತ್ತು ಪುರಾಣ ಕಾವ್ಯಗಳನ್ನು ಕನ್ನಡದಲ್ಲಿ ಮರುಬರೆಯುವ ಅಭೀಪ್ಸೆಯೊಂದು ಕಾಣಿಸಿಕೊಂಡಿತು. ಈ ಅಭೀಪ್ಸೆ ಕನ್ನಡ ಸಾಹಿತ್ಯ ಪರಂಪರೆಯ ಮೂಲದ್ರವ್ಯವಾಗಿ ಕೆಲಸ ಮಾಡಿತು. ಜೈನ ಪುರಾಣಗಳು, ರಾಮಾಯಣ ಮಹಾಭಾರತ, ಆದಿಕಾವ್ಯಗಳು ಬೃಹತ್ ಕಥಾಕೋಶ ಇತ್ಯಾದಿಗಳು ಕನ್ನಡಕ್ಕೆ ಅವತರಿಸಿದವು. ಮೂಲಕವಿಗಳ ಸ್ಮರಣೆಯೊಂದಿಗೆ ಅಥವಾ ಅದಿಲ್ಲದೆಯೇ ಕನ್ನಡದ ಕಥೆಗಳಾಗಿ ಕಾಲದಿಂದ ಕಾಲಕ್ಕೆ ಮತ್ತೆ ಮತ್ತೆ ಬರೆಯಲ್ಪಟ್ಟವು. ಸಮುದ್ರ ಎಷ್ಟೇ ದೊಡ್ಡದಾದರೂ ಕುಡಿಯಲು ನದಿಯ ಸಿಹಿನೀರು ತಾನೇ ಬೇಕು ಎನ್ನುವ ಒತ್ತಾಸೆಯೊಂದಿಗೆ ಕನ್ನಡ ಅವತರಣಿಕೆಗಳು ತಮ್ಮ ನೆಲೆ ಬೆಲೆಗಳನ್ನು ಕಂಡುಕೊಂಡವು."[೯]

ನಂತರ ಭಾರತಕ್ಕೆ ಯುರೋಪಿಯನ್ನರ ಆಗಮನದಿಂದ ಕನ್ನಡ ಸಾಹಿತ್ಯವು ಬಹುವಿಸ್ತಾರವಾಗಿ ಬೆಳೆಯಿತು ಎನ್ನಬಹುದು. ಈ ಭಾಷಾಂತರ ಪ್ರಕ್ರಿಯೆಯು ಈ ಸಂದರ್ಭದಲ್ಲಿ ಅಧಿಕವಾಗಿತ್ತು. ಈ ಹಿಂದೆ ಸಂಸ್ಕೃತ ಸಾಹಿತ್ಯದಿಂದ ಪ್ರಭಾವಿತವಾದ ಕನ್ನಡ ಸಾಹಿತ್ಯವು ಇಂಗ್ಲೀಷ್ ಸಾಹಿತ್ಯದಿಂದ ಹೊಸರೂಪ ಪಡೆದುಕೊಳ್ಳತೊಡಗಿತು. "ಆಂಗ್ಲರ ಭಾಷಾಂತರವು ನಾಲ್ಕು ಕಾರಣಗಳಿಂದಾಗಿ ನಡೆಯುತ್ತಿತ್ತು.

೧. ಮತಾಂತರಕ್ಕಾಗಿ ಬೈಬಲ್ ಭಾಷಾಂತರ

೨. ಆಧುನಿಕ ಶಿಕ್ಷಣಕ್ಕಾಗಿ ವಿವಿಧ ಜ್ಞಾನಶಾಖೆಗೆ ಸಂಬಂಧಿಸಿದ ಜ್ಞಾನ ಪಠ್ಯಗಳ ಭಾಷಾಂತರ

೩. ಆಡಳಿತಾತ್ಮಕ ಅನುಕೂಲತೆಗಾಗಿ ದುಭಾಷಿಗಳ ಮೂಲಕ ಭಾಷಾಂತರ

೪. ಸಾಂಸ್ಕೃತಿಕ ತಿಳುವಳಿಕೆಗಾಗಿ ಸಾಹಿತ್ಯ ಪಠ್ಯಗಳ ಭಾಷಾಂತರ[೧೦]

"ಭಾರತದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಅರಂಭಿಸಿದ ಬ್ರಿಟೀಷ್ ಸರ್ಕಾರವು ಅದರ ಅಗತ್ಯವಾಗಿ ಪಶ್ಚಿಮದ ಜ್ಞಾನಪಠ್ಯಗಳನ್ನು ಕನ್ನಡದಲ್ಲಿ ರೂಪಿಸುವ ಕೆಲಸಕ್ಕೆ ತೊಡಗಿದರು. ಆಧುನಿಕ ಜ್ಞಾನಶಾಖೆಗಳಾದ ವಿಜ್ಞಾನ–ತಂತ್ರಜ್ಞಾನಗಳಲ್ಲದೆ ಭೂಗೋಳ, ಇತಿಹಾಸ ಇತ್ಯಾದಿ ಹಲವು ಸಮಾಜವಿಜ್ಞಾನದ ಪಠ್ಯಗಳನ್ನು ಭಾಷಾಂತರಿಸುವ ಕೆಲಸಕ್ಕೆ ಮುಂದಾದರು. ಇಂಗ್ಲೀಷ್ ಬೋಧನೆಯ ಬೋಧನಾ ವಿಧಾನವಾಗಿ ಭಾಷಾಂತರವನ್ನು ಪರಿಚಯಿಸಿದ್ದು, ಭಾಷಾಂತರಕ್ಕೆ ಚಲನೆಯೊಂದನ್ನು ನೀಡಿದಂತಾಗಿ ದೇಶೀ ಭಾಷಾಂತರಕಾರರ ಚಟುವಟಿಕೆಯು ಶೀಘ್ರದಲ್ಲಿಯೇ ಆರಂಭಗೊಂಡಿತು.[೧೧]

ಬ್ರಿಟೀಷರು ತಮ್ಮ ಒಡೆದು ಆಳುವ ನೀತಿಯಿಂದ ಸ್ಥಳೀಯ ರಾಜರುಗಳನ್ನು ಮೂಲೆಗುಂಪು ಮಾಡಿ ಆಡಳಿತವನ್ನು ಕೈಗೆತ್ತಿಕೊಂಡಾಗ ಸ್ಥಳೀಯವಾಗಿ ಆಡಳಿತ ನಡೆಸಲು ಕಷ್ಟವಾಗಿದ್ದಾಗ ಆಡಳಿತದ ಅನುಕೂಲಕ್ಕೋಸ್ಕರ ಆಂಗ್ಲಭಾಷೆಯನ್ನು ಜಾರಿಗೆ ತಂದರು. ಹಾಗಾಗಿ ಸಹಜವಾಗಿಯೇ ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಗಳು ನಡೆಯುತ್ತಿದ್ದವು.

ಬಿ.ಎಂ.ಶ್ರೀ.ಯವರು ತಮ್ಮ ಇಂಗ್ಲೀಷ್ ಗೀತೆಗಳ ಮೂಲಕ ಕನ್ನಡದಲ್ಲಿ ಆದ ಭಾಷಾಂತರ ಕಾರ್ಯವನ್ನು ಗುರ್ತಿಸಬಹುದು. ಉದಾಹರಣೆಗೆ

ಅವಳ ತೊಡಿಗೆ ಇವಳಿಗಿಟ್ಟು ನೋಡಬಯಸಿದೆ.

ಇವಳ ಉಡಿಗೆ ಅವಳಿಗಿಟ್ಟು ನೋಡಬಯಸಿದೆ.

ಅಂದರೆ ಕನ್ನಡ ಸಾಹಿತ್ಯಕ್ಕೆ ಆಂಗ್ಲ ಸಾಹಿತ್ಯದ ರೂಪವನ್ನು ಕೊಟ್ಟು ಕನ್ನಡ ಸಾಹಿತ್ಯವನ್ನು ವಿಸ್ತಾರವಾಗಿ ಬೆಳೆಸುವ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ.

"ಹೀಗೆ ಕನ್ನಡವು ನಿರಂತರವಾಗಿ ಅನ್ಯಭಾಷಾ ಸಂಪರ್ಕದಲ್ಲಿ ರೂಪಿಸಿದ ಸ್ವತಂತ್ರ ಅನುವಾದಗಳಂತೆ ಆಧುನಿಕ ದಿನಗಳಲ್ಲಿಯೂ ಪಾಶ್ಚಾತ್ಯ ಕೃತಿಗಳನ್ನಾಧರಿಸಿದ ಅನೇಕ ಸ್ವತಂತ್ರ ರಚನೆಗಳಿವೆ. ಬಿ.ಎಂ.ಶ್ರೀ.ಯವರ ಕವಿತೆಗಳು, ಅಶ್ವತ್ಥಾಮನ್‌ನಂತಹ ನಾಟಕ ಕೃತಿಗಳು ಕುವೆಂಪುರವರ ರಕ್ತಾಕ್ಷಿ ಮೊದಲಾದವು ಕನ್ನಡದ ಸ್ವತಂತ್ರಾಭಿವ್ಯಕ್ತಿಗಳು. ಆದರೆ ಆಕರ ಕೃತಿಗಳನ್ನು ಆಧರಿಸಿ ರೂಪಿಸಿದ ಕಾರಣಕ್ಕೆ ಒಂದರ್ಥದಲ್ಲಿ ಅನುವಾದಗಳೇ ಆಗಿವೆ."[೨]

ಇದುವರೆಗೆ ವಿದ್ವಾಂಸರ ಅಧ್ಯಯನಗಳ ಹಿನ್ನೆಲೆಯಲ್ಲಿ ಭಾಷಾಂತರ ಇಲ್ಲವೇ ಅನುವಾದ ಕುರಿತು ಚರ್ಚಿಸುವಲ್ಲಿ ಇದೊಂದು ಇತ್ತೀಚೆಗೆ ಶೈಕ್ಷಣಿಕ ಶಿಸ್ತಾಗಿ ಅನುವಾದ ಒಂದು ಕಲೆಯಾಗಿ ಬೆಳೆದುಬಂದಿದೆ. ಆದರೆ ಸಂಸ್ಕೃತ ಕಾವ್ಯ ಪುರಾಣಗಳನ್ನು ಕನ್ನಡ ಕಾವ್ಯ ಪುರಾಣಗಳನ್ನಾಗಿ ರೂಪಿಸುವಲ್ಲಿ ಅನುವಾದ ಒಂದು ಕಲೆಯಾಗಿ ರೂಪುಗೊಂಡಿಲ್ಲ. ರಸವತ್ತಾಗಿ, ಸ್ಥಳೀಯ ನೆಲಮೂಲಗಳಿಗೆ ಅರ್ಥವಾಗುವಂತೆ ಕಾವ್ಯ ಪುರಾಣಗಳು ರೂಪಾಂತರಗೊಂಡಿವೆ. ಸುದೀರ್ಘ ಕನ್ನಡ ಕಾವ್ಯ ಪರಂಪರೆಗೆ ಕನ್ನಡತ್ವದ ಕಸುವು ಇತ್ತೆಂಬುದಕ್ಕೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ರಚನೆಗೊಂಡ ಕಾವ್ಯಗಳೇ ಸಾಕ್ಷಿ. ಆದರೆ ಅನ್ಯಭಾಷಿಕರ ಆಡಳಿತದಿಂದ ಕನ್ನಡ–ಕರ್ನಾಟಕ ನಲುಗಿಹೋದಂತಹ ಸಂದರ್ಭದಲ್ಲಿ ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಹುಟ್ಟುಹಾಕುವ ಸಲುವಾಗಿ ಅನ್ಯಬಾಷೆಯ ರಸವತ್ತಾದ ಸನ್ನಿವೇಶ ಓದುವ ಇಲ್ಲವೇ ಕೃತಿಗಳನ್ನು ಅನುವಾದಿಸುವುದಕ್ಕೆ ಮುಂದಾದದ್ದು ಸರಿಯಾಗಿದೆ. ಈ ಹಿನ್ನೆಲೆಯಲ್ಲಿ ಗಂಗಾಧರ ಮಡಿವಾಳೇಶ್ವರಂಥ ಅನೇಕ ಜನ ವಿದ್ವಾಂಸರು ಅನುವಾದವನ್ನು ಸೃಜನಶೀಲ ಬರಹಗಾರರಷ್ಟೇ ಪ್ರೀತಿಯಿಂದ ಸ್ವೀಕರಿಸಿ ಮಾಡಿತೋರಿಸಿದರು. ಮಹಾರಾಷ್ಟ್ರದ ವೀರಾವೇಶದ ಕಥೆಗಳನ್ನು ಗಳಗನಾಥರಂಥ ಕಾದಂಬರಿಕಾರರು ಕನ್ನಡೀಕರಿಸಿ ಕನ್ನಡಿಗರಲ್ಲಿ ಓದುವ ಹವ್ಯಾಸವನ್ನು ಹಚ್ಚಿದರು. ವಿಶೇಷವಾಗಿ ಬಹುತೇಕ ಕನ್ನಡ ಕಾವ್ಯಗಳು ಪದ್ಯಮಯವಾಗಿದ್ದುದು ಸಹಜ. ೧೯ನೇ ಶತಮಾನದ ಆದಿಭಾಗದಲ್ಲಿ ಮುದ್ದಣ್ಣನಂಥ ಕವಿ 'ಪದ್ಯಂ ವದ್ಯಂ, ಗದ್ಯಂ ಹೃದ್ಯಂ' ಎಂದು ಗದ್ಯ ಪ್ರಕಾರಕ್ಕೆ ಆದ್ಯತೆ ಇತ್ತು. ಗದ್ಯ ಸಾಹಿತ್ಯ ಪ್ರಕಾರ ಹುಲುಸಾಗಿ ಬೆಳೆಯಲು ಕಾರಣನಾದನು. ಇಂಥ ಗದ್ಯ ಪ್ರಕಾರವನ್ನು ಸಮರ್ಥವಾಗಿ

ಬರೆದು, ಬೆಳೆಸಿದ ಮಹನೀಯರಲ್ಲಿ ಶ್ರೀ ಗಂಗಾಧರ ಮಡಿವಾಳೇಶ್ವರ ತುರುಮರಿ ಅವರು ಒಬ್ಬರು. ಹೀಗಾಗಿ ತುರಮರಿ ಅವರಂಥ ಅನುವಾದ ಕಾರ್ಯ ಅಥವಾ ಸಾಹಿತ್ಯ ಕೇವಲ ಪರಭಾಷೆಯ ಸಂಸ್ಕೃತಿ ವಿನಿಮಯ ಎಂದು ಭಾವಿಸದೇ, ಕನ್ನಡ ಗದ್ಯ ಪ್ರಕಾರದ ಕಸುವನ್ನು ಅರಿಯುವುದಾಗಿದೆ. ವಿಶೇಷವಾಗಿ ದೇಶಿ ಭಾಷೆ, ಆಶಯದ ಅನನ್ಯತೆಯನ್ನು ನಿರೂಪಿಸಲು ಸಾಧ್ಯವಾಗುತ್ತದೆ. ಸಂಸ್ಕೃತ ಬಾಣ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ ತುರಮರಿ ಅವರ ಆಶಯವನ್ನು ವಿಶ್ಲೇಷಿಸುವುದು ಈ ಅಧ್ಯಾಯದ ಪ್ರಮುಖ ಆಶಯವಾಗಿದೆ.

'ನಹಿಜ್ಞಾನೇನ ಸದೃಶಂ' ಎನ್ನುವ ಮಾತಿದೆ. ಜ್ಞಾನಕ್ಕೆ ಸಮಾನವಾದುದು ಯಾವುದೂ ಈ ಜಗತ್ತಿನಲ್ಲಿ ಇಲ್ಲ. ಅಥಣಿಯ ಮಡಿವಾಳೇಶ್ವರ ಸ್ವಾಮಿಗಳಿಂದ ಪಡೆದ ಸಂಸ್ಕೃತ ಜ್ಞಾನದಿಂದ ಗಂಗಾಧರ ಮಡಿವಾಳೇಶ್ವರರಿಗೆ ಬಾಣಕವಿಯನ್ನು ಕುರಿತು ಕುತೂಹಲ ಮೂಡಿ ಅವನನ್ನು ಓದಲು ಸಾಧ್ಯವಯಿತು. ಇದರಿಂದ ಗಂಗಾಧರರಿಗೆ ಬಾಣಕವಿಯ ಮೇಲೆ ಅಪಾರ ಗೌರವಾದರುಗಳು ಅಂಕುರಿಸಿ, ಬಾಣನನ್ನು ತಮ್ಮ ಆದರ್ಶಕವಿಯಾಗಿ ಸ್ವೀಕರಿಸಿದ್ದಲ್ಲದೆ ಬಾಣನ ಕಾದಂಬರಿ ಕೃತಿಯನ್ನು ಓದಿ ಅದರ ರಸವನ್ನು ತಾವಷ್ಟೇ ಸವಿಯದೆ ಅದನ್ನು ಕನ್ನಡದ ದೇಸಿ ಶೈಲಿಗೆ ಕಟೆದು ನಿಲ್ಲಿಸಿ ಕನ್ನಡದ ಜನತೆಗೂ ಸಹ ಅದರ ಸವಿಯನ್ನು ಉಣಬಡಿಸಿದರು.

ಗದ್ಯವು ಲೋಕೋಪಯೋಗಿ ಪದ್ಯವು ಭಾವೋಪಯೋಗಿ ಎಂಬ ಸಾಮಾನ್ಯ ಅಭಿಪ್ರಾಯವನ್ನು ಪಲ್ಲಟಗೊಳಿಸುವಂತೆ ಅತ್ಯುತ್ಕೃಷ್ಟ ಭಾವಗಳ ಅಭಿವ್ಯಕ್ತಿಗೆ ಗದ್ಯವೂ ಪದ್ಯದಷ್ಟೇ ಶಕ್ತವಾಗಿದೆಯೆಂದೂ ಗದ್ಯ ಕಾವ್ಯವೂ ಪದ್ಯ ಕಾವಕ್ಯಕ್ಕೆ ಸರಿಸಮವಾಗಿ ನಿಲ್ಲಬಲ್ಲುದೆಂದು ಸಾಧಿಸಿ ತೋರಿಸಲು ಬಾಣನ ಕಾದಂಬರಿಯನ್ನು ಅನುವಾದಿಸಿ ಗಂಗಾಧರ ಮಡಿವಾಳೇಶ್ವರರು 'ಗದ್ಯಂ ಕವಿನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಗಳ ಒರೆಗಲ್ಲು ಎನ್ನುವಷ್ಟರ ಮಟ್ಟಿಗೆ ಗದ್ಯಮಾಧ್ಯಮವನ್ನು ಮುಗಿಲೆತ್ತರಕ್ಕೆ ಕೊಂಡೊಯ್ದ ಕೀರ್ತಿ ಇವರಿಗೆ ಸಲ್ಲುತ್ತದೆ.

ಸಹಜವಾಗಿ ಛಂದೋನಿಯಮಗಳನ್ನೊಳಗೊಂಡ ಅಂದರೆ ಶಬ್ದಾಲಂಕಾರ ಅರ್ಥಾಲಂಕಾರ, ಸ್ವರ ಸಂಯೋಗ, ಲಯ ಈ ಮುಂತಾದ ಅಂಶಗಳನ್ನೊಳಗೊಂಡಿರುವುದು ಕಾವ್ಯ ಎಂದು ಅದರ ಲಕ್ಷಣವನ್ನು ಕುರಿತು ಹೇಳುವ ಸಂದರ್ಭದಲ್ಲಿ ನೋಡುತ್ತೇವೆ. ಹಾಗೆಯೇ ಕಾವ್ಯವು ಭಾವ ಪ್ರಧಾನವಾದುದು ಗದ್ಯವು ವಿಚಾರ ಪ್ರಧಾನವಾದುದು ಆಗಿರುತ್ತದೆ. ಆದರೆ ಬಾಣನ ಕಾದಂಬರಿಯಲ್ಲಿ ಪಾಂಡಿತ್ಯವೂ ಇದೆ. ಕವಿ ಕಲ್ಪನೆಯೂ ಇದೆ.

"ಬಾಣನದು ಪರಿವ್ರಾಜಕ ಪ್ರತಿಭೆ: ನಿರ್ದಿಷ್ಟ ಗೊತ್ತು ಗುರಿ, ಸಮಯದ ಇತಿಮಿತಿ ಇಲ್ಲದ, ನಿರ್ಬಂಧವಿಲ್ಲದ ಯತಿಯ ಗತಿ ಅವನದು ಎಂಬುದು ವಿಮರ್ಶಕರ ಅಭಿಪ್ರಾಯ. ಕಥೆಯನ್ನು ವೇಗವಾಗಿ ಮುಂದೊಯ್ಯದೆ ಕಂಡ ಕಂಡ ವಿವರಗಳನ್ನೆಲ್ಲ ಸೂಕ್ಷ್ಮವಾಗಿ ವಿಶ್ಲೇಷಿಸುತ್ತ ವಿವರಿಸುತ್ತ

ಸಾಗುವುದು ಅವನ ಕ್ರಮ ಅವನಿಗೆ ಕಥೆಗಿಂತಲೂ ಪದಬಂಧ ಪ್ರೌಢಿಮೆ ಮುಖ್ಯ. ಕಾದಂಬರಿ ಒಂದು ಚಿತ್ರಶಾಲೆ ಘಟನೆಯನ್ನು ವರ್ಣಿಸಿ ಕತೆ ಹೇಳುವುದು, ಸಾಮಾನ್ಯ ಕ್ರಮವಾದರೆ ಚಿತ್ರಗಳನ್ನು ಶೃಂಗರಿಸಿ ಕಥೆ ಹೇಳುವುದು ಬಾಣನ ಕ್ರಮ. ರವೀಂದ್ರನಾಥ ಠಾಗೋರರು 'ಅನುಚರರಿಂದೊಡಗೂಡಿದ ಚಕ್ರವರ್ತಿ' ಎಂದೂ 'ವರ್ಣನೆಗಳ ಚಿತ್ರಶಾಲೆ'ಯೆಂದೂ ಬಾಣನ ಭಾಷೆಯನ್ನು ಕರೆದಿದ್ದಾರೆ. ವರ್ಣನೆಗಳನ್ನು ರಾಶಿರಾಶಿ ಅಡಕುವುದು ಬಾಣನ ಕ್ರಮ ಕತೆಯು ಏನಿದ್ದರೂ ವರ್ಣನೆಗಳ ವಸ್ತ್ರವನ್ನು ತೂಗು ಹಾಕುವ ಗೂಟ. ಅದ್ಭುತ ಘಟನಾವಳಿಗಳು ಮೆಲ್ಲಗೆ ಸುರುಳಿ ಬಿಚ್ಚಿಕೊಳ್ಳುವಾಗ ಮಧ್ಯೆ ಮಧ್ಯೆ ಸೇರಿಕೊಳ್ಳುವ ವರ್ಣನಾ ಬಾಹುಳ್ಯದಿಂದ ಕತೆ ತೆವಳಿಕೊಂಡು ಸಾಗುತ್ತದೆ. ಸಮಸ್ತ ಪದಗಳಿಂದಲೂ ವಿಶೇಷಣ ಮಾಲಿಕೆಗಳಿಂದಲೂ ಶ್ಲೇಷ, ವಕ್ರೋಕ್ತಿಗಳಂತಹ ಪಂಡಿತಪ್ರಿಯ ಅಲಂಕಾರಗಳಿಂದಲೂ ಅನೇಕ ಸಾಲುಗಳವರೆಗೆ ಮುಂದುವರೆಯುವ ದೀರ್ಘ ವಾಕ್ಯಗಳಿಂದ ಸಂಕೀರ್ಣವಾದ ಕಾವ್ಯ ಕಾದಂಬರಿ, ಬಾಣನದು. ಸಮಾಸ ಭೂಯಿಷ್ಠವಾದ ಗೌಡಿ ಮತ್ತು ಸಮಾಸ ರಹಿತವಾದ ವೈದರ್ಭಿಯ ಮಧ್ಯದ ಪಾಂಚಾಲಿ(ಶೈಲಿ ರೀತಿ) ಎಂದು ವಿದ್ವಾಂಸರ ಅಭಿಪ್ರಾಯ. ಅದು ಶೃಂಗಾರ, ಕರುಣ, ಅದ್ಭುತ ರಸಗಳ ವಿಸ್ಮಯಲೋಕ.[೧೩]

ಬಾಣ ಕಾದಂಬರಿಯಲ್ಲಿ ಬಾಣನ ಪಾಂಡಿತ್ಯ, ಚಮತ್ಕಾರಗಳಲ್ಲದೆ ಮಾನವನ ಹೃದಯದ ವ್ಯಾಪಾರಗಳನ್ನು, ಪ್ರಕೃತಿಯ ಸೂಕ್ಷ್ಮ ಚಟುವಟಿಕೆಗಳನ್ನು ಮತ್ತು ಮಾನವ ಸಮಾಜದ ರೀತಿ-ನೀತಿಗಳನ್ನು ಒಂದಿಷ್ಟು ಬಿಡದೆ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾನೆ. ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವುದರಲ್ಲಿ ಬಾಣನು ಯಾರಿಗೂ ಕಡಿಮೆಯಿಲ್ಲ. ಈತನು ವರ್ಣಿಸದೇ ಬಿಟ್ಟಿರುವ ವಸ್ತು, ವಿಷಯವೇ ಇಲ್ಲ ಎನ್ನಬಹುದು. ಈ ಒಂದು ಕಾರಣದಿಂದಲೇ 'ಬಾಣೋಚ್ಛಿಷ್ಟಂ ಜಗತ್ ಸರ್ವಂ' ಎಂದು ಹೇಳಿರುವುದು. "ಬಾಣನ ಜಟಿಲ ಭಾಷೆಯ ಬಗೆಗೆ ಸಾಕಷ್ಟು ಟೀಕೆಗಳಿವೆ ಎಂಬುದೇನೋ ನಿಜ. ಅದು ಕ್ರೂರ ಮೃಗಗಳಿಂದ ಕೂಡಿದ ಕಗ್ಗಾಡು ಎಂಬ ಅಭಿಪ್ರಾಯವಿದೆ. ಆದರೆ ಕಾದಂಬರಿ ಒಂದು ಸುಂದರ ಉಪವನವಲ್ಲ ಎಂಬುದು ವಿದಿತವಾದರೂ ಅದು ಗೊಂಡಾರಣ್ಯವಲ್ಲ. ಕ್ರೂರಮೃಗಗಳು ಶ್ಲೇಷಾದಿ ಅಲಂಕಾರಗಳು ಕ್ಲಿಷ್ಟ ಉಲ್ಲೇಖಗಳು ಕಾಣಸಿಗಬಹುದು. ಆದರೆ ಅವು ದೂರದಿಂದಲೇ ಬೇಗ ಮರೆಯಾಗುತ್ತವೆಂದೂ ಮೈ-ಕೈ ಸ್ವಲ್ಪ ತರಚಿದರೂ ನೈಸರ್ಗಿಕ ವನವಿಹಾರದ ನೈಜ ಅನುಭವ ಸುಖ ಅದರಲ್ಲಿ ಇದ್ದೇ ಇದೆ ಎಂಬುದೂ ಅಷ್ಟೇ ಸತ್ಯ. ಕಾದಂಬರಿಯು ಪೂರ್ವಾರ್ಧಕ್ಕಿಂತಲೂ ಉತ್ತರಾರ್ಧದಲ್ಲಿ ವರ್ಣನೆಗಳನ್ನು ನಿಯಂತ್ರಿಸಿಕೊಂಡು ಕಥಾ ಘಟನೆಗಳಿಂದಲೂ ಪರಸ್ಪರ ಮಾತು ಸಂವಾದಗಳ ಮೂಲಕವೂ ವೇಗವಾಗಿ ಮುಂದೆ ಸಾಗುತ್ತದೆ.[೧೪]

ಈ ಬಾಣ ಕಾದಂಬರಿಯನ್ನು ಮೊದಲಿಗೆ ಕನ್ನಡ ಭಾಷೆಗೆ ಭಾಷಾಂತರಿಸಿದವರೆಂದರೆ ಒಂದನೇ ನಾಗವರ್ಮ. ಬಾಣನು ಗದ್ಯವು ಲೋಕೋಪಯೋಗಿ, ಪದ್ಯವು ಭಾವೋಪಯೋಗಿ ಎಂಬ ಹೇಳಿಕೆಯನ್ನು ನಿರಾಕರಿಸಿ ಗದ್ಯವು ಕೂಡ ಅತ್ಯುತ್ಕೃಷ್ಟ ಭಾವಾಭಿವ್ಯಕ್ತಿಗೆ ಪದ್ಯದಷ್ಟೇ ಶಕ್ತವಾಗಿದೆ ಎಂದು ಗದ್ಯದಲ್ಲಿಯೇ ಕಾದಂಬರಿಯನ್ನು ರಚಿಸಿದನು. ಆದರೆ ನಾಗವರ್ಮನು ಬಾಣನ ಕಾದಂಬರಿಯನ್ನು ಕನ್ನಡಕ್ಕೆ ತರುವಲ್ಲಿ ಈಗಾಗಲೇ ಪ್ರಚಲಿತದಲ್ಲಿದ್ದ ಗದ್ಯ ಪದ್ಯಗಳೆರಡೂ ಇರುವ ಚಂಪೂ ಶೈಲಿಯನ್ನು ಬಳಸಿಕೊಂಡನು. ಬಾಣನ ಕಾದಂಬರಿಯು ಸಂಸ್ಕೃತ ಭೂಯಿಷ್ಠ ರಚನೆ ಹಾಗೂ ಸುದೀರ್ಘ ನಾಲ್ಕು ಪುಟಗಳಷ್ಟಿರುವ ವಾಕ್ಯರಚನೆ ಹಾಗೂ ಶ್ಲೇಷೆ ಸಮಾಸ ಅಲಂಕಾರಗಳು ಯಥೇಚ್ಛವಾಗಿದ್ದು, "ಅಂಗಾಂಗಳಲ್ಲೆಲ್ಲ ಆಭರಣಗಳು ನಿಬಿಡವಾಗಿ ತುಂಬಿರುವ ಪ್ರತಿಮೆಯಂತೆ ಉಗುರು ಊರುವುದಕ್ಕೂ ಸ್ಥಳವಿಲ್ಲದ ಹಾಗೆ ಸಣ್ಣ ಕೆತ್ತನೆಯ ಕೆಲಸ ಮಾಡಿದ ಕಟ್ಟಡದಂತೆ"[೧೫] ಇದ್ದು ಸಹೃದಯರಿಗೆ ಓದಲು, ಜೀರ್ಣಿಸಿಕೊಳ್ಳಲು ಕಷ್ಟದಾಯಕವಾಗಿತ್ತು. ಆದರೆ ನಾಗವರ್ಮನು ಬಾಣನ ಮಾರ್ಗದಲ್ಲಿ ನಡೆದರೂ ಸಹ ಬಾಣನನ್ನು ಯಥಾವತ್ತಾಗಿ ಅನುಕರಣೆ ಮಾಡದೆ ಮೂಲ ಕೃತಿಗೆ ಧಕ್ಕೆ ಉಂಟಾಗದಂತೆ ನಿಯಮಿತ ಚೌಕಟ್ಟಿನೊಳಗೆ ಕನ್ನಡ ಭಾಷೆಗೆ ಭಾಷಾಂತರಿಸಿದನು.

ಚಂಪೂ ಶೈಲಿಯಲ್ಲಿ ನಿರ್ಮಿತವಾದ ಕರ್ನಾಟಕ ಕಾದಂಬರಿಯಲ್ಲಿ ಭಾವಾನುವಾದ, ಸಂಗ್ರಹಾನುವಾದ, ವಿಸ್ತಾರಾನುವಾದ ಮತ್ತು ನಿಕಟಾನುವಾದ ಹೀಗೆ ಮುಂತಾದ ಅನುವಾದದ ವೈವಿಧ್ಯಗಳನ್ನು ಕಾಣಬಹುದು. ಇದು ನಾಗವರ್ಮನ ಅನುವಾದದ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ರಂ.ಶ್ರೀ ಮುಗಳಿಯವರು ಹೇಳುವಂತೆ "ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯಷ್ಟು ಮೇಲಾದ ಪರಿವರ್ತನವು ಇನ್ನೊಂದಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ಇಷ್ಟಾದರೂ ಈ ಪರಿವರ್ತನವು ಬಾಣ ಕಾದಂಬರಿಯ ಅದ್ಭುತ ಪಾಂಡಿತ್ಯ, ಪ್ರತಿಭೆಗಳ ಅವಿಚ್ಛಿನ್ನ ಪ್ರವಾಹದ ದರ್ಶನವನ್ನು ಮಾಡಿಕೊಟ್ಟಿಲ್ಲ ಎಂದರೆ ತಪ್ಪಾಗಲಾರದು. ಆದರೆ ಯಾವ ಪರಿವರ್ತನವೂ ಇದನ್ನು ಮಾಡಿಕೊಡುವ ಕಷ್ಟವನ್ನು ನೆನೆದರೆ ಇದು ಅಪರಿಹಾರ್ಯವಾದ ವೈಗುಣ್ಯವಾಗುತ್ತದೆ. ಬಾಣನ ವಾಣಿ ಧೋ.. ಧೋ.. ಎಂದು ಸುರಿಯುವ ಮೋಡವಾದರೆ ನಾಗವರ್ಮನ ಕಲೆ ಆ ಮೋಡ ಸುರಿದ ಮಳೆ ನೀರನ್ನು ಕೆರೆಯಲ್ಲಿ ಹಿಡಿದು ಕಂದವೃತ್ತ ವಚನಗಳ ಮಡಿಗಳಲ್ಲಿ ಹರಿದು ಬಿಡುವ ತೋಟಿಗನ ಕೈವಾಡವಾಗಿದೆ. ಮೂಲದ ಸ್ವಚ್ಛಂದ ಗತಿ ಇಲ್ಲಿ ನಿಯತಗತಿಯಾಗಿದೆ. ಮೂಲದ ಬೆರಗು ಇಲ್ಲಿ ಕಡಿಮೆಯಾಗಿರಬಹುದು. ಆದರೆ ಮೂಲಕ್ಕೆ ಇನ್ನೊಂದು ಮಾಟವನ್ನು ಒದಗಿಸಿದ ಹೊಸ ಬೆರಗು ಮಾತ್ರ ತಲೆದೋರಿದೆ. ಅಂತೆಯೇ ನಾಗವರ್ಮನ ಕಾದಂಬರಿ ಅನುವಾದವಾಗಿಯೂ ಸ್ವತಂತ್ರ ಕೃತಿ ಸತ್ವವುಳ್ಳದ್ದಾಗಿ ಕನ್ನಡ ಸಾಹಿತ್ಯದ ಚಿರಂತನ ಗ್ರಂಥಗಳಲ್ಲಿ ಒಂದಾಗಿದೆ."[೧೬]

ನಾಗವರ್ಮನು, ಬಾಣನು ತನ್ನ ಕಾದಂಬರಿಯಲ್ಲಿ ಅತಿಲಂಬಿಸಿದ ವರ್ಣನಾ ಭಾಗಗಳನ್ನು ಬಿಟ್ಟು ರಸಭಾವಗಳನ್ನು ತುಂಬಿ ವಾಕ್ಯಗಳನ್ನು ಪದ್ಯದ ರೂಪಕ್ಕೆ ತಂದನು. ಬಾಣನ ಪಾಂಡಿತ್ಯಪೂರ್ಣ ರಸಾವೇಶ, ಮೋಡಿ ಮಾಡುವ ಭಾಷಾ ಶೈಲಿಗಳಿಂದ ಪ್ರಖ್ಯಾತವಾದ ಸಂಸ್ಕೃತ ಸಾಹಿತ್ಯವನ್ನು ಭಾಷಾಂತರಿಸಿದ ಕೀರ್ತಿ ನಾಗವರ್ಮನಿಗೆ ಸಲ್ಲುತ್ತದೆ. ಹಾಗೂ ಈ ಕೃತಿಯಲ್ಲಿ ನಾಗವರ್ಮನು ಸಂಸ್ಕೃತ ಸಮಾಸಗಳನ್ನು ಹೆಚ್ಚಾಗಿ ಬಳಸಿರುವುದು ಕಂಡುಬರುತ್ತದೆ.

ಬಾಣನ ಸಂಸ್ಕೃತದ ಕಾದಂಬರಿಯಾಗಲಿ, ನಾಗವರ್ಮನ ಚಂಪೂ ಶೈಲಿಯ ಕರ್ನಾಟಕ ಕಾದಂಬರಿಗಳು ಅರಮನೆ, ಗುರುಮನೆಗಳಿಗಷ್ಟೇ ಸೀಮಿತವಾಗಿ ಪಂಡಿತವರ್ಗದವರಿಗೆ ಮಾತ್ರ ಅರ್ಥವಾಗುತ್ತಿತ್ತು. ಜನಸಾಮಾನ್ಯರಿಗೆ ತಿಳಿಯುತ್ತಿರಲಿಲ್ಲ. ಹಾಗಾಗಿ ಸಂಸ್ಕೃತ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿ ಆ ಮೂಲಕ ಜನರಿಗೆ ಸಾಹಿತ್ಯ ಸಂಸ್ಕೃತಿಯ ಬಗೆಗೆ ಅರಿವು ಮೂಡಿಸಲು ೧೯ ಮತ್ತು ೨೦ನೆಯ ಶತಮಾನದ ಲೇಖಕರು ಭಾಷಾಂತರ ಕಾರ್ಯದಲ್ಲಿ ತೊಡಗಿದರು. ೧೮೭೦ರಲ್ಲಿ ಬಾಣನ ಸಂಸ್ಕೃತ ಕಾದಂಬರಿಯು ಕನ್ನಡ ಭಾಷೆಗೆ ಗಂಗಾಧರ ಮಡಿವಾಳೇಶ್ವರ ತುರಮರಿಯವರಿಂದ ಅನುವಾದಿಸಲ್ಪಟ್ಟಿತು.

ತುರಮರಿಯವರು ತಮ್ಮ ಗುರುಗಳಾದ ಮಡಿವಾಳೇಶ್ವರರಲ್ಲಿ ಸಂಸ್ಕೃತ ಭಾಷೆಯನ್ನು ಕಲಿತು, ಬಾಣಭಟ್ಟನ ಸಂಸ್ಕೃತದಲ್ಲಿರುವ ಕಾದಂಬರಿಯನ್ನು ಓದಿ ಆಸ್ವಾದಿಸಿ, ಆ ಸವಿಯನ್ನು ಕನ್ನಡದ ಜನತೆಯು ಸವಿಯುವಂತೆ ಮಾಡಿದರು. ಈ ಕನ್ನಡ ಬಾಣಕಾದಂಬರಿಯನ್ನು ತಿಳಿಯದ ಜನರಿಲ್ಲ. ಸಂಸ್ಕೃತ ಕಾದಂಬರಿಯನ್ನು ಕನ್ನಡದ ದೇಸೀ ಭಾಷೆಯಲ್ಲಿ ಭಾಷಾಂತರಿಸಿದ್ದು ಮಹತ್ವದ ವಿಷಯವಾಗಿದೆ. ಗಂಗಾಧರರಿಗೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ಕೃತಿ ಇದಾಗಿದೆ.

ಎಂ.ಎಂ.ಕಲಬುರ್ಗಿಯವರು ತುರಮರಿಯವರ ಕನ್ನಡ ಬಾಣ ಕಾದಂಬರಿಯನ್ನು ಕುರಿತು ಈ ರೀತಿ ಹೇಳುತ್ತಾರೆ. "ಬಾಣಕಾದಂಬರಿ, ಸಂಸ್ಕೃತ ಗದ್ಯ ಸಾಹಿತ್ಯದ ಮುಡಿಯ ಮಾಣಿಕ್ಯ. ಇದು ಒಮ್ಮೆ ನಾಗವರ್ಮನ ಮೂಲಕ ಹಳಗನ್ನಡದಲ್ಲಿ ಇನ್ನೊಮ್ಮೆ ತುರಮರಿಯವರ ಮೂಲಕ ಹೊಸಗನ್ನಡದಲ್ಲಿ ಅವತರಿಸಿತು. ಈ ಮಧ್ಯದ ಅಂತರ ಸಾವಿರ ವರ್ಷ. ನಾಗವರ್ಮನ ಕಾದಂಬರಿ ತನ್ನ ಸಮಯದ ಸಹೃದಯರ ಮೇಲೆ ಬೀರಿದ ಪರಿಣಾಮ ನಮಗೆ ಪರಿಚಿತ, ತುರಮರಿಯವರ ಕಾದಂಬರಿ ಮಾತ್ರ ತನ್ನ ಸಮಯದ ಸಹೃದಯರ ಮೇಲೆ ಬೀರಿದ ಪರಿಣಾಮ ಅಪರಿಮಿತ ಗದ್ಯಗುಣ, ಕಥನ ಕಲೆಗಳ ದೃಷ್ಟಿಯಿಂದ ಹಳಗನ್ನಡದ ವಡ್ಡಾರಾಧನೆಯ ಸೃಷ್ಟಿಯಷ್ಟೇ ಮಹತ್ವಪೂರ್ಣವೆನಿಸಿದೆ. ಹೊಸಗನ್ನಡದಲ್ಲಿ ತುರಮರಿ ಕಾದಂಬರಿಯ ಸೃಷ್ಟಿ.[೧೭]

ಈ ಕಾದಂಬರಿಯು ವಡ್ಡಾರಾಧನೆ ಕೃತಿಯಂತೆ ಜನ್ಮಾಂತರದ ಕಥೆಯನ್ನು ಹೊಂದಿದ್ದು ಮನೋಹರವಾಗಿದೆ. ಈ ಕಾದಂಬರಿಯಲ್ಲಿ ಚಿತ್ರಿತವಾದ ದಿವ್ಯ ಪ್ರೇಮ ಮೊದಲು ಬರಿಯ ಕಾಮವಾಗಿದ್ದದ್ದು ಅಗಲಿಕೆಯ ನೋವಿನಲ್ಲಿ ಬೆಂದು ಜನ್ಮ ಜನ್ಮಾಂತರಗಳನ್ನು ದಾಟಿ ಬಂದು ಕೊನೆಯಲ್ಲಿ ಸಂಸ್ಕಾರ ಹೊಂದಿದ ಪರಿಶುದ್ಧ ಪ್ರೇಮವಾಗುತ್ತದೆ. ಕುವೆಂಪು ಅವರು ಈ ಕೃತಿಯನ್ನು ಕುರಿತು ಹೀಗೆ ಹೇಳುತ್ತಾರೆ. “ಕಾದಂಬರಿ, ಪ್ರೇಮದ ವಿಜಯ ಕಥೆ, ವೈರಾಗ್ಯವು ಶೃಂಗಾರಕ್ಕೆ ಶರಣಾದ ಕಥೆ. ದೈಹಿಕ ಕಾಮವು ಜನ್ಮ ಜನ್ಮಾಂತರಗಳ ಕ್ಲೇಷ, ಕಷ್ಟ ವಿರಹಗಳ ಉಗ್ರತಪಸ್ಸಿನಿಂದ ಕಾಳಿಕೆಯನ್ನು ಕಳೆದುಕೊಂಡು ಅಚ್ಚ ಹೊನ್ನಾಗಿ ದೈವಿಕ ಪ್ರೇಮದಲ್ಲಿ ಸಾರ್ಥಕತೆಯನ್ನು ಸಂಪಾದಿಸಿದ ಪುಣ್ಯಕತೆ. ಆ ಕತೆಯು ಅಗ್ನಿಜ್ವಾಲೆಯಲ್ಲಿ ಬೇರೊಗ್ಗಿಂಡು ಚಂದ್ರಜ್ಯೋತ್ಸ್ನೆಯಾಗಿ ಹಣ್ಣೊಗ್ಗಿಂಡಿದೆ. ಅಲ್ಲಿಯ ಶೃಂಗಾರವೂ ತಪೋಮಯವಾಗಿದೆ. ತಪಸ್ಸೂ ಶೃಂಗಾರ ಪೂರ್ಣವಾಗಿದೆ.[೧೮]

ಇಂತಹ ಕೃತಿಯನ್ನು ಗಂಗಾಧರರು ನಾಡಿನ ಜನತೆಯ ಸಲುವಾಗಿ ಅಚ್ಚಗನ್ನಡ ದೇಸೀ ಶೈಲಿಯಲ್ಲಿ ಕನ್ನಡಿಸಿದ್ದಾರೆ. ಅಲ್ಲದೆ ಇದು ಮೂಲಗ್ರಂಥದ ಚತುರ್ಥಾಂಶವೆಂದೂ ಇದರಲ್ಲಿ ರಾಜವೈಭವದ ವರ್ಣನೆ, ವಿಂದ್ಯಾಟವಿಯ ವರ್ಣನೆ, ಪ್ರಕೃತಿಯ ವರ್ಣನೆ, ಪಂಚವಟಿಯಲ್ಲಿ ಸೀತಾ ರಾಮ–ಲಕ್ಷ್ಮಣರು ಇದ್ದಾಗಿನ ವೃತ್ತಾಂತ, ಪಂಪಾ ಸರೋವರದ ಹತ್ತಿರ ಶಾಲ್ಮಲೀ ವೃಕ್ಷದ ವರ್ಣನೆ, ಬೇಟೆಯ ವರ್ಣನೆ, ಆಶ್ರಮದ ವರ್ಣನೆ, ಅಚ್ಛೋದ ಸರೋವರದ ವರ್ಣನೆ, ಗಂಧರ್ವ ಕನ್ನಿಕೆ ಮಹಾಶ್ವೇತೆಯ ಕಥೆ ಮುಂತಾದವುಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಗಂಗಾಧರರ ಈ ಕೃತಿಯನ್ನು ಪದೇ ಪದೇ ಓದಬೇಕೆನಿಸುವ ಅವರ ವರ್ಣನಾ ಶೈಲಿ, ಕಣ್ಣಿಗೆ ಕಟ್ಟುವಂತೆ ಕಥೆಯನ್ನು ಹೇಳುವ ರೀತಿಯನ್ನು ಈ ಒಂದು ದೃಷ್ಟಾಂತದ ಮೂಲಕ ತಿಳಿಯಬಹುದು. ಅಗಸ್ತ್ಯಾಶ್ರಮದ ಹತ್ತಿರದಲ್ಲಿದ್ದ ಪಂಪಾ ಸರೋವರದ ದಡದಲ್ಲಿ ವಿಶಾಲವಾಗಿ ಹಬ್ಬಿನಿಂತಿರುವ ಶಾಲ್ಮಲೀ ವೃಕ್ಷದ ವರ್ಣನೆಯಾಗಿದೆ.

“ಆ ಸರೋವರದ ಪಡುವಣ ಪ್ರದೇಶದಲ್ಲಿ, ರಘುವೀರನ ಕೂರಂಬುಗಳ ಹೊಡೆತಕ್ಕೆ ಕಡೆವಡೆದ ಸಪ್ತತಾಳ ವೃಕ್ಷಗಳ ನೆರೆಯಲ್ಲಿಯೇ ಒಂದು ಬಹುಕಾಲದ ದೊಡ್ಡ ಶಾಲ್ಮಲೀ ವೃಕ್ಷ(ಬೂರಲಮರ)ವಿದೆ. ಆ ಗಿಡದ ಬುಡಕ್ಕೆ ಮುದಿ ಹೆಬ್ಬಾವು ಸುತ್ತುಹಾಕಿಕೊಂಡಿರುವುದರಿಂದ ಕಟ್ಟೀ ಕಟ್ಟಿದಂತೆ ಕಾಣುತ್ತಿರುವುದು. ಆ ಮರದ ಟೊಂಗೆಗಳು ಬಹು ವಿಸ್ತಾರವಾಗಿ ಗಗನ ಮಂಡಲದಲ್ಲೆಲ್ಲ ಪಸರಿಸಿರುವುದರಿಂದ ಅದು ತನ್ನ ಮಾರು ಹಾಕಿ ದಿಕ್ಕುಗಳನ್ನು ಅಳೆಯುತ್ತದೆಯೋ ಏನೋ ಅನ್ನುವಂತೆ ತೋರುತ್ತಿರುವುದು. ಅದರ ಟೊಂಗೆಗಳ ಮೇಲೆ ಲೆಕ್ಕವಿಲ್ಲದಷ್ಟು ಹಾವಿನ

ಪರೆಗಳು ಜೋತಾಡುತ್ತಿರುವುದರಿಂದ ಅದು ಸೂಕ್ಷ್ಮವಾದ ಬಿಳಿ ಶೆಲ್ಲೆಯನ್ನು ಮೈಮೇಲೆ ಹೊತ್ತುಕೊಂಡಂತೆ ಒಪ್ಪುತ್ತಿರುವುದು. ಆ ಗಿಡದ ಬುಡದಿಂದ ತುದಿತನಕ ಸಾವಿರಾರು ಬಳ್ಳಿಗಳು ಹಬ್ಬಿರುವುದರಿಂದ ಮುಪ್ಪಿನ ಕಾಲಕ್ಕೆ ಅದರ ಮೈಮೇಲೆ ನರಗಳು ಎದ್ದಂತೆ ಕಾಣುತ್ತಿರುವವು. ಅದರ ತುದಿಯ ಮೇಲಿನ ಅರಳೆಯು ನರೆಗೂದಲುಗಳಂತೆ ಒಪ್ಪುವುದು. ಆ ಮರದ ಹೊದರುಗಳಲ್ಲಿಯೂ ಹೊದೆಗಳಲ್ಲಿಯೂ ತುದಿಯಲ್ಲಿಯೂ ನಾಡು ನಾಡುಗಳಿಂದ ಬಂದ ಸಾವಿರಾರು ಗಿಳಿಗಳು ಗೂಡು ಕಟ್ಟಿಕೊಂಡಿರುತ್ತಿದ್ದವು. ಬಹಳ ಹಳೆಯದಾದುದರಿಂದ ಆ ಮರದ ಎಲೆಗಳೆಲ್ಲ ಉದುರಿ ಹೋದರೂ, ಆ ಗಿಳಿಗಳೇ ಅದರ ದಟ್ಟವಾದ ಹಸುರೆಲೆಗಳಂತೆ ಕಾಣಿಸುತ್ತಿರುವವು.[೧೯]

ಗಂಗಾಧರರು ರಸಾಸ್ವಾದನೆಯ ದೃಷ್ಟಿಯಿಂದ ಮತ್ತು ಸಾಹಿತ್ಯದ ದೃಷ್ಟಿಯಿಂದ ಸ್ವಂತ ರಚನೆಯನ್ನುವಷ್ಟರ ಮಟ್ಟಿಗೆ ಈ ಕೃತಿಯನ್ನು ಅನುವಾದಿಸಿದ್ದಾರೆ. ಇವರು ಕಾದಂಬರಿಯ ಕಥಾ ನಿರೂಪಣೆಯಲ್ಲಿ ಭಾಷೆಯನ್ನು ತಮ್ಮ ಸಮಕಾಲೀನರಿಗಿಂತ ಭಿನ್ನವಾಗಿ ಬಳಸಿ ಆಧುನಿಕ ಗದ್ಯದ ಹೊಳಪನ್ನು ನೀಡಿದ್ದಾರೆ. ಹಾಗಾಗಿ ಇವರನ್ನು ಹೊಸಗನ್ನಡ ಗದ್ಯ ಶಿಲ್ಪಿ ಎಂದಿದ್ದಾರೆ. ಇದೇ ಸಂದರ್ಭದಲ್ಲಿ ಕನ್ನಡ ವಚನ ಕಾದಂಬರಿ ಎಂಬ ಹೆಸರಿನಲ್ಲಿ ಈ ಕಾದಂಬರಿ ಕೃತಿಯು ೧೯೨೩ರಲ್ಲಿ ಎಂ.ಎ. ರಾಮಾನುಜಯ್ಯಂಗಾರರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದ್ದು ಇದರಲ್ಲಿ ಚಂದ್ರಾಪೀಡನು ಕಾದಂಬರಿ ಮಹಾಶ್ವೇತೆಯರ ಅನುಮತಿ ಪಡೆದು ರಾಜಧಾನಿಗೆ ಹಿಂದಿರುಗುವವರೆಗೆ ಕಥಾವಸ್ತು ನಿರೂಪಿತವಾಗಿದೆ. ಹಾಗೂ ಗ.ವೈ.ಕೃಷ್ಣಾಚಾರ್ಯ ಅವರಿಂದ ಕೂಡ ಕಾದಂಬರಿಯು ಅನುವಾದಗೊಂಡಿದ್ದು ಶ್ಲೇಷ, ವರ್ಣನಾಂಶಗಳನ್ನು ಕೈಬಿಟ್ಟು ಈ ಎರಡು ಕೃತಿಗಳು 'ಸಮುದ್ರ ಸದೃಶ್ಯವಾದ ಒಂದು ಸರೋವರವನ್ನು ಕಂಡೆನು' ಎಂದು ಒಂದೇ ಸಾಲಿನಲ್ಲಿಯೇ ಮುಕ್ತಾಯಗೊಳಿಸಿದ್ದನ್ನು ಕಾಣಬಹುದು.

ಆದರೆ ಗಂಗಾಧರರು ಈ ಕಥಾ ಭಾಗವನ್ನು "ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಿಕೊಳ್ಳುವುದಕ್ಕೆ ಮಾಡಿಟ್ಟ ಕನ್ನಡಿಯೋ, ಭೂದೇವಿಯು ಕ್ರೀಡಿಸುವುದಕ್ಕೆ ನಿರ್ಮಾಣ ಮಾಡಿದ ಸ್ಫಟಿಕದ ನೆಲಮನೆಯೋ, ಮಹಾಸಾಗರಗಳ ಉಗಮ ಸ್ಥಾನವೋ, ಉದಕದ ಅವತಾರವನ್ನು ತಾಳಿ ನೆಲಕ್ಕಿಳಿದ ಆಕಾಶವೋ, ಕರಗಿ ಮಡುಗಟ್ಟಿದ ಚಳಿಬೆಟ್ಟವೋ ಒಬ್ಬುಳಿಗೂಡಿ ಸರೋವರದ ರೂಪ ತಾಳಿದ ತ್ರಿಭುವದ ಪುಣ್ಯರಾಶಿಯೋ ಏನೋ ಅನ್ನುವ ಹಾಗೆ ತುಂಬಿ ತುಳಕುವಂಥ ಉತ್ತೀರ್ಣವಾದದ್ದೊಂದು ನೆಲೆಯಿಲ್ಲದ ತಂಗೊಳವು ಅತಿರಮಣೀಯವಾಗಿ ಕಂಗೊಳಿಸಿತು.[೨೦] ಎಂದು ಮೂಲ ಕೃತಿಯ ಕಥಾವಸ್ತುವಿಗೆ ಧಕ್ಕೆ ಬಾರದಂತೆ ತುಂಬ ಸೊಗಸಾಗಿ ವರ್ಣಿಸಿರುವುದನ್ನು ಕಾಣಬಹುದು. ಅಲ್ಲದೆ ಇವರು ಬೆಳಗಾವಿ ಭಾಗದ ಭಾಷೆಯನ್ನು ಈ ಕಾದಂಬರಿಯಲ್ಲಿ ಅಲ್ಲಲ್ಲಿ

ಬಳಸಿರುವುದು ವಿಶೇಷದ ಸಂಗತಿಯಾಗಿದೆ. ದೇಶೀ ಶಬ್ದಗಳ ಬಳಕೆ ಮಾಡಿ ಸೃಜನಶೀಲತೆಯನ್ನು ಮೆರೆದಿದ್ದಾರೆ.

೨.೧. ಭಾಷಿಕ ಅನನ್ಯತೆ

ಗಂಗಾಧರರು ಬಾಣನ ಸಂಸ್ಕೃತ ಕಾದಂಬರಿಯನ್ನು ಕನ್ನಡಕ್ಕೆ ಭಾಷಾಂತರಿಸಿದ್ದು ಇದು ಕನ್ನಡದಲ್ಲಿಯೇ ರಚಿತವಾದ ಕೃತಿ ಎನ್ನುವಷ್ಟು ಪ್ರಸಿದ್ಧವಾಗಿದೆ. ಅಂತಹ ಭಾಷಾ ಶೈಲಿ ಮತ್ತು ವರ್ಣನಾ ಶೈಲಿಯನ್ನು ಹೊಂದಿದೆ. ಬಾಣನ ಸಂಸ್ಕೃತ ಭೂಯಿಷ್ಠವಾದ ಸಮಾಸ ಶ್ಲೇಷಗಳಿಂದ ಕೂಡಿದ ಉದ್ದುದ್ದನೆಯ ವಾಕ್ಯಗಳನ್ನು ಕತ್ತರಿಸಿ ಚಿಕ್ಕದಾಗಿ, ಚೊಕ್ಕವಾಗಿ ಕನ್ನಡದ ದೇಶೀ ಶೈಲಿಯಲ್ಲಿ ರಚಿಸಿದವರು ಗಂಗಾಧರರು. ಸಂಸ್ಕೃತ ಪದಗಳನ್ನು ಯಥಾವತ್ತಾಗಿ ಬಳಸದೆ ಕನ್ನಡದಲ್ಲಿ ಬಳಕೆಯಲ್ಲಿರುವ ಪದಗಳನ್ನು ಬಳಸಿರುವುದನ್ನು ಈ ಕೃತಿಯಲ್ಲಿ ಕಾಣಬಹುದು. 'ಅಂಬಸೋಲು', 'ರಾಜಗಿರಕಾಳು', 'ಹೆಡಕು', 'ಶೆಲ್ಲೆ', 'ವಕವಕಬಾಯ್ಬಿಡು', 'ಜೀವವು ನೆತ್ತಿಯಿಂದ ಹೋಯಿತು'. 'ಅರದಾಳದ ಪುಡಿ', 'ನಾಡಾಡಿಗರು', 'ಮಧುರ ಮಾತಿನ ಮಾನಿನಿ', 'ಹಣಿಗೆ', 'ಹಿಮ್ಮಡತನಕ', 'ಬೊಟ್ಟು', 'ಎಳಕೊಳ್ಳುವಲ್ಲಿ' 'ಲೋಡು ತಿರುವಿ', 'ಕುಸ್ತಿ ಹಿಡಿದು ಜೋರನೆ ಬೆವತನು', 'ಪೈಜಣ', 'ಗಿಣಿ', 'ತೊತ್ತು', 'ಹಚ್ಚಗೆ', 'ಗಿಡದ ಬುಡ', 'ಟೊಂಗೆಗಳ ಮೇಲೆ ಲೆಕ್ಕವಿಲ್ಲದಷ್ಟು ಹಾವಿನ ಪರೆಗಳು ಜೋತಾಡುತ್ತಿರುವುದರಿಂದ' 'ಪಕ್ಕ ಬಲಿಯದೆ ಗುಟುಕು ಕೊಟ್ಟು, ಸ್ತ್ರೀಶೋಕವನ್ನು ತಡಕೊಂಡು', 'ಚಂಚುಪುಟವು', 'ಮೊಂಡವಾಗಿತ್ತು'. 'ಗಡಿದು ಹಾಕಿದವು'. 'ನಡುಗು ಹುಟ್ಟಿ' 'ಅಂಜಿ' 'ತಂದೆಯ ಮಗ್ಗುಲೊಳಗೆ ಹೊಕ್ಕು ಅಡಗಿಕೊಂಡೆನು' 'ಎರಳೆಯ ಬಾಯೊಳಗಿನ ಬುರುಗಷ್ಟು ಬಿದ್ದಿದೆ'. 'ತಂದೆಯ ಪಕ್ಕದೊಳಗಿಂದ ಹೊರಬಿದ್ದು ತಲೆ ಎತ್ತರಿಸಿ ಸಪ್ಪಳ ಕೇಳಿ ಬಂದತ್ತ ಮೆಲ್ಲಗೆ ಗೂಡಿನೊಳಗಿಂದಲೇ ಇಣಿಕಿ ನೋಡಹತ್ತಿದೆನು'. 'ಘಟ್ಟಿ', 'ಗಡುತರ ಅವನ ಸುತ್ತುಮುತ್ತು ಬೇಟೆಯ ನಾಯಿಗಳು ತೇಕುತ್ತ ನಾಲಿಗೆ ತೆರಕೊಂಡು ಬೆನ್ನುಹತ್ತಿ ಬರುತ್ತಿದ್ದವು'. 'ಹಿಂದಣಿಂದ ದಣುವಾರಿಸಿಕೊಂಡು' 'ಗುಬುಟೆ', 'ಕಣ್ಣೆತ್ತಿ ಸಹ ನೋಡಲೊಲ್ಲಳು'. 'ಅತ್ತೆಯ ಹಿಂದೆ ಮರ್ಯಾದೆಯಿಂದ ಹುದುಗಿಕೊಂಡು ಕುಳಿತಳು'. ಇಂತಹ ಅನೇಕ ಕನ್ನಡದ ದೇಸೀ ಶಬ್ದಗಳ ವಾಕ್ಯಗಳನ್ನು ಪಡೆದು ನುಡಿಗಳನ್ನು, ನುಡಿಗಟ್ಟುಗಳನ್ನು, ಗಾದೆಗಳನ್ನು ಸೇರಿಸುವುದರ ಮೂಲಕ ಸಂಸ್ಕೃತದ ಬಾಣನ ಕಾದಂಬರಿಗೆ ಕನ್ನಡ ಜೀವಕಳೆಯನ್ನು ತುಂಬಿದ್ದಾರೆ.

೨.೨. ದೇಸೀಯ ಅನನ್ಯತೆ

"ಬಾಣನ ಬೆಡಗು ಬಿನ್ನಾಣಗಳನ್ನು ಕನ್ನಡಕ್ಕೆ ತಂದಿಳಿಸಿದ ನಮ್ಮ ತುರಮರಿಯವರ ಬೆಡಗು ಬಿನ್ನಾಣಗಳೂ ಅಷ್ಟೇ ಮೌಲಿಕ. ಒಂದು ಪ್ರತಿಭೆಯನ್ನು ಇನ್ನೊಂದು ಪ್ರತಿಭೆಯೇ

ಅರ್ಥಮಾಡಿಕೊಳ್ಳಬಲ್ಲದು ಬಾಣ ಕಾದಂಬರಿಯನ್ನು ಕನ್ನಡಿಸಿದ ತುರಮರಿಯವರು ಇದೊಂದು ಸ್ವತಂತ್ರ ಕನ್ನಡ ಸರಸ ಕಾದಂಬರಿ ಎನ್ನುವಂತೆ ಬೆಡಗಿನ ಭಾಷೆಯನ್ನು ಮೆರೆದಿದ್ದಾರೆ. ಅವರ ಶೈಲಿ ದೇಸೀ ಭಾಷೆಯ ಸೊಗಸನ್ನು ಸೂರೆ ಮಾಡಿದೆ.[೨೧]

ಬಾಣನ ಸಂಸ್ಕೃತ ಕಾದಂಬರಿಯು ಕನ್ನಡಿಗರಿಗೆ ಪ್ರಿಯವಾದುದು ತುರುಮರಿಯವರು ಅನುವಾದಿಸಿದ ಕೃತಿಯಿಂದ ಹೊರತು ಬಾಣನ ಸಂಸ್ಕೃತ ಕೃತಿಯಿಂದಲ್ಲ ತುರುಮರಿಯವರ ಗದ್ಯದ ಗುಣ, ಕಥನ ಕಲೆಯ ದೃಷ್ಟಿ ಮತ್ತು ಮೂಲ ಕಥೆಗೆ ಧಕ್ಕೆಯಾಗದಂತೆ ಅನುವಾದ ಮಾಡಿದ ಪರಿ ವಿಶೇಷವಾಗಿ ಸರಳ ಸುಂದರ ನಿರೂಪಣೆ, ಕಥೆಗೆ ಗೆಲುವುಂಟು ಮಾಡಬಹುದಾದ ನೀತಿ ವಾಕ್ಯ ಪುಂಜಗಳು, ಗಾದೆಗಳು ಸೂಳ್ನುಡಿಗಳು ತನ್ನ ಅನುಭವಕ್ಕೆ ಬಂದ ಉಪಮೆಗಳು ಇವೇ ಮೊದಲಾದ ಅಂಶಗಳು ತುರುಮರಿ ಅವರನ್ನು ಅನುವಾದ ಸಾಹಿತ್ಯದಲ್ಲಿ ಮೇಲ್ತರಗತಿಯಲ್ಲಿ ನಿಲ್ಲಿಸಿದವು. ಉದ್ದನೆಯ ಸಂಸ್ಕೃತ ಸಮಾಸಗಳನ್ನು, ವಾಕ್ಯ ರಚನೆಗಳನ್ನು ಕನ್ನಡ ಜಾಯಮಾನಕ್ಕೆ ಅಳವಡಿಸಿದ ತುರುಮರಿ ಅವರ ಪ್ರಯತ್ನ ಗದ್ಯ ಶೈಲಿಯ ಸಾಹಿತ್ಯ ಪ್ರಕಾರವೊಂದನ್ನು ಕನ್ನಡದಲ್ಲಿ ಹುಟ್ಟು ಹಾಕಿತೆಂದು ಹೇಳಬಹುದು. ತುರಮರಿಯವರ ಗದ್ಯ ಗ್ರಾಮ್ಯವೆನ್ನುವಷ್ಟು ದೇಶೀಯತೆಯಿಂದ ತುಂಬಿ ನಳನಳಿಸುತ್ತಿರುವುದನ್ನು ಕಾಣಬಹುದು.

ಬಸಪ್ಪಶಾಸ್ತ್ರಿಗಳಂಥ ಶ್ರೇಷ್ಠ ಅನುವಾದಕರ ಶಾಕುಂತಲ ನಾಟಕವನ್ನು ಗಮನಿಸಿದರೆ ಅಲ್ಲಿಯ ಗದ್ಯ ಪಂಡಿತರಿಗೆ ಪ್ರಿಯವಾಗಿತ್ತು. ಶ್ರೀ ಸಾಮಾನ್ಯರಿಗೆ ಅರ್ಥವಾಗದ ರೀತಿಯಲ್ಲಿತ್ತು. ತುರಮರಿ ಅವರ ಗದ್ಯ ದೇಶೀಯತೆಯಿಂದ ಕೂಡಿರುವುದಕ್ಕೆ ಈ ಕೆಳಗಿನ ಅನುವಾದದ ಭಾಗವವನ್ನು ನೋಡಬಹುದು.

"............ ಆ ರಕ್ಕಸನಂಥಬೇಡ ಬಂದದ್ದನ್ನು ಕಂಡು ನಮ್ಮ ತಂದೆಯು ಸಾಯುವ ಹೊತ್ತು ಬಂತೆಂದು ಹೌಹಾರಿ ಇನ್ನೇನು ಮಾಡಲೆಂದು ಕಣ್ಣುತುಂಬಿ ನೀರು ತಂದು ಗದಗದನೆ ನಡುಗಿದೆನು. ಕಣ್ಣಿಗೆ ಕತ್ತಲೆಗವಿದು ಕುತ್ತಿಗೆ ನರಲುಬ್ಬಿ, ಬಾಯಿಂದ ಮಾತುಗಳೇ ಬರವೊಲ್ಲವು. ನನ್ನ ನೆನಪಾದುದರಿಂದಲೂ ಅವನ ದುಃಖಕ್ಕೆ ಆಳವಿಲ್ಲದ ಹಾಗಾಯಿತು. ನನ್ನನ್ನು ತನ್ನ ಎದೆಗೆ ಅವುಚಿಕೊಂಡು, ಇನ್ನು ಯತ್ನ ಮೀರಿತೆಂದು ಪಕ್ಕದೊಳಗಿಟ್ಟುಕೊಂಡು ಆಸೆ ತೊರೆದು ಸುಮ್ಮನೆ ಕುಳಿತುಕೊಂಡನು. ಅಷ್ಟರೊಳಗೆ ಆ ಕಿರಾತನು ನಮ್ಮ ಗೂಡಿನ ಹತ್ತಿರ ಬಂದು ಕರೆ ಹಾವಿನ ಹೆಡೆಯನ್ನು ಹೋಲುವಂಥ ಬಿಲ್ಲು ಹಿಡಿದು ದಡ್ಡುಬಿದ್ದಂಥ ತನ್ನ ಎಡಗೈಯನ್ನು ನಮ್ಮ ಗೂಡಿನೊಳಗೆ ಹಾಕಿದನು. ಆಗ ನಮ್ಮ ತಂದೆಯು ಸಂಕಟದಿಂದ ಅವನ ಕೈಕಚ್ಚಿ ಫಡಫಡನೆ ಪಕ್ಕ ಜಾಡಿಸಿ ಒಳಹೊಕ್ಕು ಒದರಿದರೂ ಆ ಚಾಂಡಾಲನು ಆ ಮುದಿಗಿಳಿಯನ್ನು ಗೂಡಿನಿಂದ ಹೊರೆಗೆ ಹಿಡಿದು ಗೋಣು ಮುರಿದು ನೆಲಕ್ಕೆ ಒಗೆದನು (ನಾನು ಮತ್ತೊಂದು

ಮರದ ಕೆಳಗೆ ಹಾರಿಬಿದ್ದೆನು) ಸತ್ತವರ ಮಕ್ಕಳು ಇದ್ದವರ ಕೈಯೊಳಗೆ ಎಂಬ ಗಾದೆಯಂತೆ ಆ ಮರವು ನನಗೆ ಆಶ್ರಯ ಕೊಟ್ಟಿತು... (ನನಗೆ ನೀರಡಕೆಯಾಯಿತು)... ಮೆಲ್ಲಗೆ ಹೊರಟೆನು. ಆಗ ನನ್ನ ಪಕ್ಕ ಬಲಿತಿದ್ದಿಲ್ಲ. ಗೋಣು ನಿಲ್ಲುತ್ತಿದ್ದಿಲ್ಲ. ನಡೆಯಲಿಕ್ಕೆ ಕಾಲೊಳಗೆ ಕಸುವು ಇದ್ದಿಲ್ಲ. ಎಷ್ಟು ಕಷ್ಟವಾದರೂ ಬದುಕಬೇಕೆಂಬ ಆಸೆ ಬಿಡುವುದಿಲ್ಲ. ಸ್ವಾಮಿ ಜೀವಕ್ಕಿಂತ ಪ್ರಿಯವಾದದ್ದು ಜಗದೊಳಗೆ ಯಾವುದು ಇಲ್ಲ ನೋಡಿರಿ! ಅಂಥ ನನ್ನ ದಯಾಳು ತಂದೆ ತೀರಿದನೆಂಬ ಹಂಬಲವಿಲ್ಲದೆ, ಆ ಹೆಣವನ್ನು ಅಲ್ಲಿಯೇ ಬಿಟ್ಟು ನನ್ನ ಜೀವ ಉಳಿಸಿಕೊಳ್ಳುವುದನ್ನು ನಾನು ನೋಡಿದೆನು. ಅದರಿಂದ ನನ್ನಂಥ ನಿರ್ದಯನು, ನಿಷ್ಠೂರನು, ಕೃತಘ್ನನೂ ತಂದೆಗೆ ಮರಗದವನೂ ಲೋಕದೊಳುಂಟೇ! ಉಪಕಾರ ಮಾಡಿದ ತಂದೆಯನ್ನೇ ಬಯಸದೆ ಬದುಕುವವನ ಬಾಳ್ವೆ ಯಾತರ ಬಾಳ್ವೆ!....[೨] ಈ ಮೇಲಿನ ಭಾಗವನ್ನು ಗಮನಿಸಿದರೆ ಕನ್ನಡ ದೇಶೀಯ ಸೊಗಡು ಎದ್ದು ತೋರುತ್ತದೆ.

ಕೊನೆ ಟಿಪ್ಪಣಿಗಳು

೧. ಮೋಹನ ಕುಂಟಾರ್(ಸಂ), ಅನುವಾದ ಸಾಹಿತ್ಯ, ಪು.ಸಂ,೧೩.

೨. ಮೋಹನ ಕುಂಟಾರ್, ಪಥ್ಯವೊಂದರ ಸ್ವಗತ, ಪ್ರಜಾವಾಣಿ ಮುಕ್ತಛಂದಸ್ಸು, ೧೭.೦೪.೨೦೧೬.

೩. ಮೋಹನ ಕುಂಟಾರ್(ಲೇ), ಭಾಷಾಂತರ ಪ್ರಕ್ರಿಯೆ, ಪು.ಸಂ.೩–೪.

೪. ಅದೇ, ಪು.ಸಂ.೪–೬.

೫. ಉಷಾ.ಎಂ(ಸಂ), ಭಾಷಾಂತರ ಪ್ರವೇಶಿಕೆ, ಪು.ಸಂ.೨೬.

೬. ಅದೇ, ಪು.ಸಂ.೫೬.

೭. ಅದೇ, ಪು.ಸಂ.೫೯.

೮. ಅದೇ, ಪು.ಸಂ.೬೦.

೯. ಅದೇ, ಪು.ಸಂ.೬೪.

೧೦. ಅದೇ, ಪು.ಸಂ.೬೫.

೧೧. ಅದೇ, ಪು.ಸಂ.೬೫.

೧೨. ಮೋಹನ ಕುಂಟಾರ್(ಸಂ), ಅನುವಾದ ಸಾಹಿತ್ಯ, ಪು.ಸಂ.೨೩.

೧೩. ಕಮಲಾಕ್ಷಮ್ಮ.ಕೆ, ಮಹೇಶ್ವರಿ.ಯು, ಪ್ರಧಾನ ಕೃತಿಗಳು, ಪು.ಸಂ.೧೬.

೧೪. ಅದೇ, ಪು.ಸಂ.೧೬.

೧೫. ಅದೇ, ಪು.ಸಂ.೧೭.

೧೬. ಅದೇ, ಪು.ಸಂ.೧೭.

೧೭. ಗಂಗಾಧರ ಮಡಿವಾಳೇಶ್ವರ ತುರಮರಿ(ಅನು), ಬಾಣಕಾದಂಬರಿ, ಪು.ಸಂ, ೪.

೧೮. ಡಾ. ಕೆ.ಕಮಲಾಕ್ಷಮ್ಮ, ಡಾ.ಯು.ಮಹೇಶ್ವರಿ, ಪ್ರಧಾನ ಕೃತಿಗಳು, ಪು.ಸಂ.೧೪.

೧೯. ಗಂಗಾಧರ ಮಡಿವಾಳೇಶ್ವರ ತುರಮರಿ(ಅನು), ಬಾಣಕಾದಂಬರಿ, ಪು.ಸಂ, ೮.

೨೦. ಗುರುಪಾದ ಮರಿಗುದ್ದಿ(ಸಂ), ಬೆಳಗಾವಿ ಜಿಲ್ಲೆಯ ವಿದ್ವತ್ ಪರಂಪರೆ, ಪು.ಸಂ. ೧೨.

೨೧. ಎನ್ಕೆ ಕುಲಕರ್ಣಿ(ಲೇ), ಗಂಗಾಧರ ಮಡಿವಾಳೇಶ್ವರ ತುರಮರಿ ಪು.ಸಂ. ೧೫.

೨೨. ಡಾ. ಕೆ. ರವೀಂದ್ರನಾಥ(ಲೇಖನ) ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕು ಸಾಹಿತ್ಯ(ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು.)

ಅಧ್ಯಾಯ ಐದು

ಗಂಗಾಧರ ಮಡಿವಾಳೇಶ್ವರರ ಟೀಕುಗಳು

೧. ಟೀಕು: ಅರ್ಥ–ಸ್ವರೂಪ

೨. ರಾಜಶೇಖರ ವಿಳಾಸ ಟೀಕು

೩. ಶಬ್ದಮಣಿದರ್ಪಣ ಟೀಕು

೪. ಕೈವಲ್ಯಪದ್ಧತಿ ಟೀಕು

೫. ಸಟೀಕು ಶಬ್ದಮಂಜರಿ ಕೋಶ

ಅಧ್ಯಾಯ ಐದು

ಗಂಗಾಧರ ಮಡಿವಾಳೇಶ್ವರರ ಟೀಕುಗಳು

ಪ್ರಾಚೀನ ಕಾವ್ಯಗಳ ಸಂಗ್ರಹ, ಅನುವಾದಗಳನ್ನು ಮಾಡುವುದರ ಮೂಲಕ ಕನ್ನಡ ವಾಚನಾಭಿರುಚಿಯನ್ನು ಹೆಚ್ಚಿದ ಗಳಗನಾಥರು ಕೆಲವು ಕಾವ್ಯಗಳಿಗೆ ಟೀಕೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾದವು ರಾಜಶೇಖರ ವಿಳಾಸ, ಸಟೀಕು ಶಬ್ದಮಂಜರಿ, ಶಬ್ದಮಣಿ ದರ್ಪಣ, ಕೈವಲ್ಯ ಪದ್ಧತಿ, ಕೃತಿಗಳಿಗೆ ಟೀಕು, ಬರೆಯುವುದರ ಮೂಲಕ ವ್ಯಾಕರಣ, ಕಾವ್ಯ, ಆಧ್ಯಾತ್ಮ ಕೃತಿಗಳ ಓದು ಹಾಗೂ ಪರಿಚಲನೆಗೆ ಕಾರಣರಾಗಿದ್ದಾರೆ.

೧. ಟೀಕು: ಅರ್ಥ–ಸ್ವರೂಪ

'ಟೀಕಾ ಸಾಹಿತ್ಯ' ಎನ್ನುವಂಥದ್ದು ಕಾವ್ಯ ಮೀಮಾಂಸೆ ಮತ್ತು ವಿಮರ್ಶೆಗಳ ಸಾಲಿನಲ್ಲಿ ಕಂಡುಬರುವಂತಹ ಮತ್ತೊಂದು ಸಾಹಿತ್ಯ ಪ್ರಕಾರವಾಗಿದೆ. ಕಾವ್ಯ ಮೀಮಾಂಸೆಯ ಕೆಲಸ "ತನ್ನ ಹಿಂದಣ ಕಾವ್ಯ ಸೃಷ್ಟಿಗೆ ಸಾಕ್ಷಿದರ್ಪಣವಾಗಿ ಅದರ ಓರೆಕೋರೆಗಳನ್ನು ಎತ್ತಿ ತೋರಿಸುವುದರ ಮೂಲಕ ಮುಂದಣ ಸಾಹಿತ್ಯಕ್ಕೆ ಓರಣವನ್ನು ಒದಗಿಸುವುದಾದರೆ,"[೧] ವಿಮರ್ಶೆಯು ಆ ಕಾವ್ಯದ ಸ್ವರೂಪ, ವ್ಯಾಪ್ತಿ, ಇತಿಮಿತಿಗಳನ್ನು ವಿವೇಚಿಸಿ ಅದಕ್ಕೆ ಬೆಲೆ ಕಟ್ಟುವ ಕೆಲಸವನ್ನು ಮಾಡುತ್ತದೆ. ಆದರೆ ಟೀಕಾ ಸಾಹಿತ್ಯವು ಕಾವ್ಯದಲ್ಲಿ ಬರುವ ರಸ–ಧ್ವನಿ–ಔಚಿತ್ಯ, ಗುಣ ಮುಂತಾದ ಪ್ರಸ್ಥಾನಗಳನ್ನು ಪ್ರಮಾಣೀಕರಿಸುವುದರ ಜೊತೆಗೆ ಒಂದು ಸಾಹಿತ್ಯ ಕೃತಿಯ ಶಬ್ದಾರ್ಥ ಮತ್ತು ಭಾವಾರ್ಥ ಪಾತಳಿಗಳನ್ನು ತಡಕಿ ನೋಡುವ ವಿಮರ್ಶಾ ದೃಷ್ಟಿಯನ್ನು ತನ್ನ ತೆಕ್ಕೆಯಲ್ಲಿ ಅವುಚಿಕೊಂಡು ಬೆಳೆಯುತ್ತದೆ.

"ಭಾರತೀಯ ಸಾಹಿತ್ಯದಲ್ಲಿ ಟೀಕೆ, ವ್ಯಾಖ್ಯಾನ, ಭಾಷ್ಯ, ಟಿಪ್ಪಣಿ, ವೃತ್ತಿ, ವಿವರಣೆ ಎಂದು ಮುಂತಾದ ಅಧ್ಯಯನ ರೂಪಗಳು ಕಂಡುಬರುತ್ತವೆ. ಇನ್ನೂ ಮುಂದೆ ಹೋಗಿ

ಪ್ರಾಕೃತ ಜೈನಾಗಮ ಗ್ರಂಥಗಳಿಗೆ ಬಿಡಿಸಿದ ಗದ್ಯರೂಪದ ಚೂರ್ಣಿ. ಆ ಧರ್ಮದ ಪಾರಿಭಾಷಿಕ ಶಬ್ದಗಳ ವಿವರಣೆಗೆ ಬರೆದ ನಿರ್ಯುಕ್ತಿ, ವಿವರಣಾತ್ಮಕ ವ್ಯಾಖ್ಯಾನ ರೂಪವಾದ ಪದ್ಧತಿ, ಲಘುಭಾಷ್ಯ, ಮಹಾಭಾಷ್ಯ, ಸೂಪಾಜ್ಞಟೀಕೆ, ಟುಪ್ ಟೀಕಾ ಎಂಬಂತಹ ಒಳಪ್ರಭೇದಗಳನ್ನು ಗಮನಿಸಿದರೆ, ಟೀಕಾ ಸಾಹಿತ್ಯದ ಸ್ವರೂಪ, ವ್ಯಾಪ್ತಿ ಹಾಗೂ ಮಹತ್ವಗಳು ಮನವರಿಕೆಯಾಗುತ್ತವೆ. ಈ ಕಾರಣವಾಗಿ ಟೀಕಾ ಸಾಹಿತ್ಯ ಪ್ರಕಾರ ಒಂದು ಸ್ವತಂತ್ರ ಅಧ್ಯಯನಕ್ಕೆ ವಸ್ತುವಾಗಬಲ್ಲದು.[೨]

ಟೀಕಾ ಸಾಹಿತ್ಯವು ಕ್ರಿ.ಶ.೭ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಇದು ಈ ಹಿಂದೆ ಶೈಕ್ಷಣಿಕ ವಿಷಯವಾಗಿತ್ತು. ಪ್ರಾಚೀನ ಕಾವ್ಯ ಕೃತಿಗಳನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಸಾಹಿತ್ಯ ಪ್ರಕಾರ ಬೆಳೆದು ಬಂದಿದ್ದು, ವೇದ, ಶಾಸ್ತ್ರಾಧ್ಯಯನಗಳಂತೆ ಟೀಕಾ ಸಾಹಿತ್ಯವನ್ನು ಕೂಡ ಅಧ್ಯಯನ ಮಾಡುತ್ತಿರುವುದು ಪ್ರಾಚೀನ ವಿದ್ಯಾಕೇಂದ್ರಗಳಲ್ಲಿನ ಪಠ್ಯಕ್ರಮದ ವಿಷಯವಾಗಿ ಟೀಕಾ ಸಾಹಿತ್ಯವು ಬೆಳೆದುಬಂದಿದೆ.

ಈ ಮೊದಲು ಸಂಸ್ಕೃತ–ಪ್ರಾಕೃತ ಸಾಹಿತ್ಯಕ್ಕೆ ಟೀಕು, ವ್ಯಾಖ್ಯಾನಗಳನ್ನು ಪತಂಜಲಿಯ 'ಮಹಾಭಾಷ್ಯ' ಸಮಂತಭದ್ರರ 'ಗಂಧಹಸ್ತಿಭಾಷ್ಯ'. ಭಗವದ್ಗೀತೆಯ ಮೇಲೆ 'ಶ್ರೀಶಂಕರ ಭಗವತ್ಪಾದರಭಾಷ್ಯ', ವಾತ್ಸ್ಯಾಯನನ 'ನ್ಯಾಯಸೂತ್ರ' ಭಾಷ್ಯದಲ್ಲಿ ನೋಡಬಹುದು. ನಂತರ ಕನ್ನಡದಲ್ಲಿ ಜೈನ, ವೀರಶೈವ, ವೈದಿಕ ಸಾಹಿತ್ಯಕೃತಿಗಳಿಗೆ ಕೂಡ ಟೀಕುಗಳು ರಚನೆಯಾದವು.

"ಟೀಕಾ ಸಾಹಿತ್ಯ ಸೃಜನಾತ್ಮಕವಾದ ಸಾಹಿತ್ಯ ಗುಣಗಳಿಂದ, ಲೋಕಾನುಭವಗಳಿಂದ, ವ್ಯಾವಹಾರಿಕ ಜ್ಞಾನಗಳಿಂದ ಪುಷ್ಟಿಗೊಂಡಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ಟೀಕಾಕಾರರ ಬಹುಭಾಷಾ ಪಾಂಡಿತ್ಯ, ವಿದ್ವತ್ತು, ಆಧ್ಯಾತ್ಮಿಕ ಅನುಸಂಧಾನಗಳಲ್ಲದೆ ಪುರಾಣೇತಿಹಾಸಗಳ ಜ್ಞಾನವನ್ನು ತಿಳಿದುಕೊಳ್ಳಬಹುದಾಗಿದೆ.[೩]

೧. ಟೀಕುವಿನ ಅರ್ಥ

"ಟೀಕುವೆಂದರೆ ಅರ್ಥವಿವರಣೆ, ಅದು ಶಬ್ದಾರ್ಥ ಇಲ್ಲವೇ ಭಾವಾರ್ಥ ವಿವರಣೆ ಆಗಿರಬಹುದು ಎಂಬ ವಿಚಾರ ಪ್ರಾಚೀನ ಕೃತಿಗಳಲ್ಲಿ ದೊರೆಯುತ್ತದೆ. ಶಾಸ್ತ್ರ ಸಾಹಿತ್ಯಕ್ಕೆ ಬರೆದ ವಿವರಣೆಯನ್ನು 'ಟೀಕೆ' ಎಂದು ಕರೆದಂತಿದೆ.

"ಲೋಕಕ್ಕಿದರರ್ಥಶಾಸ್ತ್ರದ ಟೀಕೆನಿಸಿದ ತನ್ನ ನುಡಿ ಮನಂಗೊಳಿಸೆ"

"...ಟೀಕು ವೇಳ್ಪುದನೆ ಪೇಳ್ದವನುಂ ಕವಿಯೆಂಬ ಲೆಕ್ಕಮೇ"

ಎಂಬ ಕಾವ್ಯಾವಲೋಕನದ ಮಾತು ಕವಿ ಸೃಜನಶೀಲ ವ್ಯಕ್ತಿ, ಕಾವ್ಯ ಆತನ ಸೃಜನಶೀಲ ಅಭಿವ್ಯಕ್ತಿ. ಹೀಗಾಗಿ ಟೀಕಾಕಾರ ಹೇಳಿದ್ದನ್ನೇ ಹೇಳುವವನನ್ನು ಕವಿಯೆನ್ನಲಾಗದು, ಎನ್ನುವಲ್ಲಿ ಕವಿ ಸಾಹಿತ್ಯದ ತಿರುಳನ್ನು ಅರ್ಥವನ್ನು ವಿವರಿಸುವುದು ಟೀಕಾಕಾರನ ಕೆಲಸವೆಂಬುದು ಈ ಮಾತಿನ ಅರ್ಥ.[೪]

ಈ ಟೀಕೆಯನ್ನು ಪ್ರಾಕೃತ ಸಾಹಿತ್ಯದಲ್ಲಿ ಚೂರ್ಣಿ, ನಿರ್ಯುಕ್ತಿ, ಭಾಸ (ಭಾಷ್ಯ), ಪಂಚಿಕೆ (ಪದ್ಧತಿ) ಎಂದು ಕರೆದರೆ ಸಂಸ್ಕೃತದಲ್ಲಿ ವ್ಯಾಖ್ಯಾನ, ವಾರ್ತಿಕ, ಅಧಿಕರಣ, ಕೃತಕ, ತಾತ್ಪರ್ಯ, ನಿರ್ಣಯ, ನ್ಯಾಸ, ಭಾಷ್ಯ, ಸಟೀಕು, ವೃತ್ತಿ ಎಂಬ ಹೆಸರುಗಳುಂಟು ಅದೇ ರೀತಿ ಕನ್ನಡ ಸಾಹಿತ್ಯದಲ್ಲಿ ಸಾರ, ಸಾರಾರ್ಥ, ಸಾರಾಮೃತ, ವ್ಯಾಖ್ಯಾನ, ಟಿಪ್ಪಣಿ, ವಚನಾರ್ಥ, ನುಡಿ, ವಚನಾಗಮ, ಭಾವಾರ್ಥ ಮತ್ತು ಪ್ರವಚನ, ಸಂಕಲನ, ನಿರ್ವಚನ, ವಿವೇಚನ, ಅನ್ವಯ, ದೃಷ್ಟ ಎಂಬ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದ್ದರೂ ಸಹ ಇವು ಶಬ್ದಾರ್ಥ ಮತ್ತು ಭಾವಾರ್ಥಗಳ ವಿವರಣೆ ಎಂಬ ಅರ್ಥವೇ ಬರುತ್ತದೆ.

"ಟೀಕುವಿನ ಗಾತ್ರಕ್ಕನುಸಾರವಾಗಿ ಸೋಪಾಜ್ಞಟೀಕು, ಉಪನ್ಯಾಸ ಮಾಲಾಟೀಕು, ಟುಪ್ಪೀಕೆ ಎಂತಲೂ, ಭಾಷ್ಯಗಳಲ್ಲಿ ಲಘುಭಾಷ್ಯ ಎಂತಲೂ, ವೃತ್ತಿಯಲ್ಲಿ ಅರ್ಥವೃತ್ತಿ, ಅನ್ವಯವೃತ್ತಿ, ಲಘುವೃತ್ತಿ, ಬೃಹತ್ ವೃತ್ತಿ ಎಂತಲೂ ವ್ಯಾಖ್ಯಾನದಲ್ಲಿ ತಾತ್ವಿಕಾರ್ಥ, ತಾತ್ಪರ್ಯಾರ್ಥ, ಪ್ರತಿಪದಾರ್ಥ ಎಂಬ ಭಿನ್ನ ಸ್ವರೂಪದ ಟೀಕು ರಚನೆಯಾಗಿರುವುದು ಕಂಡುಬರುತ್ತದೆ."[8]

ಟಿಪ್ಪಣಿ

ವಿವರಣೆ, ವ್ಯಾಖ್ಯಾನ ಎಂಬ ಅರ್ಥವನ್ನೊಳಗೊಂಡಿದ್ದು, ವಿಶೇಷ ಸಂದರ್ಭಗಳಲ್ಲಿ ಮುಖ್ಯಾಂಶಗಳನ್ನು ಬರೆದುಕೊಳ್ಳುವುದಾಗಿದೆ.

ವ್ಯಾಖ್ಯಾನ

ವಿಸ್ತಾರವಾಗಿ ಹೇಳುವುದು ಕೂಲಂಕಷವಾದ ವರ್ಣನೆ, ವಿವರಣೆ ಎಂಬರ್ಥಗಳಿವೆ. ಮೀಮಾಂಸೆ ಹಿನ್ನೆಲೆಯಲ್ಲಿ ವಿವರಿಸುವುದನ್ನು ವ್ಯಾಖ್ಯಾನವೆನ್ನಲಾಗಿದೆ.

ಭಾಷ್ಯ

"ವ್ಯಾಕರಣ ವೇದಾಂತ ಮೊದಲಾದ ಶಾಸ್ತ್ರಗಳ ಮೂಲಭೂತ ಸೂತ್ರಗಳ ಅರ್ಥವನ್ನು ವಿವರಿಸುವ ಕೃತಿ. ಕಾವ್ಯಗಳಲ್ಲಿ ಅರ್ಥವಾಗದ ಬೆಡಗಿನಿಂದ ಕೂಡಿದ ಗೂಢಾರ್ಥ ಸಾಹಿತ್ಯಕ್ಕೆ ವಿವರ ಬರೆಯುವುದು ವ್ಯಾಖ್ಯಾನವೆನಿಸುತ್ತದೆ. ಇದು ಶಬ್ದಾರ್ಥ, ಸಂದರ್ಭ ವಿಶೇಷ ವಿವರಣೆಯನ್ನೊಳಗೊಂಡಿದೆ. ಉದಾಹರಣೆಗೆ ಶ್ರೀಕರಭಾಷ್ಯ, ಶಂಕರಭಾಷ್ಯಗಳು, ಶಾಸ್ತ್ರಸಮ್ಮತವಾದ ವೇದಾಂತ ಭಾಷ್ಯ ಗ್ರಂಥಗಳು, ಅಲ್ಲದೆ ಸೂತ್ರಸಾರವಾದ ಪದಗಳಿಂದ ಸೂತ್ರಾರ್ಥಗಳನ್ನು ವಿವರಿಸುವ ಹಾಗೂ ವಿವರಣೆಗಾಗಿ ಕೊಟ್ಟ ಪದಗಳನ್ನು ಮತ್ತೆ ವಿಸ್ತಾರವಾಗಿ ವಿಸ್ತರಿಸುವ ಸೂತ್ರವ್ಯಾಖ್ಯಾನಗಳು ಭಾಷ್ಯಗಳು. ಯಾವುದೇ ಗಹನವಾದ ಮೂಲಗ್ರಂಥದ ವಿವರಣಾತ್ಮಕ ಪ್ರೌಢ ವ್ಯಾಖ್ಯಾನಗಳೇ ಭಾಷ್ಯಗಳು.

ಈ ಭಾಷ್ಯಗಳಲ್ಲಿ ಲಘು, ಮಹಾಭಾಷ್ಯ ಎಂದು ಎರಡು ವಿಧ. ಜೈನರ ಪರಿಭಾಷೆಯಲ್ಲಿ 'ಭಾಸ' ಎಂದು ಕರೆಯಲಾಗಿದೆ. ಜೈನಕಥಾ ಸಾಹಿತ್ಯ ಮೈತುಂಬಿಕೊಂಡು ಬಂದಿರುವುದು ಈ ಭಾಷ್ಯಗಳಲ್ಲಿ.[೬]

ವೃತ್ತಿ

"ಸೂತ್ರರೂಪದಲ್ಲಿರುವ ಮೂಲಗ್ರಂಥಕ್ಕೆ ಭಾಷ್ಯ ಬರೆಯುವುದಕ್ಕೆ ವೃತ್ತಿ ಎನ್ನುತ್ತಾರೆ. ಅಂದರೆ ಸೂತ್ರದ ಅರ್ಥ ವಿವರಣೆ.[೭] "ಸಂಕ್ಷೇಪದಿಂದ ಕೂಡಿದ್ದು, ಅರ್ಥವನ್ನು ಗರ್ಭೀಕರಿಸಿಕೊಂಡಿದ್ದು, ಕೆಲವೇ ಅಕ್ಷರಗಳ ಸಮೂಹ ಹೊಂದಿದ್ದು ಸೂತ್ರ. ಇಂತಹ ಸೂತ್ರವನ್ನು ವಿವರಿಸುವುದೇ ವೃತ್ತಿ.[೮]

ಮತ್ತೆ ಈ ವೃತ್ತಿಗಳಲ್ಲಿ ಅರ್ಥವೃತ್ತಿ ಮತ್ತು ಅನ್ವಯಿಕ ವೃತ್ತಿ, ಲಘುವೃತ್ತಿ, ಮತ್ತು ಬೃಹತ್ ವೃತ್ತಿಗಳನ್ನು ಕಾಣಬಹುದು.

ಚೂರ್ಣಿ

"ಜೈನರಲ್ಲಿ ಗದ್ಯಾತ್ಮಕ ಟೀಕೆಗಳನ್ನು ಚೂರ್ಣಿ ಎಂದು ಕರೆಯುತ್ತಾರೆ. ಇವು ಅವರ ಆಗಮಗ್ರಂಥಗಳಿಗೆ ಸಂಬಂಧಿಸಿದವು. ಚೂರ್ಣಿಕೆ, ಲತಿಕೆ... ಚಿತ್ರಮೆಂಬ ಗದ್ಯಬಂಧದೊಳಂ" ಎಂಬ ಜನ್ನನ ಹೇಳಿಕೆ ಸುಲಭ ಶೈಲಿಯ ಒಂದು ಗದ್ಯಪ್ರಕಾರ. ಜೈನರ ಪ್ರಾಕೃತ ಗದ್ಯರೂಪದಲ್ಲಿ ಚೂರ್ಣಿಗಳು ರಚನೆಯಾಗಿದ್ದು, ಲೋಕಜ್ಞಾನ, ಹಾಸ್ಯಪ್ರವೃತ್ತಿ ಸಾರುವ ಕಥಾಚಕ್ರವೇ ಚೂರ್ಣಿಗಳಲ್ಲಿ ಹೆಣೆದುಕೊಂಡಿದೆ.[೯]

ನಿರ್ಯುಕ್ತಿ :

ಜೈನರಲ್ಲಿ ಪದ್ಯಾತ್ಮಕ ಟೀಕೆಗೆ ನಿರ್ಯುಕ್ತಿ ಎನ್ನುತ್ತಾರೆ. ಜೈನಾಗಮ ಗ್ರಂಥಗಳ ಪಾರಿಭಾಷಿಕ ಶಬ್ದ ವಿವರಣೆಗೆ ನಿರ್ಯುಕ್ತಿಗಳನ್ನು ಬರೆಯುವ ರೂಢಿ ಇದೆ.

ಪದ್ಧತಿ

"ಜೈನ ವ್ಯಾಖ್ಯಾನ ಪ್ರಕಾರವಾಗಿದೆ. ಇದನ್ನು ಪಂಜಿಕೆ, ಪಂಚಿಕೆ ಎಂತಲೂ ಕರೆಯುತ್ತಾರೆ. ವೃತ್ತಿ ಸೂತ್ರದ ಕ್ಲಿಷ್ಟ ಪದಗಳಿಗೆ ಬರೆದ ವಿವರಣಾ ರೂಪದ ವ್ಯಾಖ್ಯಾನವೇ ಪದ್ಧತಿ.[೧೦]

ನ್ಯಾಸ

"ಇದಕ್ಕೆ ವ್ಯಾಖ್ಯಾನವೆಂತಲೂ, ನ್ಯಾಸವೆಂತಲೂ ಹೆಸರುಗಳಿದ್ದು, ನ್ಯಾಸವೆಂದರೆ ಸಂಗೀತದ ಒಂದು ಸ್ವರ ಪ್ರಭೇದವೂ ಹೌದು. ಹೀಗಾಗಿ ಭಟ್ಟದರ್ಶನವನ್ನು ಗೇಯಾತ್ಮಕವಾಗಿ ಪದ್ಯಾತ್ಮಕವಾಗಿ ವ್ಯಾಖ್ಯಾನ ಮಾಡುವುದು.[೧೧]

ಸಾರ ಹಾಗೂ ಪ್ರವಚನ

"ತಿರುಳು, ತಾತ್ಪರ್ಯ ಎಂದು ಸಾರ ಎಂಬುದಕ್ಕೆ ಅರ್ಥವಿದ್ದರೆ ಪ್ರವಚನಕ್ಕೆ ವಿವರಣೆ ಎಂಬರ್ಥವಿದೆ.

ಒಟ್ಟಿನಲ್ಲಿ ಟೀಕಾಸಾಹಿತ್ಯಕ್ಕೆ ಪರ್ಯಾಯವಾಗಿ ಟಿಪ್ಪಣಿ, ವ್ಯಾಖ್ಯಾನ ಭಾಷ್ಯ, ನ್ಯಾಸ, ವೃತ್ತಿ, ಪದ್ಧತಿ, ಚೂರ್ಣಿ, ನಿರ್ಯುಕ್ತಿ, ಸಾರ, ಪ್ರವಚನ ಪರಾಮರ್ಶೆಗಳೆಂಬ ಹೆಸರುಗಳನ್ನು ಬಳಸಿದ್ದರೂ ಒಂದು ಕೃತಿಯ ಅಂತರಂಗವನ್ನು ಭಾವಾರ್ಥ ರೂಪದಲ್ಲಿ ಇಲ್ಲವೇ ಶಬ್ದಾರ್ಥ ರೂಪದಲ್ಲಿ ಎಲ್ಲರಿಗೂ ಅರ್ಥವಾಗುವಂತೆ ರಚಿಸಿದ ವಿವರಣಾ ಸಾಹಿತ್ಯ ಎಂದು ಹೇಳಬಹುದು."[೨]

ಆಯಾ ಧರ್ಮಗಳ ಮೂಲ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಸಲು ಟೀಕುಗಳನ್ನು ರಚಿಸಿದರು. ಮೊದಲು ಜೈನರಿಂದ, ನಂತರ ಲಿಂಗಾಯತರಿಂದ ಕೊನೆಯದಾಗಿ ಬ್ರಾಹ್ಮಣರಿಂದ ಕನ್ನಡದಲ್ಲಿ ಟೀಕುಗಳು ರಚಿಸಲ್ಪಟ್ಟವು.

೨. ಟೀಕುವಿನ ಸ್ವರೂಪ

ಟೀಕಾಚಾರ್ಯರು ಬಹುಶಾಸ್ತ್ರ ಪಾರಾಂಗತರಾಗಿದ್ದುದನ್ನು ಕಾಣಬಹುದು. 'ಉಭಯ ಸಂಗೀತ ರತ್ನಾಕರ' ಎಂದು ಕರೆದುಕೊಂಡ ತತ್ವಾರ್ಥ ಸೂತ್ರವೃತ್ತಿಕಾರ ದಿವಾಕರಣಂದಿ, 'ಚತುರ್ವಿದ ಪಾಂಡಿತ್ಯ ಚಕ್ರವರ್ತಿ' ಎಂದು ಕರೆದುಕೊಂಡ ಕುಮುದಚಂದ್ರ ಹಾಗೂ 'ಷಡ್ಭಾಷಾ ಚಕ್ರವರ್ತಿ'ಯಾದ ಶುಭಚಂದ್ರ ಮುಂತಾದವರ ಪಾಂಡಿತ್ಯ ಪ್ರತಿಭೆಗಳು ಇವರು ರಚಿಸಿದ ಟೀಕಾಗ್ರಂಥಗಳಿಂದ ತಿಳಿದುಬರುತ್ತದೆ. ಇದು ಈ ಟೀಕಾ ಗ್ರಂಥಗಳ ವಿಶೇಷತೆಯು ಹೌದು. "ಈ ವಿಶೇಷತೆಗಳನ್ನು ವ್ಯಾಖ್ಯಾನ ಕೃತಿಗಳ ಲಕ್ಷಣಗಳೆಂದು ಭಾವಿಸಬಹುದು. ಭಾಷೆ, ಗದ್ಯ, ಶ್ಲೋಕಾರ್ಥ, ಔಚಿತ್ಯ, ಗೇಯತೆ, ಸಿದ್ಧಾಂತದ ಆಳ, ಉಪಮೆ, ರೂಪಕಗಳ, ರಸಶೈಲಿಗಳ ವೈವಿಧ್ಯತೆಯಿಂದ ವಿನೂತನ ಲಕ್ಷಣಗಳನ್ನು ಈ ಸಾಹಿತ್ಯ ಒಳಗೊಂಡಿದ್ದು ಈ ಕೆಳಗಿನಂತಿದೆ.

೧. ಟೀಕೆಗಳ ಲಕ್ಷಣಗಳಲ್ಲಿ ಲೌಕಿಕತೆಗಿಂತ ಅಲೌಕಿಕತೆ ಇಲ್ಲವೇ ತಾತ್ವಿಕತೆ ಪ್ರಧಾನವಾಗಿರುತ್ತದೆ. ಹೀಗಾಗಿ ಆಯಾ ಧರ್ಮದ ಟೀಕಾಕೃತಿಗಳಲ್ಲಿ ಆ ಧರ್ಮದ ತಾತ್ವಿಕ ಮುಖ ಮಾತ್ರ ಕಂಡುಬರುತ್ತದೆ. ಪ್ರಾಯಶಃ ಇದು ಜೈನ ಆಗಮಿಕ ಲಿಂಗಾಯತ ವಚನ ಹಾಗೂ ಬ್ರಾಹ್ಮಣ ಕೀರ್ತನೆಗಳಿಗೆ ಅನ್ವಯಿಸಿ ಹೇಳುವ ಮಾತು. ಕ್ಷೇತ್ರಗಣಿತ ವೈದ್ಯಶಾಸ್ತ್ರಗಳಂತಹ ಗ್ರಂಥಗಳಿಗೆ ಈ ಮಾತು ಅನ್ವಯವಾಗುವುದು ಕಷ್ಟ.

೨. ಸಾಸುವೆಯಲ್ಲಿ ಅಡಗಿದ ಸಾಗರದ ವಿಸ್ತಾರವನ್ನು ಟೀಕುಗಳು ಬಿಚ್ಚಿಡುತ್ತವೆ. ಉದಾಹರಣೆಗೆ

ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ ಶಬ್ದದೊಳಗಣ ನಿಶ್ಯಬ್ದದಂತೆ
ಗುಹೇಶ್ವರಾ ನಿಮ್ಮ ಶರಣರ ಸಂಬಂಧ

ಎಂಬ ಅಲ್ಲಮಪ್ರಭುಗಳ ಈ ವಚನಕ್ಕೆ ಬರೆದ ವ್ಯಾಖ್ಯಾನ ಬೀಜದೊಳಗಣ ಮರದಂತೆ ಬಹು ವಿಸ್ತಾರವಾಗಿ ಬೆಳೆಯುತ್ತಾ ಹೋಗುತ್ತದೆ. ಕೇವಲ ಮೂರು ಸಾಲುಗಳ ಮೇಲಿನ ವಚನಕ್ಕೆ ಮಹಲಿಂಗದೇವರು ಬರೆದಿರುವರೆನ್ನಲಾದ ಟೀಕುವಿನ ವಿಸ್ತಾರ ವರ್ಧಿಸಿದ ರೀತಿಯನ್ನು ಇಲ್ಲಿ ನೋಡಬಹುದು.

ಟೀಕು ॥ ಶಿಲೆಯೊಳಗಿರ್ಪ ಅಗ್ನಿ ಮೈದೋರದ ಹಾಂಗೆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಕಾಣಿಸದೆಂಬುದೀಗ ಶಿಲೆಯೊಳಗಣ ಪಾವಕನಂತೆ ಎಂಬ ಶಬ್ದಕ್ಕರ್ಥ.

ಆವುದಾನೊಂದು ಪ್ರತಿಬಿಂಬ ವುದಕದೊಳಗಿರ್ದು ಆ ಉದಕದ ಗುಣಧರ್ಮ ಕರ್ಮದ ಹೊದ್ದದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಆ ಉದಕದ ಗುಣಧರ್ಮ ಕರ್ಮದ ಹೊಂದದಿರ್ಪುದೀಗ ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ.

ಬೀಜದೊಳಗಿರ್ಪ ವೃಕ್ಷದ ಹಾಂಗೆ ಆ ಪರಬ್ರಹ್ಮವು ಪಿಂಡ ಮಧ್ಯದಲ್ಲಿ ಗೂಢವಾಗಿರ್ಪುದೆಂಬುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ.

ಶಬ್ದದೊಳಗೆ ನಿಶ್ಯಬ್ಧವಾಗಿರ್ದುದನು ಭೇದಿಸಬಾರದ ಹಾಂಗೆ ಆ ಪರಬ್ರಹ್ಮವು ಪಿಂಡಸ್ಥರವಾಗಿರ್ದು ಅಬೇಧ್ಯವಾಗಿರ್ಪುದೆಂಬುದೀಗ ಶಬ್ದದೊಳಗಣ ನಿಶ್ಯಬ್ದದಂತೆ ಎಂಬ ಶಬ್ದಕ್ಕರ್ಥ–ಇದು ಪಿಂಡ ಸಂಭವ ನಿರ್ವಚನ.

ಹೀಗೆ ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತಾ ಪರಿಭಾವಿಸಿದಷ್ಟು, ಅರ್ಥ ವಿಸ್ತಾರವಾಗುತ್ತಾ ಹೋಗುವ ಅನುರಣನ ಧ್ವನಿಯ ಲಕ್ಷಣವನ್ನು ಭಾವಾರ್ಥ ಟೀಕಾ ಸಾಹಿತ್ಯ ಪಡೆದುಕೊಂಡಿದೆ.

೩. ಟೀಕಾ ಸಾಹಿತ್ಯಕ್ಕೆ ಹೊರ ಮೈ ಹಾಗೂ ಒಳಮೈ ಎಂಬ ಎರಡು ಮಗ್ಗಲುಗಳಿವೆ. ಕೆಲ ವ್ಯಾಖ್ಯಾನಗಳು ಹೊರಮೈ ಲಕ್ಷಣವಾದ ಶಬ್ದಾರ್ಥ ನೆಲೆಯಲ್ಲಿ ರಚನೆಗೊಂಡಿದ್ದರೆ, ಇನ್ನೂ ಕೆಲವು ಒಳಮೈ ಲಕ್ಷಣವಾದ ಭಾವಾರ್ಥನೆಲೆಯಲ್ಲಿ ಸೃಷ್ಟಿಯಾಗಿವೆ. ಮತ್ತು ಕೆಲವು ಎರಡೂ ನೆಲೆಯಲ್ಲಿ ಸಂರಚನೆ ಗೊಂಡಿದೆ. ಇದನ್ನೇ ಡಾ.ಬಿ.ಆರ್.ಹಿರೇಮಠ ಅವರು ವಚನಗಳಿಗೆ ಬರೆದ ಟೀಕಾ ಸಾಹಿತ್ಯದ ಸ್ವರೂಪವನ್ನು ಹೀಗೆ ವರ್ಗೀಕರಿಸಿದ್ದಾರೆ.

ಅ. ಏಕಾರ್ಥದ ಟೀಕುವಿನ ವಿವಿಧ ರೀತಿಗಳು

೧. ಶಬ್ದದ ವಾಚ್ಯಾರ್ಥದಲ್ಲಿಯ ಪ್ರತಿ ಪದಾರ್ಥ: ಇದು ನಿಘಂಟು ಸ್ವರೂಪದ್ದು. ಉದಾ: ದೇವಲೋಕ=ಕೈಲಾಸ ಲೋಕವು, ಕೇವಲ ಜ್ಞಾನ=ಮೋಕ್ಷಕ್ಕೆ ಹೊಂದುವುದು, ವೃಂದಾವನ=ವೈದಿಕ ಯತಿಗಳ ಸಮಾಧಿಸ್ಥಳ

೨. ವಾಚ್ಯಾರ್ಥದಲ್ಲಿರುವ ವಿವರಣ ರೂಪದ ಪ್ರತಿ ಪದಾರ್ಥ : ಈ ವ್ಯಾಖ್ಯಾನ ನಿಘಂಟು ಸ್ವರೂಪದಲ್ಲಿದ್ದರೂ ವಿವರಣೆ ನೀಡಿ ಅರ್ಥ ಸ್ಫುಟಪಡಿಸುವುದಾಗಿದೆ. ಉದಾ: ಷಡ್ಗುಣ=ರಾಜನೀತಿಯ

ಆರು ಗುಣಗಳು. ಅವುಗಳಲ್ಲಿ ಸಂಧಿ=ವಸ್ತುವಾಹಗಳನ್ನು ಕೊಟ್ಟು ಶತ್ರುಗಳನ್ನು ಸಂಧಾನಗೊಳಿಸುವುದು, ಅದೇ ರೀತಿ ವಿಗ್ರಹ, ಯಾನ, ಆಸನ, ದ್ವೈವೀಭಾವ ಎಂಬುವುಗಳಿಗೆ ವಿವರಣಾತ್ಮಕ ಅರ್ಥ ಕೊಡುವುದು.

೩. **ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ತಾತ್ವಿಕಾರ್ಥ:** ಇಲ್ಲಿ ತಾತ್ವಿಕಾರ್ಥ ಪ್ರಧಾನ, ಶಬ್ದಾರ್ಥ, ಅಪ್ರಧಾನ, ನುಡಿಗಟ್ಟುಗಳಂತೆ ಇಲ್ಲಿಯ ಭಾವ ಉದಾ : ಮುಖ ಕಪ್ಪಾಗು=ಅಪಮಾನದಿಂದ ಕಳೆಗುಂದು, ಕೈ ಬಿಸಿ ಮಾಡು=ಲಂಚಕೊಡು, ಮೂಗಿಗೆ ತುಪ್ಪ ಹಚ್ಚು=ಆಸೆ ತೋರಿಸು.

೪. **ಸಾರವತ್ತಾದ ಹಾಗೂ ಸಂಗ್ರಹರೂಪದ ತಾತ್ಪರ್ಯಾರ್ಥ:** ಇದು ವ್ಯಾಖ್ಯಾನ ಲಘುವೃತ್ತಿ, ಲಘು ಭಾಷ್ಯ ಹಾಗೂ ಟುಪ್ಟೀಕೆಯ ರೂಪದ್ದು. ಹತ್ತು ಕಟ್ಟುವ ಕಡೆಗೆ ಮುತ್ತು ಕಟ್ಟುವ ಪ್ರಯತ್ನ ಇಲ್ಲಿದೆ. ತಾತ್ವಿಕಾರ್ಥವನ್ನು ಹೇಳುವ ಬದಲು ಸಂಕ್ಷಿಪ್ತವಾಗಿ ಅದರ ಸಾರಾಂಶವನ್ನು ಸಂಗ್ರಹಿಸಿಕೊಡುವ ಶಬ್ದಾರ್ಥ ತಾತ್ಪರ್ಯ ಇದಾಗಿದೆ.

ಮನೆಯೊಳಗೆ ಮನೆಯೊಡೆಯನಿದ್ದನೋ ಇಲ್ಲವೋ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ !

ಎಂಬುದಕ್ಕೆ ಮನುಷ್ಯ ಸಹಜವಾದ ದೌರ್ಬಲ್ಯಗಳನ್ನು ಬಿಡಲಾಗದ ದೇಹಿ ಜೀವಾತ್ಮನ ಕುರುಹುವನ್ನರಿಯಲಾಗದು. ಕಾರಣ ತನುವೆಂಬ ಮನೆಯಲ್ಲಿ ಆತ್ಮನೆಂಬ ಯಜಮಾನ ಇದ್ದಂತಿಲ್ಲವೆಂಬುದು ಇಲ್ಲಿಯ ಅರ್ಥ.

೫. **ಪ್ರತಿಪದಾರ್ಥ ಹಾಗೂ ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ತಾತ್ವಿಕಾರ್ಥ:** ಇಲ್ಲಿ ವ್ಯಾಖ್ಯಾನಕಾರ ಶಬ್ದಾರ್ಥ ಇಲ್ಲವೇ ವಾಕ್ಯದ ತಾತ್ಪಯಾರ್ಥಕ್ಕೆ ಕಟ್ಟುಬೀಳದೆ ವಿಷಯದ ತಾತ್ವಿಕತೆಯನ್ನು ಚರ್ಚಿಸುತ್ತಾನೆ. ಉದಾ: ಕುಂಬಳದ ಕಾಯಿಗೆ ಕಬ್ಬುನದ ಕಟ್ಟುಕೊಟ್ಟೊಡೆ ಕೊಳೆವುದಲ್ಲದೆ ಬಲುಹಾಗಬಲ್ಲದೆ? ಎಂಬುದಕ್ಕೆ ವ್ಯಾಖ್ಯಾನಕಾರ ಬರೆಯುವ ಟೀಕು "ಪ್ರಪಂಚಿನಿಂದ ಅದೃಢವಾದಾತ್ಮನಿಗೆ ಗುರೂಪದೇಶದಿಂದಂಗದ ಮೇಲೆ ಲಿಂಗ ಸಂಬಂಧವ ಮಾಡಲು ವೇಷಾಡಂಬರವಳವಡುವುದಲ್ಲದೆ ಲಿಂಗಭಕ್ತಿಯಲ್ಲಿ ದೃಢವಂಕುರಿಗೊಳ್ಳಲರಿಯದು" ಇಲ್ಲಿ ಲೌಕಿಕ ವಸ್ತುವಿನ ಮೂಲಕ ತಾತ್ವಿಕಾರ್ಥದ ಅಲೌಕಿಕವಾದ ಗೂಡಾರ್ಥವು ಬಿಚ್ಚಿಕೊಳ್ಳುತ್ತದೆ.

೬. **ಕೆಲವೊಂದು ಪದಗಳಿಗೆ ಮಾತ್ರ ಬರೆದ ಅರ್ಥ:** ಒಂದು ಕಾವ್ಯವು ಕೆಲವು ಪದ್ಯಗಳಿಗೆ ಅವುಗಳಲ್ಲಿಯ ಕೆಲವು ಪದಗಳಿಗೆ ಅರ್ಥ ಬರೆದಿರುವುದು ಕಂಡುಬರುತ್ತದೆ. ಉದಾ : ರಾಜಶೇಖರ ವಿಳಾಸದ ಗಟ್ಟಿ ಗಟ್ಟಿ ನುಡಿಗಳ ಅರ್ಥ, ಭಾವಚಿಂತಾರತ್ನದ ಗಟ್ಟಿನುಡಿಗಳು, ಇತ್ಯಾದಿಯಾಗಿ ಇಡಿಯಾಗಿ ಕಾವ್ಯಕ್ಕೆ ಶಬ್ದಾರ್ಥ ಬರೆಯದೆ ಕಠಿಣ ಪದಗಳಿಗೆ ಅರ್ಥ ನೀಡುವುದು.

೭. ಕೆಲವು ವಿಶಿಷ್ಟ ಪದಗಳಿಗೆ ಮಾತ್ರ ಬರೆದ ಟೀಕು: ಕಾವ್ಯಗಳಲ್ಲಿ ಆಚರಣೆ, ಧರ್ಮ, ಸಂಪ್ರದಾಯ ಮುಂತಾದವುಗಳಿಗೆ ಸಂಬಂಧಿಸಿದಂತೆ ಕೆಲವು ಗಮನಾರ್ಹ ಪರಿಭಾಷೆಗಳಿವೆ. ಅವುಗಳಿಗೆ ಮಾತ್ರ ಅರ್ಥ ಬರೆಯುವ ಪರಿಪಾಠವಿದೆ. ಉದಾ : ಚಿಂತಾತ್ಮ= ಶಿವ ಸ್ಮರಣೆಯುಳ್ಳಾತ್ಮ, ಗಗನಮಂಟಪ=ಆತ್ಮಾನುಭಾವ, ಮಹಾಮನೆ=ಅನುಭಾವ ಮಂಟಪ ಇತ್ಯಾದಿ.

ಆ ಉಭಯಾರ್ಥ ಟೀಕುವಿನ ವಿವಿಧ ರೀತಿಗಳು

೧. ಪ್ರತಿಪದಾರ್ಥ ರೂಪದ ವಾಚ್ಯಾರ್ಥ ಹಾಗೂ ತಾತ್ವಿಕಾರ್ಥ

೨. ಪ್ರತಿಪದಾರ್ಥ ಹಾಗೂ ಸಾರರೂಪದ ತಾತ್ವಿಕಾರ್ಥ

ಉದಾ: ಪ್ರಣವನುಚ್ಚರಿಸುವ ಅಪ್ರಾಮಾಣಿಕರೆಲ್ಲರೂ ಪ್ರಣವಮಂತ್ರವನೋದಿ ಮಂತ್ರಾರ್ಥವನರಿಯರು ಎಂಬುದಕ್ಕೆ ಪ್ರತಿಪದಾರ್ಥದ ವಾಚ್ಯಾರ್ಥ ಹಾಗೂ ಸಾರರೂಪದ ವ್ಯಾಖ್ಯಾನವನ್ನು ಹೀಗೆ ಮಾಡಲಾಗಿದೆ.

ಟೀಕು: ಪ್ರಣವನುಚ್ಚರಿಸುವ : ಪ್ರಣವ=ಗಾಯತ್ರಿ ಪ್ರಣವವನ್ನು, ಉಚ್ಚರಿಸುವ=ಜಪಿಸುವ, ಅಪ್ರಮಾಣಿಕರೆಲ್ಲರೂ=ಪ್ರಮಾಣಹೀನರಾದ, ವಿಪ್ರರೆಲ್ಲರೂ, ಪ್ರಣವ=ಗಾಯತ್ರಿ ಪ್ರಣವದ ಮಂತ್ರವ, ಓದಿ=ಜಪಿಸಿ ಮಂತ್ರಾರ್ಥವನರಿಯರು=ಗಾಯತ್ರಿಮಂತ್ರದ ಅನ್ವಯಂಗಳನು ತಿಳಿಯರು. ಇದು ಪ್ರತಿಪದಾರ್ಥ ರೂಪದ ವಾಚ್ಯಾರ್ಥ.

ದೇವನೊಚಿಸುವ ಪ್ರಮಾಣ ಹೀನರೆಲ್ಲರೂ ತಾರಕಮಂತ್ರವನು ಪಠಿಸಿ ಪ್ರಣವ ಸಂಚಿತಕ್ರಿಯೆಯನ್ನು ತಿಳಿಯರು ಎಂಬುದು ಪ್ರತಿ ಪದಾರ್ಥದ ಸಾರರೂಪ.

ಹೀಗೆ ಟೀಕಾಕಾರರು ಒಂದು ಕೃತಿಯಲ್ಲಿ ಏಕಾರ್ಥ ರೂಪ ಮತ್ತು ಉಭಯಾರ್ಥ ರೂಪದ ಟೀಕುಗಳನ್ನು ಬರೆದಿರುವುದು ಟೀಕಾಸಾಹಿತ್ಯದ ಸ್ವರೂಪದಿಂದ ಗಮನಾರ್ಹವೆನಿಸುತ್ತದೆ.[೧೩]

೪. "ಟೀಕಾಸಾಹಿತ್ಯ ಗದ್ಯದಲ್ಲಿರುವುದರಿಂದ 'ವ್ಯಾಖ್ಯಾನಗದ್ಯ'ವೆಂಬ ವಿಶಿಷ್ಟ ಪ್ರಕಾರವೇ ಸೃಷ್ಟಿಯಾಯಿತು. ಇದರಿಂದ ಬೇರೆ ಬೇರೆ ಕಾಲದಲ್ಲಿ ಬರೆದ ಟೀಕಾಕೃತಿಗಳಿಂದ ಆಯಾ ಕಾಲದ ಕನ್ನಡ ಗದ್ಯದ ಸ್ವರೂಪವನ್ನರಿಯಲು ಸಹಾಯವಾಗಿದೆ.

ಹೀಗೆ ಸಾಹಿತ್ಯದ ತಿರುಳನ್ನು ಹೊತ್ತು ಶಬ್ದಾರ್ಥ, ಭಾವಾರ್ಥ ರೂಪದಲ್ಲಿ ಗದ್ಯಮಾರ್ಗವನ್ನು, ಶಬ್ದ ಸಂಪತ್ತನ್ನು, ಆಗಮಿಕ–ಲೌಕಿಕ ಅನುಸಂಧಾನಗಳನ್ನು ಹುಟ್ಟು ಹಾಕುತ್ತಲೇ ವಿಶೇಷ ಲಕ್ಷಣ ಹಾಗೂ ಸ್ವರೂಪಗಳಲ್ಲಿ ಕನ್ನಡ ಟೀಕಾಸಾಹಿತ್ಯ ಕಾಣಿಸಿಕೊಂಡಿದೆ.[೧೪]

ಇಂಥ ಟೀಕಾಸಾಹಿತ್ಯ ರಚನೆ ಹಾಗೂ ಪ್ರಸಾರದಲ್ಲಿ ಪ್ರಾತಃಸ್ಮರಣೀಯರಾದ ಗಂಗಾಧರ ಮಡಿವಾಳೇಶ್ವರ ತುರಮರಿ ಅಂಥವರು ದುಡಿದಿದ್ದಾರೆ. ಅದರಲ್ಲೂ ವ್ಯಾಕರಣಶಾಸ್ತ್ರವಾದ ಶಬ್ದಮಣಿದರ್ಪಣಕ್ಕೆ, ಟೀಕು ಬರೆದಿರುವುದಲ್ಲದೆ; ರಾಜಶೇಖರ ವಿಳಾಸ, ಕೈವಲ್ಯ ಪದ್ಧತಿಯಂತಹ

ಕಾವ್ಯಗಳಿಗೂ ಟೀಕು ಬರೆದಿರುವುದು ವಿಶೇಷ. ಶ್ರೀಯುತರ ಟೀಕಾಕೃತಿಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೨. ರಾಜಶೇಖರ ವಿಳಾಸ ಟೀಕು

ಕನ್ನಡ ಸಾಹಿತ್ಯದಲ್ಲಿ ರಾಘವಾಂಕನ 'ಸತ್ಯಹರಿಶ್ಚಂದ್ರಕಾವ್ಯ'ದ ನಂತರ ಅತ್ಯಂತ ಕರುಣಾರ್ದ್ರವಾದ ಮನ ಮಿಡಿಯುವಂತೆ ಮಾಡಿದ ಮತ್ತೊಂದು ಕಾವ್ಯವೆಂದರೆ ಷಡಕ್ಷರ ದೇವನ 'ರಾಜಶೇಖರ ವಿಳಾಸ'. 'ಉಭಯ ಭಾಷಾಕವಿ'ಯಾದ ಷಡಕ್ಷರದೇವ ಕವಿಯು ಚಂಪುವಿನಲ್ಲಿ ಈ ಕಾವ್ಯವನ್ನು ರಚಿಸಿದ್ದಾನೆ. ಈ ಕೃತಿಯು ೧೪ ಆಶ್ವಾಸಗಳನ್ನೊಳಗೊಂಡ ಮಹತ್ವದ ಕೃತಿಯಾಗಿದೆ. ಇದು ಶಬ್ದ ಮಾಧುರ್ಯ, ಅರ್ಥಗಾಂಭೀರ್ಯ, ಶಬ್ದಾಲಂಕಾರ, ಅರ್ಥಾಲಂಕಾರ, ಸರಸತ್ವ ಮುಂತಾದ ಈ ಗುಣಗಳಿಂದ ಶೋಭಿಸುತ್ತಿರುವ ಸಂಸ್ಕೃತ ಮತ್ತು ಹಳೆಗನ್ನಗಳಲ್ಲಿ ಪಾಂಡಿತ್ಯವನ್ನು ಪಡೆದ ಗಂಗಾಧರ ಮಡಿವಾಳೇಶ್ವರರು ಟೀಕುವನ್ನು ಬರೆದರು.

ರಾಜಶೇಖರ ವಿಳಾಸದ ಮೊದಲ ಆಶ್ವಾಸಕ್ಕೆ ಟೀಕುವನ್ನು ಬರೆಯುತ್ತಾರೆ. ಎರಡನೆಯ ಆಶ್ವಾಸಕ್ಕೆ ಶಾಂತವೀರ ರಾಚಿದೇವ ಕಿತ್ತೂರ ಅವರು ಟೀಕುವನ್ನು ಬರೆದರೆ, ಮೂರನೆಯ ಆಶ್ವಾಸಕ್ಕೆ ಅನ್ನದಾನಿ ಬಸವಲಿಂಗಾರ್ಯ ಅರಳೆಲೆಮಠರವರು ಬರೆಯುತ್ತಾರೆ. ಇವರು ಗಂಗಾಧರರ ಮಾದರಿಯಲ್ಲಿಯೇ ಬರೆದರು. ಪುನಃ ನಾಲ್ಕನೆಯ ಆಶ್ವಾಸಕ್ಕೆ ಗಂಗಾಧರರೇ ಟೀಕುವನ್ನು ಬರೆಯುತ್ತಾರೆ.

ಈ ಕಾವ್ಯವು ಹಳಗನ್ನಡ ಮತ್ತು ಸಂಸ್ಕೃತಗಳಿಂದ ಕೂಡಿದ ಅತ್ಯುತ್ಕೃಷ್ಟ ಕೃತಿಯಾಗಿದ್ದು ಜನಸಾಮಾನ್ಯರಿಗೆ ಇದನ್ನು ಓದಿ ಅರ್ಥೈಸಿಕೊಳ್ಳುವುದು. ಕಷ್ಟದಾಯಕವಾಗಿದ್ದರಿಂದ ಈ ಒಂದು ಕೃತಿಗೆ ಟೀಕೆಯನ್ನು ಬರೆದುದಾಗಿ ಗಂಗಾಧರರು ಹೇಳಿಕೊಂಡಿದ್ದಾರೆ. ಈ ಕೃತಿಯ ಮೊದಲ ಆಶ್ವಾಸದಲ್ಲಿ ಷಡಕ್ಷರ ದೇವನ ಕೃತಿ, ವಂಶ, ಪಾಂಡಿತ್ಯಗಳನ್ನು ಕುರಿತು ವಿವರಿಸಿದ್ದಾರೆ ಹಾಗೂ ರಾಜಶೇಖರ ವಿಳಾಸದ ಸಂಕ್ಷಿಪ್ತವಾದ ಕಥೆಯನ್ನು ಹೇಳಿದ್ದಾರೆ. ಅಲ್ಲದೆ ಕಾವ್ಯದ ಪ್ರತಿ ಪದ್ಯಕ್ಕೂ ಅನ್ವಯ ಭಾವಾರ್ಥಗಳ ಜೊತೆಗೆ ಛಂದಸ್ಸು, ವ್ಯಾಕರಣ, ಅಲಂಕಾರ ಮತ್ತಿತರ ಅಂಶಗಳನ್ನು ಪ್ರತಿಪದ್ಯಕ್ಕೂ ವಿವರಿಸಿರುವುದನ್ನು ನಾವಿಲ್ಲಿ ಕಾಣಬಹುದು.

ಗಂಗಾಧರರು ರಾಜಶೇಖರ ವಿಳಾಸದ ಮೂರನೆಯ ಆಶ್ವಾಸಕ್ಕೆ ಟೀಕು ಬರೆದುದನ್ನು ನಿದರ್ಶನವಾಗಿ ನೋಡಬಹುದು.

"॥ಕಂದ॥ ಶ್ರೀತುಹಿನಗಿರಿ ಸುತಾಕರ।
ಜಾತಕ್ಷತ ಕಲಿತಕಂಧರಂ ನಿಜರಚಿನಿ॥
ಧೂರ್ತತಯಮಿಹೃದಯತಮಸಂ।
ಪ್ರೀತಿಯೊಳೆಮಗೀಗೆ ಸೌಖ್ಯಮಂ ಶಿವಲಿಂಗಂ ॥೧॥

ಅನ್ವಯ

ಶ್ರೀತುಹಿನಗಿರಿಸುತಾ ಕರಜಾತಕ್ಷತಕಲಿತ ಕಂಧರಂ. ಶ್ರೀ=ಜ್ಞಾನ ದಾನ್ಯೈಶ್ವರ್ಯಯುಕ್ತಳಾದ ।ತುಹಿನ=ಚಳಿಯ ।ಗಿರಿ=ಪರ್ವತದ। ಸುತಾ=ಮಗಳಾದ ಪಾರ್ವತಿಯ। ಕರಜಾತ=ಉಗುರುಗಳ, ಕ್ಷತ=ಘಾಯದಿಂದ ।ಕಲಿತ= ಒಪ್ಪುವ। ಕಂಧರಂ=ಕೊರಳುಳ್ಳಂಥ, ನಿಜರುಚಿನಿರ್ಧೂತಯಮಿಹೃದಯ ತಮಸಂ, ನಿಜ=ತನ್ನ ।ರುಚಿ=ಪ್ರಕಾಶದಿಂದ।ನಿರ್ಧೂತ=ತೊಲಗಿಸಲ್ಪಟ್ಟ। ಯಮಿ=ಋಷಿಗಳ। ಹೃದಯ ತಮಸಂ=ಅಂತರಂಗದ ತಮೋಗುಣವೆಂಬ ಕತ್ತಲೆಯುಳ್ಳಂಥ, ಶಿವಲಿಂಗಂ=ಪರಮೇಶ್ವರನು, ಎಮಗೆ=ನಮಗೆ ಸೌಖ್ಯಮಂ=ಸುಖವನ್ನು ।ಪ್ರೀತಿಯೊಳೆ=ಮಮತೆಯಿಂದ। ಈಗ=ಕೊಡಲಿ. ಇದರಲ್ಲಿ ಶಿವಲಿಂಗಂ ಕರ್ತೃ, ಸೌಖ್ಯಮಂ ಕರ್ಮ, ಈಗ ಕ್ರಿಯಾಪದ ಸಕರ್ಮಕ ಕರ್ತರಿ ಪ್ರಯೋಗ.

ಭಾವಾರ್ಥ

ಜ್ಞಾನದಾನ್ಯೈಶ್ವರ್ಯೋಪಲಕ್ಷಿತಗಳಾದ ಪಾರ್ವತಿಯ ನಖಕ್ಷತಗಳಿಂದ ಒಪ್ಪುವ ಕೊರಳುಳ್ಳಂಥ, ತನ್ನ ಪ್ರಕಾಶದಿಂದ ಮುನಿಗಳ ಹೃದಯದೊಳಗಿನ ತಾಮಸಗುಣವೆಂಬ ಕತ್ತಲೆಯನ್ನು ತೊಲಗಿಸಿದಂಥ ಪರಮೇಶ್ವರನು ಪ್ರೀತಿಯಿಂದ ನಮಗೆ ಸೌಖ್ಯವನ್ನು ಕೊಡಲಿ.

ಶ್ರೀತುಹಿನಗಿರಿಸುತಾಕರಜಾತಕ್ಷತ ಕಲಿತಕಂಧರಂ, ನಿಜರುಚಿನಿರ್ಧೂತಯ ಮಿಹೃದಯತಮಸಂ, ಎಂಬವೆರಡು ಪದಗಳು ಶಿವಲಿಂಗಂ ಎಂಬ ಪ್ರಧಾನವಾದ ಅನ್ಯಪದಕ್ಕೆ ವಿಶೇಷಣವಾದುದರಿಂದ, ಬಹುವ್ರೀಹಿ ಸಮಾಸಗಳು.

ಕರಜಾತ=ಕೈಯಲ್ಲಿ ಹುಟ್ಟಿದ್ದು, ಉಗುರು.

ಕಂಧರ ಕಂ=ನೀರನ್ನು ಅಥವಾ ಶಿರವನ್ನು । ಧರ=ಹಿಡಿದಂಥಾದ್ದು, ಕೊರಳು

ಯಮಿ=ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಯೋಗಗಳುಳ್ಳವನು ಋಷಿ.[೧೫]

ಶ್ರೀಗಂಗಾಧರ ಮಡಿವಾಳೇಶ್ವರರ ರಾಜಶೇಖರ ವಿಳಾಸದ ಟೀಕುವನ್ನು ಗಮನಿಸಿದರೆ, ತುರಮರಿ ಅವರು ಕ್ರಿ.ಶ. ೧೮೭೪ರಲ್ಲಿ ಸಿದ್ಧಪಡಿಸಿದ 'ಕವಿತಾ ಸಂಗ್ರಹ'ದಲ್ಲಿ ಷಡಕ್ಷರ ಕವಿಯ ರಾಜಶೇಖರ ವಿಳಾಸದ ೩ನೆಯ ಆಶ್ವಾಸದ ಕೆಲವು ಭಾಗಕ್ಕೆ ವ್ಯಾಖ್ಯಾನ ಬರೆದಿರುತ್ತೇನೆ ಎಂದು 'ಸೂಚನೆಯು' ಭಾಗದಲ್ಲಿ ಹೇಳಿಕೊಂಡಿದ್ದಾರೆ. ಆದರೆ, ರಾ.ಯ.ಧಾರವಾಡಕರ ಹೊಸಗನ್ನಡ ಸಾಹಿತ್ಯದ ಉದಯಕಾಲ ಕೃತಿಯಲ್ಲಿ ರಾಜಶೇಖರ ವಿಳಾಸಕ್ಕೆ ೪ ಜನ ಟೀಕಾಕಾರರು ಟೀಕು ಬರೆದಿರುವುದು ತಿಳಿದುಬರುತ್ತದೆ. ಮೊದಲನೆಯದಾಗಿ ಶಾಂತವೀರ ರಾಚಿದೇವ ಕಿತ್ತೂರ ೯ನೆಯ ಆಶ್ವಾಸಕ್ಕೆ, ಮುಳುಬಾಗಿಲು ೭ನೆಯ ಆಶ್ವಾಶಕ್ಕೆ, ಅನ್ನದಾನಿ ಬಸಲಿಂಗಾರ್ಯ ೩ನೆಯ ಆಶ್ವಾಸಕ್ಕೆ, ತುರಮರಿ ೪ನೆಯ ಆಶ್ವಾಸಗಳಗೆ ಟೀಕು ಬರೆದಿದ್ದಾರೆ. ಇದನ್ನು ಗಮನಿಸಿದರೆ, ತುರಮರಿ ಅವರು ಸಂಗ್ರಹಿಸಿದ 'ಕವಿತಾ ಸಂಗ್ರಹದ' ರಾಜಶೇಖರ ವಿಳಾಸದ ೩ನೆಯ ಆಶ್ವಾಸದ ಟೀಕು

ಅನ್ನದಾನಿ ಬಸಲಿಂಗಾರ್ಯ ಮುಂಡರಗಿ ಅವರದ್ದಾಗಿರಬೇಕು. ಹೀಗಾಗಿ ಬೇರೆಯವರ ಕವಿತೆಗಳನ್ನು ಸಂಗ್ರಹಿಸಿದ ಕಾರಣ ಈ ಕೃತಿಗೆ 'ಕವಿತಾ ಸಂಗ್ರಹ' ಎಂದು ನಾಮಕರಣ ಮಾಡಿದಂತಿದೆ. ಅದೇನೇ ಇರಲಿ ತುರಮರಿ ಅವರು ಟೀಕು ಕುರಿತು ಶ್ರೀ ಬಸವಲಿಂಗಾರ್ಯರು ಹೇಳುವಂತೆ,

"ಘನಡೈರಕ್ಟರ್ ಸತ್ಯಸಂದ ದೊರೆಗಳ್ ಮುಂಗೊಟ್ಟು ನೈರೂಪ್ಯ.... ಗಂಗಾಧರ ಶಾಂತವೀರ ಶರಣಪೇರ್ಳ್ವಾದಿ ಭಾಸ್ವಾ ದ್ವಿತೀಯ ನಾಶ್ವಾಸ ಸಮರ್ಥಂ" ಎನ್ನುವಲ್ಲಿ ನಮಗೆ ದೊರೆತ ಬಸವಲಿಂಗಾರ್ಯನ ಟೀಕುವಿನ ಮಾದರಿಯಲ್ಲಿಯೇ ತುರಮರಿ ಅವರ ರಾಜಶೇಖರ ವಿಳಾಸದ ಟೀಕು ರಚನೆಯಾದಂತಿದೆ. ಪ್ರಾಚೀನ ಹಳಗನ್ನಡ ಕಾವ್ಯದ ಓದು ವಾಚನಗಳು ಶ್ರೀ ಸಾಮಾನ್ಯನಿಗೆ ಅರ್ಥವಾಗಲೆಂದು ಪದಾರ್ಥ ಟೀಕು, ಅಂದರೆ ಅನ್ವರ್ಥ ಟೀಕುವನ್ನು ಹಾಗೂ ಒಟ್ಟು ಪದ್ಯದ ಭಾವಾರ್ಥವನ್ನು ನೀಡಿದ್ದಾರೆ. ವಿಶೇಷವಾಗಿ ತುರಮರಿ ಅವರ ಟೀಕುವನ್ನು ಶಬ್ದಾರ್ಥ ಟೀಕು, ನಿಘಂಟು ಅರ್ಥದ ಟೀಕು, ಭಾವಾರ್ಥ ಟೀಕು, ಹಾಗೂ ಛಂದಸ್ಸಾರ್ಥ ಟೀಕು, ಸ್ವರೂಪದಲ್ಲಿ ರಚಿಸಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಕನ್ನಡ ಕಾವ್ಯಗಳನ್ನು ಓದುವ ಹವ್ಯಾಸವನ್ನು ಉಂಟುಮಾಡಬೇಕೆಂಬ ಕಾರಣಕ್ಕಾಗಿ ರಾಜಶೇಖರ ವಿಳಾಸದಂಥ ವಾಚನಾ ಪಠ್ಯಕ್ಕೆ ಟೀಕು ಬರೆದಿರುವುದು ಮುಖ್ಯವಾದ ಉದ್ದೇಶವೆನಿಸುತ್ತದೆ.

ಕೇಶಿರಾಜನ ಶಬ್ದಮಣಿದರ್ಪಣದ ಟೀಕು :

"ಸಂಬಂಧ, ಅಭಿದೇಯ, ಶಕ್ಯಾನುಷ್ಠಾನ, ನಿಜೇಷ್ಠ ಸಿದ್ಧಿಗಳ ಮೂಲಕ ಉಪಾದೇಯವಾಗಬೇಕಾದ ಕಾವ್ಯ ಕೇಶಿರಾಜನ ಶಬ್ದಮಣಿದರ್ಪಣ. ವ್ಯಾಕರಣ ಕೃತಿಯಾದರೂ ಇದು ಕೇಶಿರಾಜನ ಮಹಾಕಾವ್ಯ. "ಕರ್ನಾಟಕದೊಳ್ ಪರಕಿಸೆ ಶಬ್ದಜ್ಞನಾವನೋ ? ಓರ್ವನೆ ಕವಿಕುಂಜರ ಭಾಪು ಕೇಶಿರಾಜ" ಎಂದು ೧೪ನೇ ಶತಮಾನದ ಕವಿಮಲ್ಲನಿಂದ ಪ್ರಶಂಸೆಗೊಂಡ ಕವಿ. ಈತನ ಕೃತಿ ಹಳಗನ್ನಡ ಜ್ಞಾನಕ್ಕೆ ಅವಶ್ಯವಾಗಿರುವುದರಿಂದ ಮತ್ತು ಹಳಗನ್ನಡ ಓದಿನ ಮಾಸ್ತರ ಜನರಿಗೆ ಬಹು ಲಾಭ ಉಂಟಾಗುವುದೆಂಬ ಕಾರಣಕ್ಕೆ ೧೮೬೬ರ ಜೂನ್ ತಿಂಗಳಿನಿಂದ ಮಠ ಪತ್ರಿಕೆ (ಮಠ ಪತ್ರಿಕೆ ಅಲ್ಲ ಶಾಲಾ ಪತ್ರಿಕೆ ಇರಬಹುದು? ಆ ಪತ್ರಿಕೆಯ ಟೀಕುವಿನ ನಕಲು ಪ್ರತಿಯನ್ನು ಈ ಲೇಖನದ ಕೊನೆಗೆ ಅನುಬಂಧದಲ್ಲಿ ಕೊಡಲಾಗಿದೆ. ಗಮನಿಸಬೇಕು!) ಸಂಚಿಕೆಯಿಂದ ಜೀವಿತದ ಕೊನೆಯವರೆಗೆ ಕಂತುಗಳ ರೂಪದಲ್ಲಿ ಪ್ರಕಟಿಸುತ್ತಾರೆ. ಪತ್ರಿಕೆಯಾದ್ದರಿಂದ ಸ್ಥಳಾವಕಾಶ ಸಮಯಾವಕಾಶದ ಮಿತಿಗಳಿಂದ ಕೇವಲ ವ್ಯಾಕರಣ ನಿಯಮಗಳುಳ್ಳ ಶ್ಲೋಕಗಳಿಗೆ ಮಾತ್ರ ಅರ್ಥ ಸಹಿತ ಟೀಕು ಬರೆದಿರುವುದಾಗಿ ತಿಳಿಸುತ್ತಾರೆ. ನಮಗೆಲ್ಲ ತಿಳಿದಿರುವಂತೆ ೧೭೨೫ರಲ್ಲಿ ನಿಟ್ಟೂರು ನಂಜಯ್ಯನವರು ಟೀಕು ಬರೆದ ಶಬ್ದಮಣಿ ದರ್ಪಣವನ್ನು ಡಾ.ಡಿ.ಎಲ್.ಎನ್. ಸಂಪಾದಿಸಿದ್ದಾರೆ. ಅರುಣೋದಯದ ಆರಂಭ ಕಾಲದಲ್ಲಿ ಒಂದು ಭಾಷೆಯ ಸಶಕ್ತಿಕರಣದ ಪ್ರಶ್ನೆ ಬಂದಾಗ ಅದರ ವ್ಯಾಕರಣ ರಚನೆ, ಅದರಿಂದ ಭಾಷಾಶಾಸ್ತ್ರದ ಮೂಲತತ್ವಗಳ

ನಿರೂಪಣೆಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ತುರಮರಿ ಅವರ ಈ ಕಾರ್ಯ ಶ್ಲಾಘನೀಯವಾದದ್ದು.[೧೭]

ಮೊದಲಿಗೆ ಶಬ್ದಮಣಿದರ್ಪಣದ ಸೂತ್ರವನ್ನು ಕೊಟ್ಟು, ಆ ಸೂತ್ರದ ಕೆಳಗೆ ವೃತ್ತವನ್ನು ನೀಡಿರುವುದು ಕಂಡುಬರುತ್ತದೆ. ಪ್ರಾಯಶಃ ಡಿ.ಎಲ್.ನರಸಿಂಹಾಚಾರ್ ಸಂಪಾದಿಸಿದ ಶಬ್ದಮಣಿ ದರ್ಪಣಕ್ಕೆ ನಿಟ್ಟೂರು ನಂಜಯ್ಯ ಅವರು ೧೭೨೫ರಲ್ಲಿ ಟೀಕು ಬರೆದಿದ್ದಾರೆ. ಆ ಕಾಲಕ್ಕಾಗಲೇ ಟೀಕುವಿನ ಜೊತೆಗೆ ವೃತ್ತಿಭಾಗವು ಶಬ್ದಮಣಿದರ್ಪಣಕ್ಕೆ ರಚನೆಯಾಗಿತ್ತು. ಇದನ್ನೆಲ್ಲ ಗಮನಿಸಿದರೆ ತುರಮರಿಯವರ ಶಬ್ದಮಣಿದರ್ಪಣದ ವ್ಯಾಖ್ಯಾನ ರಚನೆಗೊಂಡಿದ್ದು ಕ್ರಿ.ಶ. ೧೮೬೬. ಅವರ ಸ್ವತಂತ್ರ ವ್ಯಾಖ್ಯಾನದ ಕೃತಿ ನನಗೆ ಲಭ್ಯವಾಗಿಲ್ಲ. ಆದರೆ 'ಶಾಲಾಪತ್ರಿಕೆ'ಯಲ್ಲಿ ಬರೆದ ಶಬ್ದಮಣಿದರ್ಪಣದ ಟೀಕು ಇವರು ಬರೆದ ಸ್ವಾತಂತ್ರ್ಯ ಟೀಕುವೇ ಅಥವಾ ನಿಟ್ಟೂರು ನಂಜಯ್ಯನ ಟೀಕೆಯೊಂದಿಗೆ ರಚನೆಯಾದ ಡಿ.ಎಲ್.ಎನ್. ಸಂಪಾದನೆಯ ಪೂರ್ವದಲ್ಲಿಯೇ ದೊರೆತ ಹಸ್ತಪ್ರತಿಯ ಒಂದೊಂದು ಶ್ಲೋಕವನ್ನು ಪತ್ರಿಕೆಯ ಸಂಚಿಕೆಗಳಾಗಿ ರೂಪಿಸಿರಬಹುದೇ ಎಂಬುದು ಸ್ಪಷ್ಟವಾಗುವುದಿಲ್ಲ. ಅದೇನೇ ಇರಲಿ ಒಂದು ಭಾಷೆಯ ಸಶಕ್ತೀಕರಣದ ಪ್ರಶ್ನೆ ಬಂದಾಗ ಅದರ ವ್ಯಾಕರಣ ರಚನೆ ಅದರಿಂದ ಹೊರಡುವ ಶಬ್ದಾರ್ಥಗಳ ನಿರೂಪಣೆಯ ಬಗ್ಗೆ ತುರಮರಿಯವರಲ್ಲಿದ್ದ ಆಸಕ್ತಿ ಅಜರಾಮರವಾದುದು ಎಂಬುದಂತು ಸತ್ಯ. ಶಬ್ದಮಣಿ ದರ್ಪಣ ಟೀಕುವಿನ ಶಾಲಾಪತ್ರಿಕೆಯ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

೪. ನಿಜಗುಣರ ಕೈವಲ್ಯ ಪದ್ಧತಿ ಟೀಕು:

"ಅಥಣಿಯ ಹಿರೇಮಠದ ಮಡಿವಾಳ ಸ್ವಾಮಿಗಳಲ್ಲಿ ಶಿಕ್ಷಣ ಪಡೆದ ತುರಮರಿ ಅವರಿಗೆ ಸಹಜವಾಗಿಯೇ ನಿಜಗುಣ ಶಿವಯೋಗಿಗಳಂಥ ತತ್ವಪದಕಾರರ ಸಾಹಿತ್ಯ ಪಠಣ ಪ್ರವಚನ ಸಾಧ್ಯವಾಗಿರಬೇಕು. ಅದರಲ್ಲೂ ನಿಜಗುಣ ಶಿವಯೋಗಿಗಳ ಕೃತಿಗಳು ಇಡಿಯಾಗಿ ಜನಾಂಗದ, ಒಂದು ಸಂಸ್ಕೃತಿಯ ಆದರ್ಶ, ಶ್ರದ್ಧೆ, ನಂಬಿಕೆ, ಪೂಜೆ, ಯೋಗ ಮುಂತಾದವುಗಳನ್ನೊಳಗೊಂಡ ಜೀವನ ವಿಧಾನಗಳು. ಈ ವಿಧಾನವನ್ನು ದೇಶ ಬಾಂಧವರು ಅಳವಡಿಸಿಕೊಳ್ಳಬೇಕೆಂಬ ಕಾರಣಕ್ಕಾಗಿ ೧೮೭೫ರಲ್ಲಿ ಬೆಳಗಾವಿಯ ಸಮಾಚಾರ ಪತ್ರಿಕೆಯಲ್ಲಿ ಟೀಕಾಸಹಿತವಾಗಿ ಸಂಪಾದಿಸಿದ್ದಾರೆ. ಈ ಕೃತಿಯನ್ನು ಗಮನಿಸಿದರೆ ತುರಮರಿ ಅವರಿಗಿದ್ದ ವೇದಾಂತದ ತಿಳುವಳಿಕೆ, ಪಾಂಡಿತ್ಯ ಮನವರಿಕೆಗಾಗುತ್ತದೆ.[೧೮]

ಹೀಗೆ ಕಾವ್ಯ, ವ್ಯಾಕರಣ, ಆಧ್ಯಾತ್ಮ ಕೃತಿಗಳಿಗೆ ಟೀಕುಗಳನ್ನು ಬರೆಯುವುದರ ಮೂಲಕ ಕನ್ನಡ ಕಾವ್ಯಗಳ ವಾಚನ ಪರಿಚಲನೆಗೆ ಬಹುದೊಡ್ಡ ಕೊಡುಗೆ ನೀಡಿದ ಶ್ರೇಯಸ್ಸು ಗಂಗಾಧರ ಮಡಿವಾಳೇಶ್ವರ ತುರಮರಿ ಅವರಿಗೆ ಸಲ್ಲುತ್ತದೆ.

೫. ಸಟೀಕು ಶಬ್ದಮಂಜರಿ ಕೋಶ

ಮೊದಲಿನಿಂದಲೂ ಕನ್ನಡ ಶಬ್ದಕೋಶಗಳ ರಚನೆಗೆ ತನ್ನದೇ ಆದ ಇತಿಹಾಸ ಹಾಗೂ ಪರಂಪರೆಯಿದೆ. ಭಾಷಾಶಾಸ್ತ್ರದ ಶಾಖೆಯಾಗಿ ಬೆಳೆದುಬಂದ ನಿಘಂಟುಶಾಸ್ತ್ರ ಕುರಿತು ಅನೇಕ ನಿಘಂಟು ರಚನಾಕಾರರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಗಳನ್ನು ನೀಡಿದ್ದಾರೆ.

"ಒಂದು ಭಾಷಾ ಸಮುದಾಯದಲ್ಲಿನ ಸ್ವತಂತ್ರ ಭಾಷಾ ರೂಪಗಳನ್ನು ಆರಿಸಿಕೊಂಡು ಪ್ರತಿಯೊಂದು ಪದದ ಉಚ್ಚಾರ, ವ್ಯಾಕರಣಾಂಶ, ನಿಷ್ಪತ್ತಿ ಇತ್ಯಾದಿ ಅಂಶಗಳನ್ನು ಅನುಲಕ್ಷಿಸಿ ಮೂಲರೂಪ ಮತ್ತು ಸಮಸ್ತರೂಪಗಳನ್ನು ವ್ಯವಸ್ಥಿತವಾಗಿ (ಅಕಾರಾದಿಯಾಗಿ) ಸಂಯೋಜಿಸಿಕೊಳ್ಳುವುದೇ ನಿಘಂಟು ಎಂಬುದು ಎಸ್.ಎಂ.ಖತ್ರೆಯವರ ಅಭಿಪ್ರಾಯವಾಗಿದೆ.

ಕೆ.ನಾರಾಯಣರ ಪ್ರಕಾರ 'ಒಂದು ಭಾಷೆಯಲ್ಲಿನ ಎಲ್ಲ ಶಬ್ದಗಳ ಅರ್ಥ, ಅವುಗಳ ವ್ಯಾಕರಣ ಅನುಶಾಸನಗಳ ಕಾರ್ಯ, ವ್ಯುತ್ಪತ್ತಿ, ವಾಕ್ಯರಚನೆಯ ಪ್ರಭೇದಗಳು ಉಚ್ಚಾರಣೆ, ಪ್ರಚಲಿತ ಹಾಗೂ ಸಂದರ್ಭೋಚಿತ ಅರ್ಥ, ಸಮಾನಾರ್ಥ ವ್ಯತಿರಿಕ್ತಾರ್ಥ ಪೂರ್ವಗ್ರಂಥಗಳಲ್ಲಿ ಉಪಯೋಗವಾಗಿರುವ ಅರ್ಥ ಚಿತ್ರಣ ಇವುಗಳನ್ನು ತಿಳಿಸುವ ಅಕಾರಾದಿ ಪದಗಳನ್ನೊಳಗೊಂಡ ಕೃತಿಗೆ ನಿಘಂಟು ಎಂದು ಹೆಸರು.

ನಿಘಂಟು ಮತ್ತು ಕೋಶಗಳ ಸಾಮ್ಯತೆಯ ಬಗ್ಗೆ ಜಿ.ವೆಂಕಟಸುಬ್ಬಯ್ಯನವರು ಹೀಗೆ ಹೇಳಿದ್ದಾರೆ. 'ನಿಘಂಟು–ಕೋಶ ಈ ಎರಡು ಶಬ್ದಗಳಿಗೂ ಒಂದೇ ಅರ್ಥ. ಆದರೆ ನಿಘಂಟು ಎಂಬುದು ವೇದಗಳಲ್ಲಿರುವ ಶಬ್ದಗಳಿಗೆ ಅರ್ಥ ಹೇಳುವ ಮೊದಲ ಪ್ರಯತ್ನಕ್ಕೆ ಇಟ್ಟ ಹೆಸರು. ನಿಘಂಟು ಶಬ್ದಕ್ಕೆ 'ಯಸ್ಮಾದರ್ಥಾನ್ನಿಘಂಟಿಯತಿ ತಸ್ಮಾನಿಘಂಟು; ಎಂದು ವ್ಯಾಡಿ ಎಂಬ ನಿಘಂಟುಕಾರ ವಿವರಿಸುತ್ತಾನೆ. ಅರ್ಥವನ್ನು ನಿರ್ಧಾರವಾಗಿ ತಿಳಿಸುವುದರಿಂದ ಅವಕ್ಕೆ ನಿಘಂಟು ಎಂದು ಹೆಸರು. ಆ ವ್ಯಾಖ್ಯಾನಕ್ಕೆ ಅರ್ಥ ಮೊದಲು ವೇದಗಳಲ್ಲಿಯೂ ನಿಗೂಢಾರ್ಥದ ಪಟ್ಟಿಗೆ ಮೊದಲು ನಿಘಂಟು ಎಂಬ ಹೆಸರು ಅನ್ವರ್ಥವಾಯಿತು. ಇತರ ಶಬ್ದಗಳ ಪಟ್ಟಿಗೆ ಅರ್ಥ ಹೇಳುವ ರಚನೆಗಳಿಗೆ ಕೋಶ ಎಂದು ಹೆಸರು ಬಂತು. ಸಂಸ್ಕೃತ ಕೋಶದಲ್ಲಿ ಕೋಶ–ಕೋಷ ಎಂಬ ಎರಡೂ ರೂಪಗಳಿವೆ. ಎರಡೂ ಸರಿಯಾದುವೇ. ಕೋಶ ಶಬ್ದವು ಕುಕ್ಷಿ ಅಥವಾ ಕೋಷ್ಠ ಎಂಬುದರಿಂದ ಬಂದಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕೋಶಕ್ಕೆ ಮೊದಲ ಅರ್ಥ ಬೊಕ್ಕಸು, ಖಜಾನೆ ಎಂದು, ಬಳಿಕ ಶಬ್ಧಗಳ ಬೊಕ್ಕಸವಾದ ನಿಘಂಟಿಗೂ ಕೋಶ ಎಂಬುದು ಪ್ರಯೋಗವಾಗುತ್ತಾ ಬಂತು. ನಿಘಂಟಿಗೆ ನಿಘಂಟುಕ ಎಂಬ ಪರ್ಯಾಯ ಪದವೂ ಇದೆ. ಕನ್ನಡದಲ್ಲಿ ಬಂಡಾರ, ಭಂಡಾರ ಎಂಬ ಶಬ್ದಗಳಿವೆ. ನಿಘಂಟಿಗೆ ಶಬ್ದಭಂಡಾರವೆಂದು ಕರೆಯಬಹುದು. ಈ ಭಂಡಾರ ಎಂಬುದು ಸಂಸ್ಕೃತದ ಭಾಂಡಾಗಾರ ಎಂಬುದರಿಂದ ಬಂದುದು. ಭಂಡಾರ ಎಂಬುದಕ್ಕೂ ಕೋಶ ಎಂದೇ ಅರ್ಥ'.

ನಿಘಂಟು ಮತ್ತು ಕೋಶಗಳು ಒಂದೇ ಅರ್ಥದಲ್ಲಿ ಬಳಕೆಯಾಗುತ್ತವೆ. ಅವುಗಳಿಗೆ ಪರ್ಯಾಯವಾಗಿ ನಾಮಮಾಲಾ, ಶಬ್ದಾರ್ಣವ, ಶಬ್ದಮಾಲಾ, ಶಬ್ದಾವಳಿ, ಅಭಿದಾನ, ಅಭಿಧಾನಕೋಶ, ಅಭಿಧಾನಮಾಲೆ, ಕಲ್ಪತರು ಹೀಗೆ ಅನೇಕ ಹೆಸರುಗಳಿಂದ ಕರೆಯಲಾಗುತ್ತಿದೆ.[೧೯]

ನಿಘಂಟುಗಳಲ್ಲಿ ಅನೇಕ ಪ್ರಕಾರದ ನಿಘಂಟುಗಳಿದ್ದು ಇವುಗಳನ್ನು ಈ ರೀತಿ ವರ್ಗೀಕರಿಸಬಹುದು.

ಭಾಷೆಗಳನ್ನು ಆಧಾರವಾಗಿಟ್ಟುಕೊಂಡು ಏಕಭಾಷಿಕ ನಿಘಂಟು, ದ್ವಿಭಾಷಿಕ ನಿಘಂಟು ಮತ್ತು ಬಹುಭಾಷಿಕ ನಿಘಂಟುಗಳು ರಚನೆಯಾಗಿವೆ. ಹಾಗೂ ಭಾಷೆಗಳ ಸ್ಥಾನಮಾನವನ್ನಾಧರಿಸಿ ಬರಹದ ಭಾಷೆಯ ನಿಘಂಟು ಮತ್ತು ಆಡುಭಾಷೆಯ ನಿಘಂಟು ರಚಿತವಾಗಿದ್ದು, ಭಾಷೆಗಳ ಕಾಲಘಟ್ಟವನ್ನು ಆಧರಿಸಿ ಐತಿಹಾಸಿಕ ನಿಘಂಟು ಮತ್ತು ಸಮಕಾಲೀನ ನಿಘಂಟು ಎಂದು ವರ್ಗೀಕರಿಸಲಾಗಿದೆ.

ಭಾಷೆಯನ್ನು ಆಧರಿಸಿದ ಏಕಭಾಷಿಕ ನಿಘಂಟು ಪ್ರಮುಖವಾಗಿದ್ದು "ಇದರ ಹೆಸರೇ ಸೂಚಿಸುವಂತೆ ಯಾವುದಾದರೊಂದು ಭಾಷೆಯ ನಿಘಂಟಿಮಗಳಿಗೆ ಅದೇ ಭಾಷೆಯಲ್ಲಿಯೇ ಅರ್ಥ ವಿವರಣೆಯನ್ನು ಕೊಡಲಾಗುತ್ತದೆ. ಒಂದು ಭಾಷೆಯ ನಿಘಂಟಿಮಗಳ ವಿವರ ಈ ಬಗೆಯ ನಿಘಂಟುಗಳಲ್ಲಿ ಸಿಗುತ್ತದೆ. ಈ ಏಕಭಾಷಿಕ ನಿಘಂಟುಗಳಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳು. ಒಂದು ಕಾವ್ಯಮಾಧ್ಯಮದಲ್ಲಿ ರಚಿತವಾದದ್ದು. ಉದಾ : ರನ್ನಕಂದ, ಕರ್ಣಾಟಕ ಶಬ್ದಮಂಜರಿ ಎರಡು ಗದ್ಯದಲ್ಲಿ ರಚಿತವಾದದ್ದು ಉದಾ : ಕರ್ಣಾಟಕ ಶಬ್ದಸಾರಂ, ಸಿರಿಗನ್ನಡ ಅರ್ಥಕೋಶ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು, ಮೂರು ಸಚಿತ್ರ ನಿಘಂಟು, ಉದಾ; ಕವಲಿ ಅವರ ಕನ್ನಡ–ಕನ್ನಡ ಕಸ್ತೂರಿಕೋಶ. ಏಕಭಾಷೆಯ ನಿಘಂಟುಗಳು ಆ ಭಾಷೆಯನ್ನು ಬಲ್ಲವರ ಉಪಯೋಗಕ್ಕಾಗಿ ನಿರ್ಮಿತವಾಗಿರುತ್ತವೆ. ಈ ಏಕಭಾಷಾ ನಿಘಂಟುಗಳು ಆ ಭಾಷೆಯನ್ನು ಎರಡನೆಯ ಭಾಷೆಯಾಗಿ ಕಲಿಯುವವನ ಉಪಯೋಗಕ್ಕೆ ನೆರವಾಗುತ್ತವೆ. ಪ್ರಾದೇಶಿಕ ಮತ್ತು ಸಾಮಾಜಿಕ ಉಪಭಾಷೆಗಳನ್ನು ಅನುಲಕ್ಷಿಸಿ ಏಕಭಾಷಿಕ ನಿಘಂಟುಗಳನ್ನು ರಚಿಸಬಹುದು. ತನ್ಮೂಲಕ ಒಂದು ಪ್ರದೇಶ ಹಾಗೂ ಜನಾಂಗದ ಆಡುನುಡಿಯ ವೈಶಿಷ್ಟ್ಯವನ್ನು ಅರಿಯಲು ಇವು ತುಂಬಾ ನೆರವಾಗುತ್ತವೆ.[೨೦]

ಇಂತಹ ಏಕಭಾಷಿಕ ಕೋಶವನ್ನು ಏಕಾಂಗಿಯಾಗಿ ರಚಿಸಿದ ಗಂಗಾಧರ ಮಡಿವಾಳೇಶ್ವರರ ಸಟೀಕಿನ ಶಬ್ದಮಂಜರಿಕೋಶದ ಮಹತ್ವವನ್ನು ಈ ಅಧ್ಯಾಯದಲ್ಲಿ ತಿಳಿದುಕೊಳ್ಳಬಹುದಾಗಿದೆ.

ಗಂಗಾಧರ ಮಡಿವಾಳೇಶ್ವರರು ರಚಿಸಿದ ಹಳಗನ್ನಡ ಕಾವ್ಯಾಭ್ಯಾಸಿಗಳಿಗೆ ಹಾಗೂ ಬೋಧಿಸುವವರಿಗೆ ಅನುಕೂಲವಾಗಬೇಕೆಂದು ರಚನೆಗೊಂಡಿದೆ.

ಈ ಕೋಶದ ರಚನೆ ಅಂದಿನ ಕಾಲಕ್ಕೆ ತುಂಬಾ ಅನಿವಾರ್ಯ ಎಂದು ತೋರಿತು. ಹಾಗಾಗಿ ಈ ಕೃತಿಯ ರಚನೆಗೆ ಗಂಗಾಧರರು ಮುಂದಾದರು. ಈ ಕೋಶದ ರಚನೆಗೆ ಪ್ರೇರಣೆ ನೀಡಿದವರೆಂದರೆ ವಿಲಿಯಂ ಅಲೆನ್ ರಸೆಲ್‌ರವರು. ಇವರು ಮುಂಬೈ ಇಲಾಖೆಯ ದಕ್ಷಿಣ ವಿಭಾಗದ ಶಿಕ್ಷಣಾಧಿಕಾರಿಗಳಾಗಿ ಬಂದುದು ಕನ್ನಡಿಗರ ಭಾಗ್ಯವೇ ಸರಿ ಎನ್ನಬೇಕು. ೧೮೬೬ರಲ್ಲಿ ಶಿಕ್ಷಣಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಕನ್ನಡ ಭಾಷೆಯ ಬಗ್ಗೆ ಕುತೂಹಲ ಮೂಡಿ ಕನ್ನಡ ಭಾಷೆಯನ್ನು ಕಲಿಯುವ ಮನಸ್ಸಾಗಿ ಕನ್ನಡ ವಿದ್ವಾಂಸರಿಂದ, ಪಂಡಿತರಿಂದ ಹೇಳಿಸಿಕೊಂಡರು. ಇದರಿಂದ ರಸೆಲ್‌ರವರಲ್ಲಿ ಕನ್ನಡಾಭಿಮಾನ ಬೆಳೆಯಿತು. ಹಾಗೂ ಕನ್ನಡ ಭಾಷೆಯನ್ನು ಬೆಳೆಸಲು ಮುಂದಾದರು. ಇದಕ್ಕೆ ಪೋಷಕವೆಂಬಂತೆ ಡೆಪ್ಯುಟಿ ಚೆನ್ನಬಸಪ್ಪ ಮತ್ತು ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಮೊದಲಾದ ವಿದ್ವಾಂಸರು ಜೊತೆಗೂಡಿ ಕನ್ನಡ ಭಾಷೆಯ ಪ್ರಸಾರ ಹಾಗೂ ಪ್ರಗತಿಗಾಗಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದುವೇ ಏಕಭಾಷಾ ಕೋಶದ ರಚನೆ. ಈ ಕೋಶ ರಚನೆಯ ಜವಾಬ್ದಾರಿಯನ್ನು ಕನ್ನಡ ಪಂಡಿತರಾದ ಗಂಗಾಧರ ಮಡಿವಾಳೇಶ್ವರರಿಂದ ಮಾತ್ರ ಸಾಧ್ಯವೆಂದು ಇವರಿಗೆ ಒಪ್ಪಿಸಿದರು.

ಆಗ ಗಂಗಾಧರರು ಹುನಗುಂದ ಶಾಲೆಯಲ್ಲಿ 'ಅಖವಾನಜಿ' ಅಂದರೆ ಮುಖ್ಯಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಬೆಳಗಾವಿಯ ಟ್ರೈನಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರಾದ ಡೆಪ್ಯುಟಿ ಚೆನ್ನಬಸಪ್ಪನವರು ಶಿಕ್ಷಣಾಧಿಕಾರಿಗಳಾಗಿ ಬೆಳಗಾವಿಯ ಹುನಗುಂದ ಶಾಲೆಗೆ ಬಂದಾಗ ಗಂಗಾಧರರ ಬೋಧನಾಕ್ರಮ, ಭಾಷಾಭಿಮಾನ, ಮಾತೃಭಾಷೆಯ ಮೇಲಿನ ಪ್ರಭುತ್ವ, ಹಳಗನ್ನಡ ಮತ್ತು ಸಂಸ್ಕೃತದ ಬಗ್ಗೆ ಅವರಿಗಿರುವ ಜ್ಞಾನ, ಕೆಲಸ–ಕಾರ್ಯದಲ್ಲಿ ಶಿಸ್ತು–ಸಂಯಮ, ಹಾಗೂ ಇವರ ಒಳ್ಳೆಯ ಗುಣ–ಸ್ವಭಾವ ಕಂಡು, ಈ ಹಿಂದೆ ತಾವು ಗಂಗಾಧರ ಮಡಿವಾಳೇಶ್ವರರ ಬಗ್ಗೆ "ಅವರೊಬ್ಬ ಶ್ರೇಷ್ಠ ದರ್ಜೆಯ ಶಿಕ್ಷಕ'ರೆಂದು ಕೇಳಲ್ಪಟ್ಟಿದ್ದು ಸತ್ಯದ ಸಂಗತಿಯೆಂದು ತಿಳಿದು ಇಂಥ ಶಿಕ್ಷಕರು ಉನ್ನತ ಸ್ಥಾನದಲ್ಲಿದ್ದರೆ ಕನ್ನಡ ಭಾಷೆ ಬೆಳೆಯಲು, ಬೆಳಗಲು, ಅನುಕೂಲವಾಗುತ್ತದೆಂದು ಬಗೆದು ಬೆಳಗಾವಿಯ ನಾರ್ಮಲ್ ಸ್ಕೂಲ್ ಅಂದರೆ ಟ್ರೇನಿಂಗ್ ಕಾಲೇಜಿಗೆ ಅಧ್ಯಾಪಕರಾಗಿ ಕೆಲಸ ಮಾಡಲು ಸಮರ್ಥರೆಂದು ಸರಕಾರಕ್ಕೆ ಶಿಫಾರಸ್ಸು ಮಾಡಿದರು.[೨೧] ಇಂಥ ವಿದ್ವಾಂಸರಿಂದ ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಉಪಕಾರವಾಗುತ್ತದೆಂಬ ಭರವಸೆ ಅವರಿಗಿತ್ತು.

ಅದರಂತೆ ಗಂಗಾಧರರು ೧೮೬೬ರಲ್ಲಿ ಕನ್ನಡ ಭಾಷಾಂತರ ಕಛೇರಿಯವರಿಂದ ಬೆಳಗಾವಿಯ ನಾರ್ಮಲ್ ಸ್ಕೂಲಿಗೆ ಮೂರನೆಯ ಸಹಾಯಕ ಅಧ್ಯಾಪಕರೆಂದು ಬಡ್ತಿ ಪಡೆದು ಬೆಳಗಾವಿಯಲ್ಲಿದ್ದ ಶಿಕ್ಷಣ ಖಾತೆಗೆ ಸಂಬಂಧಿಸಿದ ಕನ್ನಡ ಭಾಷಾಂತರ ಸಂಸ್ಥೆಗೆ ಕನ್ನಡ ಭಾಷಾಂತರಕಾರರಾಗಿ ನೇಮಕಗೊಂಡರು. ಈ ಹುದ್ದೆ ಟ್ರೈನಿಂಗ್ ಸ್ಕೂಲಿನ ಉಪಪ್ರಾಚಾರ್ಯ ಸ್ಥಾನಕ್ಕೆ ಸಮವಾಗಿತ್ತು.

"ಈ ಸಂಸ್ಥೆಯಲ್ಲಿ ವೆಂಕಟ ರಂಗೋಕಟ್ಟಿಯವರು ಮುಖ್ಯ ಭಾಷಾಂತರಕಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರ ಜೊತೆಗೆ ಗಂಗಾಧರರು ಭಾಷಾಂತರ ಕಾರ್ಯದಲ್ಲಿ ತೊಡಗಿಸಿಕೊಂಡರು. ಇವರು ರಸೆಲ್ ಆಂಗ್ಲಾಧಿಕಾರಿಗಳ ಪ್ರೋತ್ಸಾಹ ಮತ್ತು ಮಾರ್ಗದರ್ಶನದಲ್ಲಿ ಕನ್ನಡ ವಾಚನದ ಪುಸ್ತಕಗಳನ್ನು ಹೊರತಂದರು. ಈ ಒಂದು ಕಾರ್ಯವು ಮುಂದೆ ಗಂಗಾಧರರಿಗೆ ಸಟೀಕಿನ ಶಬ್ದಕೋಶವನ್ನು ತಯಾರಿಸುವಲ್ಲಿ ಸಹಾಯಕವಾಯಿತು. ಅದರಂತೆ ಗಂಗಾಧರ ಮಡಿವಾಳೇಶ್ವರರು ತುಂಬಾ ಪ್ರಾಂಜಲ ಮನಸ್ಸಿನಿಂದ ಈ ಕೋಶ ರಚನಾ ಕಾರ್ಯದಲ್ಲಿ ತೊಡಗಿಸಿಕೊಂಡರು. ಇವರ ಈ ಪ್ರಯತ್ನದಿಂದ ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಮಹದುಪಕಾರವಾಯಿತು.

"ಕನ್ನಡದಲ್ಲಿ ನಿಘಂಟುಗಳ ಪರಂಪರೆಯೇ ಇದೆ. ರನ್ನ ಕವಿಯ 'ರನ್ನಕಂದ' ಎಂಬ ನಿಘಂಟುವಿನಿಂದ ಹಿಡಿದು ನಾಗವರ್ಮನ ಅಭಿದಾನ ವಸ್ತುಕೋಶದವರೆಗೆ ಮುಂದುವರೆದಂತೆ ಧಾತು ಪ್ರಕರಣ, ಮಂಗರಾಜ ನಿಘಂಟು, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ ಇತ್ಯಾದಿ ನಿಘಂಟುಗಳು ಸಾಲುಸಾಲಾಗಿ ಕಂಡುಬಂದರೂ ಈ ಕೋಶಗಳೆಲ್ಲ ಪ್ರಧಾನವಾಗಿ ಸಂಸ್ಕೃತ ಶಬ್ದಗಳಿಗೆ ಕನ್ನಡ ಅರ್ಥ ಸೂಚಿಸುವ ಆಶಯ ಹೊಂದಿರುವಂಥವು. ಸಮಾನಾರ್ಥ ಶಬ್ದ ಮತ್ತು ರೂಪಗಳನ್ನು ಕೊಡುವುದಕ್ಕೆ ಸೀಮಿತವಾಗಿದ್ದವು. ಹೊಸಕಾಲದ ಅಗತ್ಯಗಳನ್ನು ಪೂರೈಸುವಂಥ ಕನ್ನಡ ನಿಘಂಟುವಿನ ಅಗತ್ಯ ಹಿಂದಿನ ಓದುಗರಿಗಿತ್ತು.[೨೨] ಹಾಗೂ ಆ ಕಾಲದ ವಿಶೇಷ ಪರಿಕಲ್ಪನೆಗಳಿಗೆ ಸಂಗತವಾದ ಅಭಿವ್ಯಕ್ತಿಯನ್ನು ಕೊಡಲು ಆ ಮೂಲಕ ಕನ್ನಡದ ಶಬ್ದಭಂಡಾರವನ್ನು ವಿಸ್ತರಿಸುವ ಅಗತ್ಯವಿತ್ತು.

ಕನ್ನಡ ಭಾಷೆಯಲ್ಲಿ ಕನ್ನಡದ್ದೇ ಆದ ಏಕ ಭಾಷಾಕೋಶವನ್ನು ರಚಿಸಿ ಕನ್ನಡ ಸಾಹಿತ್ಯ ಅರುಣೋದಯ ಕಾಲದ ಮೊಟ್ಟಮೊದಲ ಏಕಭಾಷಾಕೋಶಕಾರರಾಗಿ ಕಂಡುಬರುವವರು ಗಂಗಾಧರ ಮಡಿವಾಳೇಶ್ವರ ತುರಮರಿಯವರು. ಇವರು ತಮ್ಮ ಅಥಣಿಯ ಗುರುಗಳಿಂದ ಪಡೆದ ಸಂಸ್ಕೃತ ಹಾಗೂ ಹಳಗನ್ನಡ ಸಾಹಿತ್ಯದ ಆಳವಾದ ಜ್ಞಾನ, ಪಾಂಡಿತ್ಯ ಹಾಗೂ ತಮ್ಮ ಅನುಭವದಿಂದ ಈ 'ಸಟೀಕಿನ ಶಬ್ದಮಂಜರಿ'ಯನ್ನು ರಚಿಸಿ ಕನ್ನಡ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಿದ ಹೆಗ್ಗಳಿಕೆಗೆ ಇವರು ಭಾಜನರಾಗಿದ್ದಾರೆ.

ಯಾವುದೇ ಒಂದು ಭಾಷೆ ಪ್ರವರ್ಧಮಾನಕ್ಕೆ ಬರಲು ಆ ಭಾಷೆಯಲ್ಲಿ ನಿಘಂಟು ರಚನೆಯ ಅವಶ್ಯಕತೆ ಪ್ರಮುಖವಾಗಿರುತ್ತದೆ. ಕನ್ನಡ ಸಾಹಿತ್ಯ ಲೋಕಕ್ಕೆ ಇಂತಹ ನಿಘಂಟುವಿನ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಮನಗಂಡ ಗಂಗಾಧರರು ಏಕಾಂಗಿಯಾಗಿ ನಿಘಂಟು ರಚನೆಯಲ್ಲಿ ತೊಡಗಿದರು. "ಪಾಠ ಪ್ರವಚನಗಳನ್ನು ನೀಡುತ್ತಿದ್ದ ಇವರಿಗೆ ಶಬ್ದಾರ್ಥ ನಿರ್ಣಯ ಸಹಜವಾಗಿಯೇ ಸಿದ್ಧಿಸಿತು. ಹಾಗಾಗಿ ಕೋಶ ರಚನೆಗೆ ಅಲ್ಲಿಂದಲೇ ಪ್ರಚೋದನೆ ದೊರೆತಿರಬೇಕು.[೨೩] ತುರಮರಿಯವರು ತಮಗೆ ದೊರೆತ ಪ್ರೇರಣೆಯ ಸಂಗತಿಯನ್ನು ಕೃತಿಯ ಮೊದಲಲ್ಲಿ ವಿವರಿಸಿದ್ದಾರೆ.

"ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಶಬರ ಶಂಕರ ವಿಳಾಸ, ಜಯಮಿನಿ ಮುಂತಾದ ಕನ್ನಡ ಪ್ರಾಕ್ಕಾವ್ಯಗಳನ್ನು ಕಲಿಯುವವರಿಗೆ ಸಂಸ್ಕೃತ ಕೋಶಗಳೂ, ಕನ್ನಡ ಕೋಶಗಳೂ ಬಹುಪ್ರಯೋಜನ ವಾದವುಗಳು. ಈ ಕೋಶಗಳು ಪದ್ಯಾತ್ಮಕ ರೂಪದಿಂದಿರುತ್ತವೆ. ಕಾವ್ಯಗಳನ್ನು ಕಲಿಯುವವರು ಇವುಗಳನ್ನು 'ರೂ' ಹಾಕಿ ಪಾಠ ಮಾಡುತ್ತಾರೆ. ಆದರೂ ಬರೇ ಬಾಯಪಾಠವಾಗಿ ಅವುಗಳೊಳಗಿನ ಯಾವತ್ತು ಶಬ್ದಗಳ ಅರ್ಥ ತಿಳಿದು ಸಮಯಕ್ಕೆ ನೆನಪಾಗುವುದು ಕಷ್ಟವಾಗುತ್ತದೆ. ಮೊದಲು ಪಾಠ ಮಾಡುವುದೇ ಪ್ರಯಾಸ. ಪಾಠವಾದಾಗ್ಯೂ ಅವುಗಳೊಳಗಿನ ಗೂಢ ಶಬ್ದಗಳ ಅರ್ಥವು ಟೀಕಾನೋಡದೆ ಪಂಡಿತರಿಗೆ ಸಹ ತಿಳಿಯುವುದು ಅಸಾಧ್ಯ. ಇನ್ನು ಹೊಸದಾಗಿ ಕಲಿಯುವವರಿಗೆ ತಿಳಿಯುವುದು ದುರ್ಲಭವೇ ಸರಿ. ಈ ತೊಂದರೆಗಳು ದೂರಾಗುವಂತೆ ಒಳ್ಳೆ ಪ್ರಸಿದ್ಧವಾದ ಕೋಶಗಳೊಳಗಿನ ಉಪಯೋಗವುಳ್ಳ ಹಳೆಗನ್ನಡ ಶಬ್ದಗಳನ್ನು ಸಂಸ್ಕೃತ ಶಬ್ದಗಳನ್ನೂ ಅಕ್ಷರಾನುಕ್ರಮವಾಗಿ ಕೂಡಿಸಿ, ಸುಲಭವಾಗಿ ತಿಳಿಯುವ ಹಾಗೆ ಕನ್ನಡದಿಂದ ಅರ್ಥ ಬರೆದು, ಒಂದು ಕೋಶವನ್ನು ಮಾಡಬೇಕೆಂದು ವಿದ್ಯಾಖಾತೆಯೊಳಗಿನ ಅಧಿಕಾರಿಗಳು ನನಗೆ ಸೂಚಿಸಿದ್ದರಿಂದ, ಇವರ ಸೂಚನೆಯನ್ನು ನಾನು ಆದರಪೂರ್ವಕವಾಗಿ ಶಿರಸಾ ಮಾನ್ಯ ಮಾಡಿಕೊಂಡು, ಅಮರಕೋಶ, ಕರ್ನಾಟಕ ಶಬ್ದ ಮಂಜರಿ, ಕಬ್ಬಿಗರ ಕೈಪಿಡಿ, ಪದ್ಯ ನಾನಾರ್ಥ ಎಂಬ ಸರ್ವಮಾನ್ಯವಾದ ಪ್ರಾಚೀನ ಕೋಶಗಳೊಳಗಿನ ಉಪಯೋಗವುಳ್ಳ ಶಬ್ದಗಳನ್ನು ತಕ್ಕೊಂಡು, ಈ ಶಬ್ದಮಂಜರಿ ಎಂಬ ಕೋಶವನ್ನು ಮಾಡಿ ವಿದ್ಯಾಖಾತೆಯ ಅಧಿಕಾರಿಗಳಾದ ಮೆ॥ರಸೆಲ ಸಾಹೇಬ ಬಹಾದೂರವರಿಗೆ ಬಹುನಮ್ರತೆಯಿಂದ ಕಾಣಿಕೆ ಕೊಟ್ಟಿದ್ದೇನೆ."[೨೪]

ಹೀಗೆ ವಿದ್ಯಾ ಇಲಾಖೆಯ ಅಧಿಕಾರಿಗಳಿಂದ ಒಪ್ಪಿತವಾದ ಶಬ್ದಕೋಶದ ರಚನೆ ೧೮೬೯ರಲ್ಲಿ ಆರಂಭಗೊಂಡು ೧೮೭೧ರಲ್ಲಿ ಸಿದ್ಧಗೊಂಡಿತು. ಇದು ೫೮೬ ಪುಟಗಳನ್ನೊಳಗೊಂಡ ಪಾಶ್ಚಾತ್ಯ ಪದ್ಧತಿಯಿಂದ ರಚಿತವಾದ ಮೊದಲ ಕನ್ನಡಕೋಶವಾಗಿದೆ. ಈ ಒಂದು ಸಂದರ್ಭದಲ್ಲಿ ಧಾರವಾಡ ಮತ್ತು ಬೆಳಗಾವಿಯಲ್ಲಿ ಒಳ್ಳೆಯ ಗುಣಮಟ್ಟದ ಮುದ್ರಣಾಲಯಗಳಿರಲಿಲ್ಲ. ಆದ್ದರಿಂದ ತಾವೇ ತಯಾರಿಸಿದ ಹಸ್ತಪ್ರತಿಯನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಹೊಳೆಕಟ್ಟು ನರಸಿಂಹಯ್ಯನವರ ವಿಚಾರದರ್ಪಣ ಛಾಪಾಖಾನೆಯಲ್ಲಿ ಮುದ್ರಿಸಿ ಪ್ರಕಟಿಸಿದರು. ಹಾಗೂ ಇದರ ಒಂದು ಪ್ರತಿಯನ್ನು ಜೆ.ಎಫ್.ಫ್ಲೀಟರಿಗೆ ಕೊಟ್ಟಾಗ ಅದಕ್ಕೆ ತಮ್ಮ ಸಹಿಹಾಕಿ ತಮ್ಮಲ್ಲೆ ಇಟ್ಟುಕೊಂಡರು. ಫ್ಲೀಟರ ಮರಣಾನಂತರ ಈ ಪ್ರತಿಯನ್ನು ಬ್ರಿಟೀಷ್ ಲೈಬ್ರರಿಗೆ ಕೊಡಲಾಯಿತು. ಆಗ ಈ ಕೃತಿಯ ಬೆಲೆ ಕೇವಲ ನಾಲ್ಕು ರೂಪಾಯಿಗಳು ಮಾತ್ರವಾಗಿದ್ದು ಮುಂಬಯಿ ಸರಕಾರ ಈ ಕೋಶದ ಪ್ರಕಟಣೆಗಾಗಿ ೪೦೦೦ ರೂಗಳನ್ನು ಸಹಾಯಧನವನ್ನಾಗಿ ಕೊಟ್ಟಿತು. ಈ ಕೋಶದ ಪ್ರತಿಗಳು ಕೆಲವೇ ದಿನಗಳಲ್ಲಿ ಓದುಗರಿಂದ ಖರೀದಿಸಲ್ಪಟ್ಟು ಖಾಲಿಯಾದವು. ಆಗ ಮರುಮುದ್ರಣದ ಅವಶ್ಯಕತೆ ಕಂಡುಬಂದದ್ದರಿಂದ ಆಗಿನ ಕಾಲದ ಸುಪ್ರಸಿದ್ಧ ಪುಸ್ತಕ ವ್ಯಾಪಾರಿಗಳಾದ ಧಾರವಾಡದ ಅನಾಡ ಚೆನ್ನಬಸಪ್ಪನವರು ೧೮೭೭ರಲ್ಲಿ ಮರು ಮುದ್ರಣ ಮಾಡಿದರು. ಈ

ಎರಡನೆಯ ಆವೃತ್ತಿಯಲ್ಲಿ ಅನಾಡರು ಸಂಸ್ಕೃತ ಶಬ್ದಗಳ ಮೂಲರೂಪವನ್ನು ಸಂಸ್ಕೃತ ಪಂಡಿತರಿಂದ ತಿಳಿದುಕೊಂಡು ಅರ್ಥ ಸಹಿತವಾಗಿ ವಿವರಿಸುವ ಮೂಲಕ ಅಲ್ಪಸ್ವಲ್ಪ ಸುಧಾರಣೆಯನ್ನು ತಂದಿದ್ದಾರೆ. ಹಾಗೂ ಈ ಆವೃತ್ತಿಯ ಪ್ರಸ್ತಾವನೆಯಲ್ಲಿ "ಹಳಗನ್ನಡ ಹೊಸಗನ್ನಡ ಕೂಡಿರುವುದರಿಂದ ಆ ಗ್ರಂಥಗಳಲ್ಲಿರ್ಪ ಭಾವಗಳನರಿಯದೆ ಎಷ್ಟೋ ಜನರು ಕಷ್ಟ ಪಡುವುದನ್ನು ಮತ್ತು ನಮ್ಮ ದೇಶದ ಶಾಲೆಯ ಮಾಸ್ತರರಿಗೆ ಬೀಳುವ ತೊಂದರೆಯನ್ನು ಮನೆಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಅಡಚಣೆಯನ್ನು ಕಂಡು ವೇದಶಾಸ್ತ್ರ ಸಂಪನ್ನರಾಗಿದ್ದ ಕೈ.ವಾ.ಗಂಗಾಧರಯ್ಯನವರು ಬಹು ಶ್ರಮಪಟ್ಟು ಈ ಯಾವತ್ತೂ ತೊಂದರೆಗಳನ್ನು ಮಾರ್ಪಡಿಸುವುದಕ್ಕೆ ಯೋಗ್ಯವಾದ ಒಂದು ಶಬ್ದಮಂಜರಿಯನ್ನು ರಚಿಸಿದರು.-[೨೫] ಎಂದು ಅನಾಡರು ಗಂಗಾಧರಯ್ಯನವರನ್ನು ಕುರಿತು ಮೆಚ್ಚುಗೆಯ ಮಾತುಗಳನ್ನಾಡಿರುವುದು ಕಂಡುಬರುತ್ತದೆ.

ತುರಮರಿ ಅವರ 'ಸಟೀಕು ಶಬ್ದಮಂಜರಿ'ಯ ಶೀರ್ಷಿಕೆಯನ್ನು ನೋಡಿದರೆ ಶಬ್ದಮಂಜರಿ ಎಂದರೆ ನಿಘಂಟು ಎಂದರ್ಥ. ಸಟೀಕು ಎಂದರೆ ನಿಘಂಟುವಿಗೆ ಇವರು ಟೀಕು ಬರೆದಿದ್ದಾರೆಂಬ ಅರ್ಥ ಹೊರಡುತ್ತದೆ. ಆದರೆ ಪದಗಳಿಗೆ ಅರ್ಥ ಕೊಡುವುದು, ಇಲ್ಲವೇ ಪರ್ಯಾಯ ಪದ ನೀಡುವುದು ಶಬ್ದಕೋಶದ ಉದ್ದೇಶವಾಗಿದೆ. ಪ್ರಾಚೀನ ಟೀಕುವಿನ ಸ್ವರೂಪಗಳಲ್ಲಿ 'ಪ್ರತಿ ಪದಾರ್ಥ' ಟೀಕು ಎಂಬುದೂ ಒಂದು ಹೀಗಾಗಿ ಪ್ರತಿಪದಗಳಿಗೆ ಅರ್ಥ ನೀಡುವ ಶಬ್ದಮಂಜರಿಗೆ ತುರಮರಿ ಅವರು 'ಸಟೀಕು ಶಬ್ದಮಂಜರಿ' ಎಂದು ಕರೆದಂತಿದೆ. ಅದೇನೇ ಇದ್ದರೂ ೧೮೬೯ರಲ್ಲಿ ರಚನೆಯಾದ ಈ ಕೋಶವನ್ನು ಗಮನಿಸಿದರೆ ಹಳಗನ್ನಡ ಕಾವ್ಯಗಳ ಪದಗಳನ್ನು ಆಯ್ದು ಅವುಗಳಿಗೆ ಆ ಕಾಲದ ಸಾಂದರ್ಭಿಕ ಅರ್ಥವನ್ನು ನೀಡಿರುವ ಗಂಗಾಧರ ಮಡಿವಾಳೇಶ್ವರರ ಪ್ರಾಚೀನ ಸಾಹಿತ್ಯದ ಓದಿನ ಜ್ಞಾನ ಮನವರಿಕೆಯಾಗುತ್ತದೆ. ಕನ್ನಡ ಶಬ್ದಕೋಶಗಳಲ್ಲಿ ಬಹುಕಾಲ ಮಾದರಿ ಕೋಶವಾಗಿ ನಿಲ್ಲಬಲ್ಲ 'ಸಟೀಕು ಶಬ್ದಮಂಜರಿಗೆ" ವಿಶಿಷ್ಟ ಸ್ಥಾನವಿದೆಯೆಂದು ಹೇಳಬಹುದು. ನಿದರ್ಶನಕ್ಕಾಗಿ ಕೆಲವು ಪದಗಳನ್ನು ಇಲ್ಲಿ ನೋಡಬಹುದು.

ಅಂಗೋಪಕರಣ, ಸಂ(ನಾ), ಅಂಗ+ಉಪಕರಣ, ಕೈಕಾಲು ಮುಂತಾದ ಅವಯವಗಳು, ೨ ಅಂಗಿ ಪಾವಡಗಳು

ಅಂಚೆದೇರ, ಹ(ನಾ), ಅಂಚೆ+ದೇರ, ಹಂಸಪಕ್ಷಿಯನ್ನು ಏರಿದವ, ಬ್ರಹ್ಮ

ಇಂಗೋಲ್ವಿಲ್ಲ ಹ(ನಾ), ಇಂ+ಕೋಲು+ವಿಲ್ಲು, ಕಬ್ಬುಬಿಲ್ಲುಳ್ಳವ, ಕಾಮ.

ಇಂದ್ರಿಯಾರ್ಥ, ಸಂ(ನಾ), ರೂಪ, ರಸ, ಗಂಧ, ಸ್ಪರ್ಶ, ಶಬ್ಧ ಇವು ಐದು ಇಂದ್ರಿಯಗಳ ವಿಷಯಗಳು.

ಇಂಗಳಗಣ್ಣ ಹ(ನಾ), ಇಂಗಳ+ಕಣ್ಣು, ಬೆಂಕಿಯಕಣ್ಣುಳ್ಳವ, ಶಿವ,

ಈಕ್ಷಿಕೆ–ನೋಟ

ಉತ್ಸೇದ, ಸಂ(ನಾ), ಗಿಡ ಮುಂತಾದವುಗಳ ಎತ್ತರ,

೨. ಶರೀರ

ಇದನ್ನು ಹೀಗೆ ವಿನ್ಯಾಸಗೊಳಿಸಲಾಗಿದ್ದು, ಇದರಲ್ಲಿ ಸಂಸ್ಕೃತ ನಾಮಕ್ರಿಯಾ ವಿಶೇಷಣ, ಅವ್ಯಯವಗಳನ್ನು, ಹಳಗನ್ನಡ ನಾಮಕ್ರಿಯಾ ಪ್ರತ್ಯಯಾದಿ ಶಬ್ದಗಳನ್ನು ಕಾಣಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ರವೀಂದ್ರನಾಥ.ಕೆ, ಕನ್ನಡ ಟೀಕಾ ಸಾಹಿತ್ಯ, ಪುಟ, ೧.

೨. ಅದೇ, ಪುಟ, ೧.

೩. ಅದೇ ಪುಟ, ೨

೪. ಅದೇ ಪುಟ, ೫–೬

೫. ಅದೇ ಪುಟ, ೩

೬. ಅದೇ ಪುಟ, ೭

೭. ಅದೇ ಪುಟ, ೭

೮. ಅದೇ ಪುಟ, ೭

೯. ಅದೇ ಪುಟ, ೮

೧೦. ಅದೇ ಪುಟ, ೮

೧೧. ಅದೇ ಪುಟ, ೮–೯

೧೨. ಅದೇ ಪುಟ, ೯

೧೩. ಅದೇ ಪುಟ, ೧೧–೧೫

೧೪. ಅದೇ ಪುಟ, ೧೬

೧೫. ಗಂಗಾಧರ ಮಡಿವಾಳೇಶ್ವರ ತೂರ್ಮರಿ(ಸಂ), ಕವಿತಾ ಸಂಗ್ರಹವು ಪು.ಸಂ. ೧೧೬–೧೧೭.

೧೬. ರವೀಂದ್ರನಾಥ.ಕೆ, ಗಂಗಾಧರ ಮಡಿವಾಳೇಶ್ವರ ತುರಮುರಿಯವರ ಅನುವಾದಗಳು ಮತ್ತು ಟೀಕು ಸಾಹಿತ್ಯ(ಲೇಖನ), ೫.

೧೭. ಅದೇ ಪುಟ, ೫.

೧೮. ಅದೇ ಪುಟ.

೧೯. ಅಂಗಡಿ.ಎಸ್.ಎಸ್, ಕನ್ನಡ ನಿಘಂಟು ರಚನೆ, ಪು.ಸಂ. ೧-೨.

೨೦. ಅದೇ ಪುಟ, ೧-೨.

೨೧. ಬಿ.ವ್ಹಿ.ನೇಸರಿಗೆ (ಲೇ) ಗಂಗಾಧರ ಮಡಿವಾಳೇಶ್ವರ ತುರಮರಿ ಆತ್ಮಚರಿತ್ರೆ, ಪು.ಸಂ.೨೩.

೨೨. ಗುರುಪಾದ ಮರಿಗುದ್ದಿ, ಬೆಳಗಾವಿ ಜಿಲ್ಲೆಯ ವಿದ್ವತ್‌ಪರಂಪರೆ, ಪು.ಸಂ.೬.

೨೩. ಅದೇ, ಪುಟ ೬.

೨೪. ಶ್ರೀನಿವಾಸ ಹಾವನೂರ(ಸಂ), ಗಂಗಾಧರ ಮಡಿವಾಳೇಶ್ವರ ಅವರ ಸಟೀಕಿನ ಶಬ್ದಮಂಜರಿಕೋಶ, ಪು.ಸಂ.೧೧.

೨೫. ಗುರುಪಾದ ಮರಿಗುದ್ದಿ, ಬೆಳಗಾವಿ ಜಿಲ್ಲೆಯ ವಿದ್ವತ್‌ಪರಂಪರೆ, ಪು.ಸಂ.೮.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ನಾಡು ನುಡಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಮೂಲೆಗುಂಪಾಗಿದ್ದವು. ಈ ಒಂದು ಸಂದರ್ಭದಲ್ಲಿ ಕನ್ನಡವನ್ನು ಕಟ್ಟುವ ಅನೇಕ ಮಹನೀಯರು ಜನ್ಮ ತಳೆದರು. ಇಂಥವರಲ್ಲಿ ಗಂಗಾಧರ ಮಡಿವಾಳೇಶ್ವರ ತುರಮರಿಯವರು ಅಗ್ರಗಣ್ಯರು. ಇವರು ಹುಟ್ಟಿದ್ದೇ ಕನ್ನಡ ನಾಡು ನುಡಿಗಳನ್ನು ಬೆಳೆಸಲು ಎನ್ನುವಂತೆ ತಮ್ಮ ಜೀವನವನ್ನು ಕನ್ನಡ ನಾಡು ನುಡಿ ಸೇವೆಗಾಗಿ ಮುಡಿಪಾಗಿಟ್ಟಿದ್ದರು.

ತುರಮುರಿಯವರು ಅಥಣಿಯ ಮಡಿವಾಳೇಶ್ವರ ಸ್ವಾಮಿಗಳಿಂದ ಕನ್ನಡ, ಹಳಗನ್ನಡ ಸಂಸ್ಕೃತ, ಮುಂತಾದ ವಿಷಯಗಳನ್ನು ಕಲಿತ ಇವರು ಪ್ರಾರಂಭದಲ್ಲಿ 'ಗಾಂವಠಿ' ಶಾಲೆಯ ಶಿಕ್ಷಕರಾಗಿ, ಮುಖ್ಯೋಪಾಧ್ಯಾಯರಾಗಿ, ಟ್ರೈನಿಂಗ್ ಸ್ಕೂಲಿನ ಅಧ್ಯಾಪಕರಾಗಿ, ಉಪಪ್ರಾಚಾರ್ಯರಾಗಿ, ಕನ್ನಡ ಪಠ್ಯಪುಸ್ತಕ ರಚನಾಕಾರರಾಗಿ, ಪತ್ರಿಕಾ ಸಂಪಾದಕರಾಗಿ ಲೇಖಕರಾಗಿ, ವಸತಿ ನಿಲಯಪಾಲಕರಾಗಿ ಮತ್ತು ಸಮಾಜ ಸುಧಾರಕರಾಗಿ ಸತತ ೩೦ ವರ್ಷಗಳ ಕಾಲ ದುಡಿದ ಅವಿಶ್ರಾಂತ ಬದುಕು ಇವರದು.

ಕನ್ನಡ ಭಾಷೆಯನ್ನು ಸಪ್ರಮಾಣ ಭಾಷೆಯನ್ನಾಗಿ ರೂಪಿಸಲು ಕನ್ನಡ ಶಾಲೆಗಳಲ್ಲಿ ಕನ್ನಡ ಭಾಷಾ ಬೋಧನೆಗೆ ಕ್ರಮ ಕೈಗೊಂಡಿದ್ದು ಮಹತ್ವದ ವಿಷಯವಾಗಿದೆ. ಹಾಗೂ ಕನ್ನಡ ಭಾಷೆಯನ್ನು ಶುದ್ಧವಾಗಿ ಕಲಿಸಬೇಕು ಎನ್ನುವ ಇವರ ಮನೋಭಿಲಾಷೆಯನ್ನು ಪೂರೈಸಿಕೊಳ್ಳಲು ಹಳಗನ್ನಡ ಸಾಹಿತ್ಯಾಭ್ಯಾಸಕ್ಕೆ ಬೇಕಾಗುವ ಪುಸ್ತಕಗಳನ್ನು ರಚಿಸಿದರು. ಹಾಗೂ ಅನೇಕ ಉದ್ಧಾಮ ಪಂಡಿತರ ಕೃತಿಗಳನ್ನು ಅಭ್ಯಸಿಸಿ ಕನ್ನಡಕ್ಕೆ ಅನುವಾದಿಸುವ ಮೂಲಕ ಕನ್ನಡ ಸಾಹಿತ್ಯವನ್ನು ಸಾಧ್ಯಾಂತಿಕವಾಗಿ ಬೆಳೆಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನ ಮಾಡಲಾಗಿದೆ.

ಫಲಿತಗಳು:

ಪ್ರಸ್ತುತ "ಗಂಗಾಧರ ಮಡಿವಾಳೇಶ್ವರ ತುರಮರಿಯವರ ಅನುವಾದ ಮತ್ತು ಟೀಕುಗಳು" ಎಂಬ ವಿಷಯವನ್ನು ಕುರಿತು ಕಿರು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು ಪ್ರಸ್ತುತ ಈ ಕಿರು ಸಂಶೋಧನಾ ಪ್ರಬಂಧದಲ್ಲಿ ಕಂಡುಕೊಂಡ ಫಲಿತಗಳನ್ನು ಹೀಗೆ ಸಂಗ್ರಹಿಸಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡದ ಅಸ್ಮಿತೆಯನ್ನು ಉಳಿಸಲು ಗಂಗಾಧರ ಮಡಿವಾಳೇಶ್ವರರು ಪ್ರಸಿದ್ಧವಾದ ಕವಿಗಳ ಸಂಸ್ಕೃತ ಮತ್ತು ಹಳಗನ್ನಡ ಕಾವ್ಯಗಳನ್ನು ಸರಳವಾದ ಕನ್ನಡಕ್ಕೆ ಅನುವಾದಿಸುವುದು ಮತ್ತು ಟೀಕುಗಳನ್ನು ವ್ಯಾಖ್ಯಾನಗಳನ್ನು ಬರೆದು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸುವುದು ಪ್ರಮುಖ ಅಂಶವಾಗಿ ಕಂಡುಬರುತ್ತದೆ.

ಗಂಗಾಧರಯ್ಯನವರದು ಪಾಂಡಿತ್ಯ ಪೂರ್ಣವಾದ, ಪರಿಪೂರ್ಣತೆಯಿಂದ ಕೂಡಿದ ವ್ಯಕ್ತಿತ್ವ. ಇವರು ಪತ್ರಿಕಾ ಸಂಪಾದನೆಯಲ್ಲಿಯೂ ಸಹ ಲೇಖಕರಾಗಿ, ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸಲು ಅನೇಕ ಉತ್ಕೃಷ್ಟವಾದ ಲೇಖನಗಳನ್ನು ಬರೆದು 'ಮಠ ಪತ್ರಿಕೆ'ಗೆ ಜೀವ ತುಂಬಿದವರು ಇವರೇ.

ಬಾಣನ ಸಂಸ್ಕೃತ ಕಾದಂಬರಿಯನ್ನು ಗಂಗಾಧರರು ಅಚ್ಚಗನ್ನಡ ದೇಸೀ ಶೈಲಿಗೆ ಅನುವಾದಿಸಿದ್ದು, ಇದು ಗಂಗಾಧರರ ಸ್ವರಚಿತ ಕೃತಿಯೇ ಎನ್ನುವಷ್ಟು ದೇಸೀಯ ಸೊಗಡಿನಿಂದ ಕೂಡಿದೆ.

ಶೈಕ್ಷಣಿಕ ಕ್ಷೇತ್ರಕ್ಕೆ ಹಲವು ಉಪಯುಕ್ತ ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಕಾವ್ಯ ಸಂಗ್ರಹ, ಕವಿತಾ ಪದ್ಧತಿ, ಭಾಷಾದರ್ಪಣ ಮತ್ತು ಪಠ್ಯ ಪುಸ್ತಕಗಳನ್ನು ರಚಿಸುವುದರ ಮೂಲಕ ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಶುದ್ಧ ಕನ್ನಡ ಭಾಷಾ ಬಳಕೆಗೆ ಪ್ರೇರೇಪಿಸಿರುವುದು ಮಹತ್ವದ ವಿಷಯವಾಗಿದೆ.

ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು ಹಲವರಿದ್ದಾರೆ. ಅವರನ್ನು ಕುರಿತು ಮಾಹಿತಿ ಪ್ರಧಾನ ಕೃತಿಗಳು ಬಂದುದು ತುಂಬಾ ವಿರಳ. ಹೊಸಗನ್ನಡ ಸಾಹಿತ್ಯದ ಉದಯ ಕಾಲ, ಹೊಸಗನ್ನಡ ಅರುಣೋದಯ, ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಚರ್ಚಿತವಾಗಿರುವ ಈ ಮಹನೀಯರ ಕನ್ನಡ ಪರ ಕೆಲಸಗಳು ಒಂದೊಂದು ಸ್ವತಂತ್ರ ಅಧ್ಯಯನ ಆಗುವಷ್ಟು ಮಹತ್ವ ಪಡೆದಿವೆ. ಈ ಉದ್ದೇಶದಿಂದ ಪ್ರಾತಃಸ್ಮರಣೀಯರಾದ ಗಂಗಾಧರ ಮಡಿವಾಳೇಶ್ವರ ತುರಮರಿ ಅವರು ಬರೆದ ಅನುವಾದ–ಟೀಕೆಗಳನ್ನು ಈ ಕಿರು ಪ್ರಬಂಧದಲ್ಲಿ ನಿರ್ವಚಿಸಲಾಗಿದೆ. ಕನ್ನಡ ಭಾಷೆಯನ್ನು ಸಪ್ರಮಾಣ ಭಾಷೆಯನ್ನಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಶ್ರೀ ತುರಮರಿ ಅವರು ಬರೆದ ಅನುವಾದ ಹಾಗೂ ಟೀಕುಗಳು ಮಹತ್ವದ ಭಾಷಿಕ ಅಸ್ಮಿತಿಯ ಆಕರ ಕೋಶಗಳಾಗಿವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಅನುಬಂಧಗಳು


೧. ತುರಮರಿ ಸಂಪಾದಕತ್ವದ ಶಾಲಾ ಪತ್ರಿಕೆ

೨. ಶಬ್ದಮಣಿದರ್ಪಣ ಟೀಕು

೩. ಕವಿತಾ ಸಂಗ್ರಹ ಮುಖಪುಟ


೪. ತುರಮರಿ ಅವರ ಕೈ ಬರಹ

೫. ಪರಾಮರ್ಶನ ಗ್ರಂಥಗಳು


CANARESE.

SCHOOL PAPER

ತುರಮರಿಯವರು ಸಂಪಾದಿಸುತ್ತಿದ್ದ ಶಾಲಾ ಪತ್ರಿಕೆಯ ಮುಖಪುಟ



ತುರಮರಿಯವರು ಬರೆದ ಶಬ್ದಮಣಿ ದರ್ಪಣ ಟೀಕು (ಶಾಲಾ ಪತ್ರಿಕೆ)

ಕವಿತಾಸಂಗ್ರಹವು.

ಬೆಳಗಾವಿಯ ಟ್ರೇನಿಂಗ ಕಾಲೇಜದ ಅ. ವ್ಹಾ. ಪ್ರಿನ್ಸಿಪಾಲರಾದ

ಗಂಗಾಧರ ಮಡಿವಾಳೇಶ್ವರ ತುರಮರೀ

ಇವರಿಂದ

ಪಲವು ಪ್ರಖ್ಯಾತವಾದ ಪ್ರಾಚೀನ

ಗ್ರಂಥಗಳಿಂದ ಬಹು ಶ್ರಮ ಪಟ್ಟು

ಆರಿಸಿ ತೆಗೆಯಲ್ಪಟ್ಟ

ರಸಭರಿತವಾದ ಭಾಗಗಳನ್ನು

ಕೂಡಿಸಿ

ಹೊಸ ಟಿಪ್ಪಣಿಗಳೊಂದಿಗೆ ಪ್ರಸಿದ್ಧಿಸಲ್ಪಟ್ಟದ್ದು.

(ಸನ್ ೧೮೬೭ ನೇ ವರ್ಷದ ಆಕ್ಟ ೨೫ ರಂತೆ ರಜಿಸ್ಟರ

ಮಾಡಲ್ಪಟ್ಟದ್ದು.)


(ಈ ಮೊದಲನೇ ಆವೃತ್ತಿಯು ಮಾಲಕೀ ಬೆಳಗಾವೀ ಸಮಾಚಾರದ

ಮಾಲಕರಿಗೆ ಕೊಡಲ್ಪಟ್ಟದೆ.)

ಬೆಳಗಾವೀ ಸಮಾಚಾರದ ಅಚ್ಚುಕೂಟದಲ್ಲಿ ಮುದ್ರಿಸಲ್ಪಟ್ಟಿತು.

೧೮೭೪

ತುರಮರಿಯವರು ಸಂಗ್ರಹಿಸಿದ ಹಳೆಗನ್ನಡ ಕವಿತಾ ಸಂಗ್ರಹದ ಮುಖಪುಟ



ತುರಮರಿಯವರ ಕೈ ಬರಹ

೫. ಪರಾಮರ್ಶನ ಗ್ರಂಥಗಳು:

ಕೃತಿಗಳು:

* ಅಂಗಡಿ.ಎಸ್.ಎಸ್, ಕನ್ನಡ ನಿಘಂಟು ರಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.
* ಉಷಾ.ಎಂ, ಭಾಷಾಂತರ ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.
* ಎನ್ಕೆ ಕುಲಕರ್ಣಿ, ಗಂಗಾಧರ ಮಡಿವಾಳೇಶ್ವರ ತುರಮರಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೮೬.
* ಗಂಗಾಧರ ಮಡಿವಾಳೇಶ್ವರ ತುರಮರಿ(ಅನು) ಬಾಣ ಕಾದಂಬರಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೧೯೭೭.
* ಗಂಗಾಧರ ಮಡಿವಾಳೇಶ್ವರ ತುರಮರಿ(ಸಂ) ಕವಿತಾ ಸಂಗ್ರಹವು, ಬೆಳಗಾವಿ ಸಮಾಚಾರ ಪ್ರೆಸ್, ಬೆಳಗಾವಿ, ೧೮೭೪.
* ಗಂಗಾಧರ ಮಡಿವಾಳೇಶ್ವರ ತುರಮರಿ(ಅನು) ಬಾಣ ಕಾದಂಬರಿ, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.
* ಗುರುಪಾದ ಮರಿಗುದ್ದಿ(ಸಂ) ಬೆಳಗಾವಿ ಜಿಲ್ಲೆಯ ವಿದ್ವತ್ ಪರಂಪರೆ, ಲಿಂಗಾಯತ ಅಧ್ಯಯನ ಅಕಾಡೆಮಿ, ಬೆಳಗಾವಿ, ೨೦೦೭.
* ಧಾರವಾಡಕರ ರಾ.ಯ, ಹೊಸಗನ್ನಡ ಸಾಹಿತ್ಯದ ಉದಯಕಾಲ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೩
* ನೇಸರಗಿ.ಬಿ.ವ್ಹಿ, ಗಂಗಾಧರ ಮಡಿವಾಳೇಶ್ವರ ತುರಮರಿ ಆತ್ಮಚರಿತ್ರೆ, ಬಸವ ಪ್ರಕಾಶನ ತುರಮರಿ, ಬೆಳಗಾವಿ, ೨೦೦೭.
* ಬೆಳಗಲಿ.ದು.ನಿಂ, ಗಂಗಾಧರ ಮಡಿವಾಳೇಶ್ವರ ತುರಮರಿ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೫.
* ಮೋಹನ ಕುಂಟಾರ್(ಸಂ), ಅನುವಾದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೧೫.

* ಮೋಹನ ನಾಗಮ್ಮನವರ(ಸಂ), ಕನ್ನಡ ದೀಪಗಳು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೧೬.

* ರವೀಂದ್ರನಾಥ.ಕೆ, ಕನ್ನಡ ಟೀಕಾ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

* ಶ್ರೀನಿವಾಸ ಹಾವನೂರ, ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಸಟೀಕಿನ ಶಬ್ದಮಂಜರಿಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೮೬.

* ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧.

* ಸಿ.ಪಿ.ಕೆ, ನಾಗವರ್ಮನ ಕರ್ನಾಟಕ ಕಾದಂಬರಿ, ಚೇತನಾ ಬುಕ್ ಹೌಸ್, ಮೈಸೂರು, ೨೦೦೨.

೨. ಪತ್ರಿಕೆಗಳು

* ಶಾಲಾ ಪತ್ರಿಕೆ ಸಂಚಿಕೆಗಳು, ಬೆಳಗಾವಿ ನಾರ್ಮಲ್ ಸ್ಕೂಲ್, ೧೮೬೫.

೩. ಲೇಖನಗಳು:

* ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಅನುವಾದ ಮತ್ತು ಟೀಕು ಸಾಹಿತ್ಯ, ಡಾ. ಕೆ. ರವೀಂದ್ರನಾಥ, (ಕೃತಿ: ಉತ್ತರ ಕರ್ನಾಟಕದಲ್ಲಿ ಕನ್ನಡ ಕಟ್ಟಿದ ಮಹನೀಯರು, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೬.)


ಕನ್ನಡ ವಿಶ್ವವಿದ್ಯಾಲಯ
ಮಾತೆಂಬುದು ಜ್ಯೋತಿರ್ಲಿಂಗ